

# ಅಖಿಲ ಭಾರತ ಪತ್ರಿಕೆ

## ಮೇ 2021

# ಮಾನವೀಯ ಸಂಬಂಧಗಳು

ಬೆಲೆ : 15/-



## ಋಗ್ವೇದದ ಮೊದಲ ಋಕ್

ಹೋಮದಲಿ ಜ್ವಾಲೆ ಯಾಗದಲಿ ಲೀಲೆ ಯಜ್ಞದಲಿ ಬ್ರಹ್ಮ ಛಂದ
ಸತ್ಯಕಿವ ಶ್ರಾವ್ಯ ಸಂತ್ಯಕಿವ ಸ್ಪರ್ಶ ಋತಕಿವನು ದರ್ಶ ಸ್ಪಂದ
ಪರಿಪೂರ್ಣವಿದುವು ಯೋಗ–ಸಂಯೋಗ ಚಿದ್ಘನದ ಸಲಿಲ–ತೋಷ
ಕಾಲಕಾಲಾತೀತ ಕಾಲದಾ ಮಿಡಿತ ಪೂರ್ಣತೆಯು ನಿತ್ಯ ಶೇಷ
ಸಪ್ತ ತತ್ತ್ವದಲಿ ಬ್ರಹ್ಮಾಂಡಕೆಲ್ಲ ಸೃಷ್ಟಾರ ಮೂಲವಾಗಿ
ಉತ್ಕ್ರಾಂತಿಬಿಂದು ಉದಯದಲಿ ಇಂದು ಪ್ರಜ್ವಲನದಾತ್ಮವಾಗಿ
ಪ್ರಾಣಕ್ಕೆ ಪ್ರಾಣ ಆತ್ಮಕ್ಕೆ ಆತ್ಮ ಶುದ್ಧಿಗಿವ ಪರಮ ಶುದ್ಧಿ
ಜೀವಕಿವ ತೇಜ ರಸದುಂಬಿದೋಜ ಕ್ರಿಯೆಗಿವನು ನಿಯತಿ ಸಿದ್ಧಿ

**– ಪುಟ್ಟು ಕುಲಕರ್ಣಿ**

Photo: Imaging Savitri

**ಅಖಿಲ ಭಾರತ ಪತ್ರಿಕೆ**
**ಮೇ 2021**

ಸಂಪುಟ: 31 ಸಂಚಿಕೆ: 05

**ಪರಿವಿಡಿ**

# ಮಾನವೀಯ ಸಂಬಂಧಗಳು

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ನಮ್ಮ ಅತ್ಯುತ್ತಮ ಮಿತ್ರ** 6
ಅನು: ಶ್ರೀ ವೀರೇಂದ್ರ ಸಿಂಪಿ

**ಮಾನವ ಮಮತೆ ವಿಶ್ವಾಸಾರ್ಹವಾದದ್ದಲ್ಲ** 13
ಅನು: ಶ್ರೀ ಪುರುಷೋತ್ತಮ ಗಲಗಲಿ

**ಉಪಶಮನ ಮಾಡುವದಕ್ಕೆ ಅತಿ ಶಾಂತವಾದ ವಿಧಿ** 19
ಅನು: ಡಾ॥ ಶ್ರೀಮತಿ ಮಧುಮತಿ ಕುಲಕರ್ಣಿ

**ಸಂಬಂಧಕ್ಕೊಂದು ತೊಸ ತಳಹದಿ** 25
ಅನು: ಡಾ॥ ಕೆ.ಎಸ್. ಆಮೂರ

**ದಿವ್ಯ ಜೀವನ** 36
– ಜಾನ್ವಿ

**ಭವಾನೀ ಭಾರತೀ (ಪದ್ಯಾನುವಾದ–4)** 44
ಅನು: ಪುಟ್ಟು ಕುಲಕರ್ಣಿ

**ಭವಿಷ್ಯ ಕಾವ್ಯ** 46
ಅನು: ಪುಟ್ಟು ಕುಲಕರ್ಣಿ

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು – 5** 59
– ಡಾ॥ ಶಂ.ಬಾ. ಜೋಶಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಜಗತ್ತಿನಲ್ಲಿ ನಾವು ನಮ್ಮೊಳಗೆ ಹೊಂದಿರುವ ಮಾನವೀಯ ಸಂಬಂಧಗಳೇ ಪ್ರಚಲಿತ ದಿನಮಾನಗಳಲ್ಲಿ ಮಾನವನ ಎದುರಿಗಿರುವ ದೊಡ್ಡ ಸವಾಲಾಗಿವೆ. ದೇವರನ್ನು ಪ್ರೀತಿಸುವದು ಅತಿ ಸುಲಭವಾಗಿದೆ. ಆದರೆ ಮಾನವ ಮಾನವನನ್ನು ಪ್ರೀತಿಸುವದು ಅಸಾಧ್ಯವಾಗುತ್ತಿದೆ. ಆತ್ಮೀಯ ಸಂಬಂಧಗಳನ್ನು ಹೊಂದುವದಂತೂ ಮತ್ತೂ ಮತ್ತೂ ಸಂಕೀರ್ಣಮಯವಾಗಿದೆ. ಮಾನವೀಯ ಸಂಬಂಧಗಳನ್ನು ಸೂಕ್ತಗೊಳಿಸಿಕೊಳ್ಳುವ ಕುರಿತು ಅದೂ ಯೋಗದ ಹಿನ್ನಲೆಯಲ್ಲಿ ಮಾನವ ಸ್ವಭಾವಗಳನ್ನು ರೂಪುಗೊಳಿಸಿಕೊಳ್ಳುವ ಕುರಿತು ಈ ಸಂಚಿಕೆ ರೂಪಿಸಲ್ಪಟ್ಟಿದೆ. (ಎಐಎಮ್)

*

## ಸಂಪಾದಕೀಯ

ಮಾನವ ಮಾನವನಾಗಿಯೇ ಬದುಕಲು ಸಾಧ್ಯವಾಗುವದು ಮೊದಲು ಅವನ ಆತ್ಮದೊಡನೇ ಅವನು ಅವಿನಾಭಾವ ಸಂಬಂಧ ಹೊಂದಬೇಕಾಗಿದೆ. ಬದುಕೇ ಪ್ರಮುಖ ಅದಕ್ಕಾಗಿ ಯಾವ ರೀತಿಯ ಜೀವನವನ್ನಾದರೂ ಸರಿ ಅನುಸರಿಸಲು ಸಿದ್ಧವಾಗುವ ಸಂದರ್ಭದಲ್ಲಿ, ಆ ವ್ಯಕ್ತಿಯ ಬದುಕು ಅವನ ಆತ್ಮದೊಡನೆಯೇ ಸಂಪರ್ಕವನ್ನು ಕಡಿದುಕೊಳ್ಳುತ್ತದೆ. ಹೀಗಾಗಿ ಸಮಾಜದಲ್ಲಿ ಇರಲೇಬೇಕಾದ ಸೌಹಾರ್ದತೆಗೆ ಬಲವಾದ ಆಘಾತ ಪ್ರಾರಂಭಗೊಳ್ಳುತ್ತದೆ. ಪ್ರಕೃತಿದತ್ತವಾದ ಬದುಕು ಇರುವವರೆಗೂ ಮಾನವನು ಪ್ರಕೃತಿದತ್ತವಾಗಿಯೇ ಜ್ಞಾನವನ್ನೂ ಜೊತೆಗೆ ನೆಮ್ಮದಿಯನ್ನೂ ಪಡೆದುಕೊಳ್ಳುತ್ತಿದ್ದ. ಆದರೆ ಅದರಿಂದ ವಿಮುಖನಾಗಿ ಪ್ರಕೃತಿ ಇರುವದೇ ತನ್ನ ಸುಖಜೀವನದ ಸಲುವಾಗಿ ಎನ್ನುವ ಧೋರಣೆಯಿಂದಾಗಿ ರೂಪಣೆಗೊಂಡ ಬದುಕಿನ ಸ್ಥಿತಿಗಳು ಪರಸ್ಪರರಲ್ಲಿ ಅವಿಶ್ವಾಸದ ಕಂದಕಗಳನ್ನು ನಿರ್ಮಿಸಿದ್ದೂ ಅಲ್ಲದೇ ಅದರ ಪ್ರಮಾಣವನ್ನೂ ಅಗಾಧಗೊಳಿಸುತ್ತಲೇ ಸಾಗಿದವು.

ಬೌದ್ಧಿಕ ವಿಕಾಸದ ಅವಧಿಯಲ್ಲಿ ವಿಜ್ಞಾನವು ಒದಗಿಸಿದ ಹುಸಿಭ್ರಮೆಯ ಕನಸುಗಳೇ ವಾಸ್ತವದ ವಿಜೃಂಭಣೆಗೆ ದಾರಿ ರೂಪಿಸಿದವು. ಅದರಲ್ಲೂ ಈ ಬೌದ್ಧಿಕ ವಿಕಾಸವು ಅಂತರ್ಗತವಾಗುವದರ ಬದಲು, ಕೇವಲ ಬಾಹ್ಯಾಡಂಬರಕ್ಕೇ ಒತ್ತು ಕೊಟ್ಟದ್ದರಿಂದ, ಇದು ಸಮಾಜದಲ್ಲಿಯೂ ಸಹಿತ ಅಪಾರ ಪ್ರಮಾಣದ ಏರು–ಪೇರುಗಳನ್ನು ಸೃಷ್ಟಿಸಿತು. ಸರ್ವಸ್ವವೂ ತಮ್ಮ ಹಿಡಿತದಲ್ಲಿಯೇ ಇರಲೇಬೇಕು ಎನ್ನುವ ಹಕ್ಕೊತ್ತಾಯವೂ ಸಹಿತ ಮಾನವ ಕುಲವನ್ನೇ ನಾಶಮಾಡುವಂತಹ ಅಸ್ತ್ರಗಳನ್ನು ಸೃಷ್ಟಿಸಿಕೊಂಡು, ಇಡೀ ಜಗತ್ತು ಸಂಬಂಧಗಳಿಗಿಂತ ಭಯದ ಪರದೆಯಲ್ಲಿಯೇ ಮಾನವನ ಬದುಕು ಅಲ್ಲೋಲ–ಕಲ್ಲೋಲಗೊಂಡಿತು. ಬದುಕಿನಲ್ಲಿ ಸೌಹಾರ್ದವನ್ನು ರೂಪಿಸಬೇಕಾಗಿದ್ದ ಆಧ್ಯಾತ್ಮವು ಕೇವಲ ಹೊರ ಜಗತ್ತಿಗೆ ವೈಭವೋಪೇತವಾಗಿ ಮಾಡಲ್ಪಡುವ ಆಚರಣಾ ವ್ಯವಸ್ಥೆಗೆ ತನ್ನನ್ನು ಕಟ್ಟಿಹಾಕಿಕೊಂಡಿತು. ಇದನ್ನು ಧರ್ಮದ ವ್ಯಾಪ್ತಿಯಲ್ಲಿ ವಿಸ್ತಾರಗೊಳಿಸಲು ಯತ್ನಿಸಿದರೂ, ಅದೂ ಸಹಿತ ಮಾನವೀಯ ಸಂಬಂಧಗಳ ಮಧ್ಯೆ ಇದ್ದ ಕಂದಕವನ್ನು ಮತ್ತೂ ವಿಸ್ತಾರಗೊಳಿಸಿದವು.

ಹೀಗಾಗಿ, ಮಾನವೀಯ ಸಂಬಂಧಗಳು ಮತ್ತೆ ರೂಪಗೊಳ್ಳಬೇಕೆಂದರೆ, ನಾವು ಮತ್ತೆ ಪ್ರಕೃತಿಯು ಕಲಿಸುತ್ತಿರುವ ಪಾಠಕ್ಕೆ ಸ್ಪಂದನೆಗೊಳ್ಳಲೇ ಬೇಕಾಗಿದೆ. ವೈಜ್ಞಾನಿಕ ಶೋಧಗಳ ಮಹಾಪೂರವೂ ಸಹಿತ ಇಂದು ಮಾನವನಿಗೆ ಸುಖವನ್ನು ಕೊಡುವ ಹುಮ್ಮಸ್ಸಿನಲ್ಲಿ ಅವನ ನೆಮ್ಮದಿಯನ್ನು ಹಾಗೂ ಅವನ ಆತ್ಮಿಕ ವಿಕಾಸವನ್ನೂ ಸಹಿತ ಸಂಪೂರ್ಣ ಹೊಸಗಿ ಹಾಕಿದೆ. ಆನ್ವೇಷಣೆಯ ತ್ಸುನಾಮಿಗಳು ತಂದದ್ದು ಸಾಂಕ್ರಾಮಿಕ ಅಶಾಂತಿಯನ್ನು ಮಾತ್ರ. ಜೊತೆಗೆ ಬದುಕಿನಲ್ಲಿ ಎಂದೂ ಇಲ್ಲದ ಅಸ್ಥಿರತೆಯ ಭಯವನ್ನೂ ಬಿತ್ತಿದವು. ಹೀಗಾಗಿ ಹಿಂದೆಂದಿಗಿಂತಲೂ ಇದೀಗ, 'ಮಾನವೀಯ ಸಂಬಂಧಗಳ' ಬಗೆಗೆ ಪ್ರತಿಯೊಬ್ಬರೂ ಯೋಚಿಸಲೇಬೇಕಾದ ಅನಿವಾರ್ಯ ಸಂದರ್ಭ ಒದಗಿ ಬಂದಿದೆ.

**ಮಾನವೀಯ ಸಂಬಂಧಗಳ ಹಂತಗಳನ್ನು** ಗುರುತಿಸಿಕೊಂಡಾದರೂ ಅವುಗಳನ್ನು ಉಳಿಸಿಕೊಳ್ಳಬೇಕಾಗಿದೆ. ಈ ಪರಿಹಾರಕ್ಕೆ ನಾವು ಹೊರಗಿನಿಂದ ಅಥವಾ ಮೇಲಿನಿಂದ ಯಾರೋ ಒಬ್ಬರು ಅವತರಣಗೊಂಡು ಬಂದು ಉದ್ಧರಿಸುತ್ತಾರೆ ಎನ್ನುವಂತಿಲ್ಲ. ನಮ್ಮ ಆತ್ಮದ ಧ್ವನಿಯನ್ನು ನಾವು ಕೇಳುತ್ತಿದ್ದರೂ ಕುರುಡರಂತೆ ನಟಿಸುವದನ್ನು ಬಿಟ್ಟರೆ ಸಾಕು, ಉಳಿದುದೆಲ್ಲವೂ ತಾನೇ ತಾನಾಗಿ ಸೂಕ್ತ ಮಾರ್ಗದತ್ತ ಕರೆದೊಯ್ಯುತ್ತವೆ. ಪ್ರಕೃತಿಯಿಂದಾದ ಆಘಾತಗಳು ಎಷ್ಟೇ ತೀವ್ರತರವಾಗಿದ್ದರೂ, ಅದರ ಹಿಂದೆಯೇ ಅದಕ್ಕೆ ಪರಿಹಾರವೂ ರೂಪಿತಗೊಂಡಿರುತ್ತದೆ. ಏಕೆಂದರೆ ಪ್ರಕೃತಿಗೆ ಇನ್ನೂ ಪರಿಪೂರ್ಣವಾಗುವ ಅಭೀಪ್ಸೆ ಇದೆ. ಹೀಗಾಗಿ ಆಗಾಗ ಮಾನವನ ಅಜ್ಞಾನದಿಂದ ರೂಪಣೆಗೊಳ್ಳುವ ವಿಚಲನೆಗಳು ಯಾವುದೇ ರೀತಿಯ ಅನಾಹುತಗಳನ್ನೂ ನಿರ್ಮಿಸಿದರೂ, ಬರಲಿರುವ ಭವಿಷ್ಯದ ಪೀಳಿಗೆಗೆ ಭರವಸೆ ತುಂಬಿರುವ ವಾತಾವರಣವನ್ನು ಸಹಿತ ಪ್ರಕೃತಿ ನೀಡಲು ಸಿದ್ಧವಿರುತ್ತದೆ.

ನಮಗೆ ನಮ್ಮ ನಮ್ಮ ಮಧ್ಯದಲ್ಲಿರುವ ವೈಷಮ್ಯತೆಗೆ ಏನು ಕಾರಣ ಎನ್ನುವದು ಸಂಪೂರ್ಣ ಗೊತ್ತಿದೆ. ಜೊತೆಗೆ ಅಚ್ಚರಿಯ ಸಂಗತಿ ಎಂದರೆ ಅದರ ಪರಿಹಾರದ ಮಾರ್ಗವೂ ಇದೆ ಎನ್ನುವದೂ ಗೊತ್ತಿದೆ. ಆದರೆ ನಮ್ಮ ನಮ್ಮ ಸಂಬಂಧಗಳ ಮಧ್ಯೆ ರೂಪಿಸಿಕೊಂಡಿರುವ ಕಂದಕವನ್ನು ಮೊದಲು ಮುಚ್ಚಿ ಅಲ್ಲೊಂದು ಸಂಪರ್ಕ ಸೇತುವನ್ನು ರೂಪಿಸಕೊಳ್ಳಬೇಕಾಗಿದೆ.

ಈ ಸಂಚಿಕೆಯಲ್ಲಿ ಹಿರಿಯ ಲೇಖಕರಾದ ಶ್ರೀ ಪುರುಷೋತ್ತಮ ಗಲಗಲಿ, ಶ್ರೀ ವೀರೇಂದ್ರ ಸಿಂಪಿ, ಅಖಿಲ ಭಾರತ ಪತ್ರಿಕೆ ಸಂಪಾದಕರಾಗಿದ್ದ ಡಾ|| ಕೆ.ಎಸ್. ಅಮೂರ, ಶ್ರೀಮತಿ ಮಧುಮತಿ ಕುಲಕರ್ಣಿ ಅವರಂತಹ ಹಿರಿಯ ಲೇಖಕರು ರೂಪಿಸಿರುವ 'ಮಾನವೀಯ ಸಂಬಂಧಗಳ' ಕುರಿತ ಲೇಖನಗಳನ್ನು ಇಲ್ಲಿ ರೂಪಿಸಲಾಗಿದೆ.

ಅದೇ ರೀತಿಯಲ್ಲಿ "ಶ್ರೀ ಅರವಿಂದರು–150" ಆಯಾಮದಲ್ಲಿ ಕೆಲವು ಹೊಸ ವಿಷಯಗಳನ್ನು ಇಲ್ಲಿ ಪ್ರಕಾಶನ ಪಡಿಸುವ ಪ್ರಯತ್ನವಿದೆ. ಈಗಾಗಲೇ 'ಸಾವಿತ್ರಿ' ಕಾವ್ಯದ ಪ್ರಥಮ ಪುಸ್ತಕದ ಬಗೆಗೆ, ಕನ್ನಡದಲ್ಲಿ ಇಲ್ಲಿಯವರೆಗೂ ಬರೆಯಲ್ಪಟ್ಟಿರುವ ಅನುವಾದಗಳನ್ನು ಸಂವಾದ, ಟಿಪ್ಪಣಿಗಳು, ಅನುಬಂಧಗಳು, ಪಾರಿಭಾಷಿಕ ಶಬ್ದಕೋಶ ಹಾಗೂ ಅನುಬಂಧಗಳೊಡನೆ 'savitri-kan.blog' ಬ್ಲಾಗ್ ವ್ಯವಸ್ಥೆಯಲ್ಲಿ ಪ್ರಕಾಶನಗೊಳಿಸಲಾಗಿದೆ. ಇದೇ ಮಾದರಿಯಲ್ಲಿಯೇ ಶ್ರೀ ಅರವಿಂದರ 'ದಿವ್ಯ ಜೀವನ'ವನ್ನೂ ಸಹಿತ ಅಧ್ಯಯನ ಮಾಡುವ ಕ್ರಿಯೆಯೂ ಪ್ರಾರಂಭವಾಗಿದೆ. [ಪಿಪಿಕೆ]

# ನಮ್ಮ ಅತ್ಯುತ್ತಮ ಮಿತ್ರ

**– ಅನುವಾದ: ಶ್ರೀ ವೀರೇಂದ್ರ ಸಿಂಪಿ**

(14/288) "ನಮ್ಮಲ್ಲಿರುವ ಅತ್ಯುತ್ತಮ ಅಂಶಕ್ಕಾಗಿಯೇ ನಮ್ಮನ್ನು ಪ್ರೀತಿಸುವವನು, ಆದಾಗ್ಯೂ ನಾವಿರುವುದಕ್ಕಿಂತ ಬೇರೆಯಾಗಿರಲಿ ಎಂದು ನಮ್ಮನ್ನು ಕೇಳದಿರುವವನು ನಮ್ಮ ಅತ್ಯುತ್ತಮ ಮಿತ್ರನಾಗಿರುತ್ತಾನೆ."

ಈ ವಾಕ್ಯದ ವಿವರಣೆ ಕೊಡಲು ನನ್ನನ್ನು ಕೇಳಲಾಗಿದೆ.

ಮನಸ್ಸಿನಲ್ಲಿ ಏನನ್ನೋ ಇಟ್ಟುಕೊಂಡು ನಾನಿದನ್ನು ಬರೆದೆ, ಇಂತಹದನ್ನು ಮನುಷ್ಯ ಸಾಮಾನ್ಯವಾಗಿ ಮರೆತುಬಿಟ್ಟಿರುತ್ತಾನೆ: ತನ್ನ ಮಿತ್ರರು, ಸುತ್ತಮುತ್ತಲಿದ್ದವರು ಅವರಿರುವ ಹಾಗೆ ಇರಬಾರದೆಂದು ಹಾಗೂ ತಾನು ಬಯಸಿದ ಹಾಗೆ ಅವರಿರಬೇಕೆಂದು ಅವನು ಬಯಸುತ್ತಾನೆ – ಅವನು ತನಗಾಗಿಯೇ ಒಂದು ಆದರ್ಶ ರೂಪಿಸಿಕೊಳ್ಳುತ್ತಾನೆ ಮತ್ತು ಅದನ್ನು ಪ್ರತಿಯೊಬ್ಬನಿಗೂ ಅನ್ವಯಿಸಲು ಬಯಸುತ್ತಾನೆ. ಆದರೆ.... ಇದು ನಾನು ಜಪಾನಿನಲ್ಲಿ ಭೇಟಿ ಮಾಡಿದ 'ಟಾಲಸ್ಟಾಯ್'ನ ಮಗನನ್ನು ನೆನಪಿಗೆ ತರುತ್ತದೆ. ಅವನು ಮಾನವರಲ್ಲಿ ಏಕತೆಯನ್ನು ತರುವ ಭರವಸೆಯೊಂದಿಗೆ ಜಗತ್ತನ್ನು ಸುತ್ತುತ್ತಿದ್ದನು, ಆದರೆ ಅವನು ಅನುಸರಿಸುತ್ತಿದ್ದ ರೀತಿ ಕಡಿಮೆ ಸಂತೋಷಕರವಾದದ್ದೆಂದು ತೋರಿಬಂದಿತು. ಪ್ರತಿಯೊಬ್ಬನೂ ಒಂದೇ ಭಾಷೆಯಲ್ಲಿ ಮಾತನಾಡಿದರೆ, ಒಂದೇ ಬಗೆಯ ವಸ್ತ್ರ ಧರಿಸಿದರೆ, ಒಂದೇ ರೀತಿ ಊಟ ಮಾಡಿದರೆ, ಒಂದೇ ರೀತಿಯ ನಡೆನುಡಿಗಳನ್ನು ಅನುಸರಿಸಿದರೆ ಅದು ಅನಿವಾರ್ಯವೆಂಬಂತೆ ಏಕತೆಯನ್ನು ತಂದುಕೊಡುತ್ತದೆ ಎಂದು ಅವನು ಉದ್ರೇಕವಿಲ್ಲದ ಗಾಂಭೀರ್ಯದಿಂದ ಹೇಳುತ್ತಿದ್ದ. ಇದನ್ನು ಸಿದ್ಧಿಸಿಕೊಳ್ಳಲು ಅವನು ಅನುಸರಿಸುವ ರೀತಿ ಯಾವುದು ಎಂದು ಅವನನ್ನು ಕೇಳಿದಾಗ: "ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗಿ ಒಂದು ಹೊಸ ಭಾಷೆಯನ್ನು ಕುರಿತು ಹೊಸ, ಆದರೆ ವಿಶ್ವವ್ಯಾಪಿಯಾಗಬಲ್ಲ ಉಡುಪನ್ನು ಧರಿಸುವುದನ್ನು ಕುರಿತು ಹೊಸ, ಆದರೆ ವಿಶ್ವವ್ಯಾಪಿಯಾಗುವ ರೂಢಿಗಳನ್ನು ಕುರಿತು ಪ್ರವಚನ ನೀಡುವುದಷ್ಟೆ ಸಾಕಾಗುವುದು" ಎಂದು ಅವನು ಹೇಳುತ್ತಿದ್ದ.

(ನಗುತ್ತ) ಸರಿ, ಪ್ರತಿಯೊಬ್ಬನೂ ತನ್ನ ಚಿಕ್ಕ ಕ್ಷೇತ್ರದಲ್ಲಿ ಆ ರೀತಿ ಇರುತ್ತಾನೆ. ಅವನಲ್ಲಿ ಒಂದು ಆದರ್ಶವಿರುತ್ತದೆ: ಯಾವುದು ಸತ್ಯ, ಸುಂದರ,

ಉದಾರವಾದದ್ದು ಮತ್ತು ದೈವಿಕವಾದದ್ದು ಎಂಬುದರ ಬಗೆಗೆ ಅವನಲ್ಲಿ ಒಂದು ಕಲ್ಪನೆಯಿರುತ್ತದೆ, ಅವನು ಅದನ್ನು ಇತರರ ಮೇಲೆ ಹೇರಲು ಬಯಸುತ್ತಾನೆ. ಭಗವಂತನ ಬಗೆಗೆ ಒಂದು ನಿರ್ದಿಷ್ಟ ಕಲ್ಪನೆ ಹೊಂದಿದ ಅನೇಕ ಜನರಿರುತ್ತಾರೆ ಮತ್ತು ಅವರು ತಮ್ಮ ಕಲ್ಪನೆಯನ್ನು ತಮ್ಮೆಲ್ಲ ಬಲದಿಂದ, ಬೇರೆಯವರ ಮೇಲೆ ಹೇರಲು ಪ್ರಯತ್ನಿಸುತ್ತಾರೆ, – ಸಾಮಾನ್ಯವಾಗಿ, ಅವರು ತಮ್ಮ ಜೀವ ಕಳೆದುಕೊಳ್ಳುವವರೆಗೆ, ಧೃತಿಗೆಡುವುದಿಲ್ಲ.

(ಇದನ್ನು ಹೇಳುವಾಗ) ಇಂತಹ ಸಹಜ ಮತ್ತು ಬಹುಮಟ್ಟಿಗೆ ಪ್ರಜ್ಞಾರಹಿತ ಮನೋಭಾವವಿರುವುದನ್ನು ನನ್ನ ಮನಸ್ಸಿನಲ್ಲಿ ತಂದುಕೊಂಡಿದ್ದೆ, ಏಕೆಂದರೆ ನಿಮ್ಮಲ್ಲಿ ಒಬ್ಬನಿಗೆ "ನೀನು" ಮಾಡಲು ಬಯಸುತ್ತಿರುವುದು ಅದು ಎಂದು ನಾನು ಹೇಳಿದರೆ ಅವನು ಭಾವಾವೇಶದಿಂದ ವಿರೋಧಿಸಿ "ಏನು! ನನ್ನ ಜೀವನದಲ್ಲಿ ಅದನ್ನು ಮಾಡಲು ಸಾಧ್ಯವಿಲ್ಲ" ಎಂದು ಹೇಳುತ್ತಾನೆ. ಜನರ ಬಗ್ಗೆ ಅಭಿಪ್ರಾಯಗಳನ್ನು ಹೊಂದಿರುವುದು ಮತ್ತು ವಿಶೇಷವಾಗಿ ಅವರ ಜೀವನದ ರೀತಿಯ ಬಗೆಗೆ ಪ್ರತಿಕ್ರಿಯೆ ತೋರಿಸುವುದು ಏಕಿರುತ್ತದೆಂದರೆ ಅವರು ಹೇಗಿರಬೇಕೆಂದು ಅವನು ಯೋಚಿಸುತ್ತಿರುವ ಹಾಗೆ ಅವರಿರುವುದಿಲ್ಲ. ಜಗತ್ತಿನಲ್ಲಿ ಎರಡು ವಿಷಯಗಳು ನಿಖರವಾಗಿ ಒಂದೇ ರೀತಿಯವು ಆಗಿರುವದಿಲ್ಲ ಮತ್ತು ಇರಬಾರದು ಎಂಬುದನ್ನು ನಾವು ಎಂದಿಗೂ ಮರೆಯಬಾರದು. ಏಕೆಂದರೆ ಒಂದು ಮೊದಲೇ ಇದ್ದರೆ ಅಂತಹದೇ ಎರಡನೆಯದು ನಿರುಪಯುಕ್ತವಾಗುತ್ತದೆ, ಜಗತ್ತು ಅನಂತ ಸಂಖ್ಯೆಯಲ್ಲಿರುವ ವಿಷಯಗಳ ಸಾಮರಸ್ಯಕ್ಕಾಗಿ ರಚಿತವಾಗಿದೆ; ಎರಡು ಅಥವಾ ಹೆಚ್ಚಿನ ಸಂಖ್ಯೆಯಲ್ಲಿರುವ ಚಲನೆಗಳು ಎರಡು ಪ್ರಜ್ಞೆಗಳು ಒಂದೇ ರೀತಿಯವಾಗಿರುವುದಿಲ್ಲ. ಹಾಗಿರುವಾಗ ಯಾರೊಬ್ಬರು ನಮ್ಮದೇ ಯೋಚನೆಗೆ ಅನುಕೂಲವಾಗಿರುವಂತೆ ಇರಲಿ ಎಂದು ಹೇಳಲು ಮಧ್ಯೆ ಪ್ರವೇಶಿಸುವುದಕ್ಕೆ ನಮಗೆ ಯಾವ ಹಕ್ಕಿದೆ? ಏಕೆಂದರೆ ನೀವು ಒಂದು ವಿಶಿಷ್ಟ ರೀತಿಯಲ್ಲಿ ಯೋಚನೆ ಮಾಡಿದರೆ, ಇನ್ನೊಬ್ಬರು ನಿಮ್ಮ ರೀತಿಯಲ್ಲಿಯೇ ಯೋಚಿಸಲು ಶಕ್ತರಾಗಲಾರರೆಂಬುದು ನಿಶ್ಚಿತವಾದ ಸಂಗತಿ. ಸಾಮರಸ್ಯ–ಗೊಳಿಸುವುದನ್ನು, ಸಮನ್ವಯಗೊಳಿಸುವುದನ್ನು ಎಲ್ಲ ವಿಭಿನ್ನ ವಿಷಯಗಳಲ್ಲಿ ಪ್ರತಿಯೊಂದನ್ನು ಅದರ ಸ್ಥಾನದಲ್ಲಿರಿಸುವುದನ್ನು ನೀವು ಕಲಿಯಬೇಕು. ಸಮಸ್ತ ಸಾಮರಸ್ಯ ತದ್ರೂಪವಾಗಿರುವುದರಲ್ಲಿಲ್ಲ, ಆದರೆ ಪ್ರತಿಯೊಂದನ್ನು ಅದರ ಸರಿಯಾದ ಸ್ಥಾನದಲ್ಲಿರಿಸುವುದರಲ್ಲಿರುತ್ತದೆ.

ನಿಜವಾದ ಮಿತ್ರನಿಂದ ಅಪೇಕ್ಷಿಸಬಹುದಾದುದು ಅವನು ತನ್ನಂತಿರಲಿ ಎಂಬುದಲ್ಲ, ಆದರೆ ಅವನು ಹೇಗಿದ್ದಾನೆಯೋ ಹಾಗಿರಲಿ ಎಂಬುದು: ಇದು ಪ್ರತಿಕ್ರಿಯೆಯ ಆಧಾರವಾಗಿರಬೇಕು.

ಈಗ ಪ್ರಾರಂಭದಲ್ಲಿ ಹೇಳಿದ ಮಾತನ್ನು ನೆನಪಿಗೆ ತಂದುಕೊಳ್ಳೋಣ: "ಅವನು ನಿಮ್ಮಲ್ಲಿರುವ ಅತ್ಯುತ್ತಮ ಅಂಶಕ್ಕಾಗಿ ನಿಮ್ಮನ್ನು ಪ್ರೀತಿಸುತ್ತಾನೆ..." ಎಂದು ಹೇಳಿದ್ದೆ. ಅದನ್ನು ಇನ್ನೂ ಹೆಚ್ಚು ಸಕಾರಾತ್ಮಕವಾಗಿ ಹೇಳಬಹುದು: ನಿಮ್ಮ ಅತಿ ನಿಮ್ನ ಸ್ತರಕ್ಕೆ ಕೆಳಗಿಳಿದು ಬಂದು ತನ್ನೊಡನೆ ಮೂರ್ಖತನದ ಕಾರ್ಯಗಳನ್ನು ಕೈಕೊಳ್ಳಲು ಇಲ್ಲವೆ ತನ್ನೊಡನೆ ಕೆಟ್ಟ ದಾರಿಗಳಲ್ಲಿ ಬೀಳುವಂತೆ ಉತ್ತೇಜನ ನೀಡುವವನು, ಇಲ್ಲವೆ ನೀವು ಮಾಡುವ ಎಲ್ಲ ಅಶ್ಲೀಲ ಕಾರ್ಯಗಳನ್ನು ಪ್ರಶಂಸಿಸುವವನು ನಿಮ್ಮ ಮಿತ್ರನಲ್ಲ. ಅದು ಸ್ಪಷ್ಟವಿದೆ. ಆದಾಗ್ಯೂ ಸಾಮಾನ್ಯವಾಗಿ, ಬಹಳಷ್ಟು ಸಲ, ಅನೇಕ ಸಲ, ಮನುಷ್ಯ ಕೆಳಗಿನ ಸ್ತರಕ್ಕೆ ಇಳಿದು ಹೋದಾಗ, ತನಗೆ ಕಿರಿಕಿರಿ ಉಂಟು ಮಾಡದ ಜನರೊಂದಿಗೆ ಗೆಳೆತನ ಬೆಳೆಸುತ್ತಾನೆ. ತನ್ನ ಮೂರ್ಖತನದ ಕಾರ್ಯಗಳಿಗೆ ಉತ್ತೇಜನ ನೀಡುವವರನ್ನು ತನ್ನ ಅತ್ಯುತ್ತಮ ಗೆಳೆಯರೆಂದು ಭಾವಿಸುತ್ತಾನೆ. ಶಾಲೆಗೆ ಹೋಗುವುದರ ಬದಲಾಗಿ ಸಿಕ್ಕಲ್ಲಿ ತಿರುಗಾಡುವ, ತೋಟಗಳಿಂದ ಹಣ್ಣನ್ನು ಕಳವು ಮಾಡುವ, ಶಿಕ್ಷಕರನ್ನು ಗೇಲಿ ಮಾಡುವ ಮತ್ತು ಆ ಬಗೆಯ ಎಲ್ಲ ಚಟುವಟಿಕೆಗಳಲ್ಲಿ ತೊಡಗಿರುವ ಜನರೊಂದಿಗೆ ಕೂಡಿಕೊಳ್ಳುತ್ತಾನೆ. ನಾನು ಯಾರನ್ನೂ ಕುರಿತು ವೈಯಕ್ತಿಕ ಟೀಕೆ ಮಾಡುತ್ತಿಲ್ಲ, ಆದರೆ, ನಿಜವಾಗಿ, ಕೆಲವು ಉದಾಹರಣೆಗಳನ್ನು ಕೊಡಬಲ್ಲೆ. ದುಃಖದ ಸಂಗತಿಯೆಂದರೆ ಅಂತಹ ಉದಾಹರಣೆಗಳು ಹಲವಾರಿವೆ. ಬಹುಶಃ ಈ ಕಾರಣದಿಂದಾಗಿಯೆ 'ಅವರು ನಿಮ್ಮ ನಿಜವಾದ ಮಿತ್ರರಲ್ಲ' ಎಂದು ಹೇಳಿದ್ದೆ. ಆದಾಗ್ಯೂ ಅವರು ಅತಿ ಹೆಚ್ಚು ಅನುಕೂಲಕರ ಗೆಳೆಯರು, ಏಕೆಂದರೆ ನೀವು ತಪ್ಪು ಮಾಡುತ್ತಿದ್ದೀರಿ ಎನ್ನುವ ಭಾವನೆಯನ್ನು ಅವರು ತಂದುಕೊಡುವುದಿಲ್ಲ. ಅದು ಹಾಗಿರುವಾಗ ಒಬ್ಬ ಬಂದು "ಏನನ್ನೂ ಮಾಡದೆ, ಇಲ್ಲವೆ ಮೂರ್ಖತನದ ಕೆಲಸಗಳನ್ನು ಮಾಡುತ್ತ ಹೀಗೆ ಸುತ್ತಾಡಿಕೊಂಡು ಇರುವುದರ ಬದಲಾಗಿ ಶಾಲೆಯ ವರ್ಗಕ್ಕೆ ಬಂದರೆ ಹೆಚ್ಚು ಒಳ್ಳೆಯದಾಗುವುದಿಲ್ಲವೆ?" ಎಂದು ಕೇಳಿದಾಗ ಅದಕ್ಕೆ ಸಿಗುವ ಉತ್ತರ "ನೀನು ನನ್ನ ಗೆಳೆಯನಲ್ಲ" ಎಂದಾಗಿರುತ್ತದೆ. ಈ ಕಾರಣವನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾನು ಈ ವಾಕ್ಯವನ್ನು ಬರೆದೆ. ನಾನು ಪುನಃ ಹೇಳುತ್ತೇನೆ; ಯಾರನ್ನೂ ಕುರಿತು ವೈಯಕ್ತಿಕ ಟೀಕೆ ಮಾಡುತ್ತಿಲ್ಲ. ಆದರೆ

ದುರ್ದೈವದಿಂದ, ಮೇಲಿಂದ ಮೇಲೆ ಸಂಭವಿಸುವ ಕೆಲ ವಿಷಯಗಳನ್ನು ಕುರಿತು ಹೇಳಲು ಇದು ಒಂದು ಅವಕಾಶ ಕಲ್ಪಿಸಿಕೊಟ್ಟಿದೆ.

ಭಾವಿ ಸಾಧನೆಯಲ್ಲಿ ಹೆಚ್ಚು ಯಶಸ್ಸು ಪಡೆಯುವ ಲಕ್ಷಣ ತೋರಿಸುತ್ತಿದ್ದ ಮಕ್ಕಳಿಲ್ಲಿದ್ದರು. ಅವರು ತಮ್ಮ ವರ್ಗದಲ್ಲಿ ಉನ್ನತ ಸ್ಥಾನದಲ್ಲಿರುತ್ತಿದ್ದರು, ಗಂಭೀರರಾಗಿ ಕಾರ್ಯನಿರತರಾಗಿರುತ್ತಿದ್ದರು, ಅವರಿಂದ ನಾನು ಬಹಳಷ್ಟನ್ನು ನಿರೀಕ್ಷಿಸಿದ್ದೆ. ಅವರು ಈ ಬಗೆಯ ಗೆಳೆಯರ ಸಹವಾಸದಿಂದ ಪೂರ್ತಿ ಹಾಳಾಗಿ ಹೋಗಿದ್ದಾರೆ. ನಾವು ಇದನ್ನು ಕುರಿತು ಮಾತನಾಡುತ್ತಿರುವುದರಿಂದ ನನಗೆ ಇದರಿಂದ ಬಹಳ ವಿಷಾದವಾಗಿದೆ ಎಂದು ನಾನವರಿಗೆ ಇಂದು ಹೇಳಬಯಸುತ್ತೇನೆ. ಇಂತಹ ಜನರನ್ನು ನಾನು ಗೆಳೆಯರೆಂದು ಕರೆಯುವುದಿಲ್ಲ, ಅವರು ಮಾರಕ ಶತ್ರುಗಳಂತಿರುತ್ತಾರೆ. ಸಾಂಸರ್ಗಿಕ ರೋಗದಿಂದ ಜನರು ರಕ್ಷಣೆ ಪಡೆಯುವಂತೆ ನೀವು ಅವರಿಂದ ದೂರವಿದ್ದು ರಕ್ಷಣೆ ಪಡೆಯಬಹುದು.

ಸಾಂಸರ್ಗಿಕ ರೋಗದಿಂದ ಬಳಲುವವನ ಸಂಗವನ್ನು ನಾವು ಇಷ್ಟಪಡುವುದಿಲ್ಲ ಮತ್ತು ಅವನನ್ನು ಕಾಳಜಿಪೂರ್ವಕ ದೂರವಿರಿಸುತ್ತೇವೆ. ಸಾಮಾನ್ಯವಾಗಿ ಅವನನ್ನು ಪ್ರತ್ಯೇಕವಾಗಿರಿಸಲಾಗುತ್ತದೆ, ಅದರಿಂದಾಗಿ ಅವನ ರೋಗ ಹರಡುವುದಿಲ್ಲ. ದುರ್ವ್ಯಸನಿ ಹಾಗೂ ಕೆಟ್ಟ ನಡತೆಯವನೊಂದಿಗೆ ಆಗುವ ಸಹವಾಸ ದೋಷ, ನೀತಿ ಭ್ರಷ್ಟತೆ, ಮಿಥ್ಯೆ ಮತ್ತು ತುಚ್ಛವಾದವುಗಳ ವಾತಾವರಣ ದೋಷ ಇವು ಸಾಂಸರ್ಗಿಕ ರೋಗಕ್ಕಿಂತ ಹೆಚ್ಚು ಅಪಾಯಕಾರಿ. ಅದನ್ನೆಲ್ಲ ಬಹಳ ಕಾಳಜಿಯಿಂದ ದೂರವಿರಿಸಬೇಕು. ನಿನ್ನ ಯಾವುದೇ ಕೆಟ್ಟ ಅಥವಾ ಕುರೂಪದ ಕ್ರಿಯೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವ, ಕೀಳುಮಟ್ಟದ ಪ್ರಲೋಭನಗಳನ್ನು ವಿರೋಧಿಸಲು ಧೈರ್ಯ ನೀಡುವ ಮನುಷ್ಯ ನಿನ್ನ ಅತ್ಯುತ್ತಮ ಮಿತ್ರನೆಂದು ಭಾವಿಸಬೇಕು, ಅಂತಹನೊಂದಿಗೆ ಸಹಯೋಗ ಮಾಡಬೇಕು, ಆದರೆ ಯಾರೊಂದಿಗೆ ಮೋಜಿನಲ್ಲಿರುವೆಯೋ ಮತ್ತು ಯಾರು ನಿನ್ನ ದುಷ್ಟ ಒಲವುಗಳನ್ನು ಬಲಪಡಿಸುವರೋ ಅಂತಹರ ಜೊತೆಗಲ್ಲ, ಅಷ್ಟೆ.

ಈಗ ಆ ವಿಷಯ ಕುರಿತು ಹೆಚ್ಚು ಶ್ರಮಪಟ್ಟು ಹೇಳುವ ಅವಶ್ಯಕತೆಯಿಲ್ಲ. ನಾನು ಯಾರನ್ನು ಕುರಿತು ಹೇಳುತ್ತಿದ್ದೇನೆಯೋ ಅವರು ಅರಿತುಕೊಳ್ಳುವರೆಂದು ಆಶಿಸುತ್ತೇನೆ.

ಯಾರು ನಿನಗಿಂತ ಹೆಚ್ಚು ಜಾಣರಾಗಿರುತ್ತಾರೆಯೋ. ಯಾರ ಸಹವಾಸ ನಿನ್ನನ್ನು ಉದಾತ್ತಗೊಳಿಸುತ್ತದೆಯೋ, ನಿನ್ನ ಮೇಲೆ ನೀನು ಪ್ರಭುತ್ವ ಸಾಧಿಸಲು

ಪ್ರಗತಿ ಹೊಂದಲು ಸಹಾಯ ಮಾಡುತ್ತದೆಯೋ ಅಂತಹರನ್ನು ಮಾತ್ರ ನಿನ್ನ ಮಿತ್ರರನ್ನಾಗಿ ಮಾಡಿಕೊಳ್ಳಬೇಕು. ಕೊನೆಯದಾಗಿ ಹೇಳುವುದಾದರೆ, ನಾವು ಹೊಂದಬಹುದಾದ ಅತ್ಯುತ್ತಮ ಮಿತ್ರ ಭಗವಂತನಲ್ಲವೆ? ಅವನ ಬಳಿ ನಾವು ಎಲ್ಲವನ್ನೂ ಹೇಳಬಹುದು, ತೆರೆದಿಡಬಹುದು, ಏಕೆಂದರೆ ಎಲ್ಲ ಕರುಣೆಯ ಹಾಗೂ ಪುನರಾವರ್ತನೆ ಮಾಡದ ತಪ್ಪುಗಳನ್ನು ಇಲ್ಲವಾಗಿಸುವ, ಸಿದ್ಧಿಯ ಮಾರ್ಗವನ್ನು ತೆರೆದಿಡುವ ಸಾಮರ್ಥ್ಯದ ಮೂಲ ಅವನಲ್ಲಿದೆ. ಅವನು ಎಲ್ಲವನ್ನೂ ಅರ್ಥಮಾಡಿಕೊಳ್ಳಬಲ್ಲ, ವಾಸಿಮಾಡಬಲ್ಲ, ಮಾರ್ಗದಲ್ಲಿ ಯಾವಾಗಲೂ ಸಹಾಯ ಮಾಡಬಲ್ಲ, ನೀವು ವಿಫಲರಾಗದಂತೆ, ಎಡವದಂತೆ, ಪತನಗೊಳ್ಳದಂತೆ ಮತ್ತು ನೇರವಾಗಿ ಗುರಿಯತ್ತ ಸಾಗುವಂತೆ ನಿಮಗೆ ಸಹಾಯ ನೀಡಬಲ್ಲ. ಒಳ್ಳೆಯ ಅಥವಾ ಕೆಟ್ಟ ದಿನಗಳಲ್ಲಿ ಅವನೇ ನಿಜವಾದ ಮಿತ್ರ, ಅವನು ಅರ್ಥಮಾಡಿಕೊಳ್ಳಬಲ್ಲ, ವಾಸಿಮಾಡಬಲ್ಲ, ನಿಮಗೆ ಅವಶ್ಯವಿದ್ದಾಗ ನಿಮ್ಮೊಡನೆ ಇದ್ದೇ ಇರುತ್ತಾನೆ. ನಿಷ್ಕಾಪಟ್ಯದಿಂದ ಅವನಿಗೆ ಕರೆ ಕೊಟ್ಟಾಗ ನಿಮಗೆ ಮಾರ್ಗದರ್ಶನ ಮಾಡಲು, ನಿಮ್ಮನ್ನು ಎತ್ತಿ ಹಿಡಿಯಲು ಮತ್ತು ನಿಮಗೆ ತನ್ನ ಪ್ರೇಮವನ್ನು ಧಾರೆಯೆರೆಯಲು ಅವನು ಯಾವಾಗಲೂ ಅಲ್ಲಿ ಇದ್ದೇ ಇರುತ್ತಾನೆ.

**– ಶ್ರೀಮಾತೆ**

(23/817–18) ಪುರುಷ, ಪುರುಷರ ನಡುವೆ, ಸ್ತ್ರೀ, ಸ್ತ್ರೀಯರ ನಡುವೆ ಮೈತ್ರಿಯನ್ನಿರಿಸಿಕೊಳ್ಳುವುದು. ಪುರುಷ ಹಾಗೂ ಸ್ತ್ರೀ ನಡುವೆ ಮೈತ್ರಿ ಹೊಂದಿರುವುದಕ್ಕಿಂತ ನಿಶ್ಚಿತವಾಗಿ ಸುಲಭವಾಗಿರುತ್ತದೆ, ಏಕೆಂದರೆ ಅಲ್ಲಿ ಲೈಂಗಿಕ ಒಳಪ್ರವೇಶವಿರುವುದಿಲ್ಲ. ಪುರುಷ ಹಾಗೂ ಸ್ತ್ರೀ ಇವರ ಮೈತ್ರಿಯಲ್ಲಿ ಯಾವುದೇ ಕ್ಷಣದಲ್ಲಿ, ಲೈಂಗಿಕ ತಿರುವು ಸೂಕ್ಷ್ಮತರ ರೀತಿಯಲ್ಲಿ ಇಲ್ಲವೆ ನೇರವಾಗಿ ಬರಬಹುದು ಮತ್ತು ಚಿತ್ತಕ್ಷೋಭೆಯನ್ನು ಉಂಟುಮಾಡಬಹುದು. ಈ ಅಂಶದಿಂದ ಮುಕ್ತವಾದ ಪರಿಶುದ್ಧ ಮೈತ್ರಿ ಹೊಂದಿರುವುದು ಅಸಾಧ್ಯವೇನಲ್ಲ, ಅಂತಹ ಮೈತ್ರಿ ಇರಬಲ್ಲದು ಹಾಗೂ ಯಾವಾಗಲೂ ಇದ್ದೇ ಇತ್ತು. ಅವಶ್ಯವಾದದ್ದೇನಂದರೆ ನಿಮ್ನತರ ಪ್ರಾಣಿಕವು ಹಿಂದಿನ ಬಾಗಿಲಿನಿಂದ ದೃಷ್ಟಿ ಹರಿಸಬಾರದು ಮತ್ತು ಅದಕ್ಕೆ ಅಲ್ಲಿಂದ ಪ್ರವೇಶಿಸಲು ಅನುಮತಿ ನೀಡಬಾರದು. ಪುರುಷ ಸ್ವಭಾವ ಹಾಗೂ ಸ್ತ್ರೀ ಸ್ವಭಾವ ಇವುಗಳಲ್ಲಿ ಬಹಳಷ್ಟು ಸಲ ಸಾಮರಸ್ಯವಿರುತ್ತದೆ, ಅದು ತೆರೆದಿಟ್ಟ ಅಥವಾ ಮುಚ್ಚಿಟ್ಟ ಪ್ರಾಣಿಕ (ಲೈಂಗಿಕ) ಆಧಾರದ ಮೇಲಿರದೆ, ಬೇರೆ ಯಾವುದರದೋ ಆಧಾರಪಡೆದ ಆಕರ್ಷಣೆ ಅಥವಾ ಬಲವಾಗಿರುತ್ತದೆ.

ಕೆಲವೊಮ್ಮೆ ಉಳಿದವುಗಳಿಗಿಂತ ಅಧಿಕವಾಗಿ ಮಾನಸಿಕ ಇಲ್ಲವೆ ಚೈತ್ಯಾತ್ಮಿಕ ಇಲ್ಲವೆ ಉಚ್ಚತರ ಪ್ರಾಣಿಕ, ಇನ್ನೂ ಕೆಲವೊಮ್ಮೆ ಇವೆಲ್ಲವುಗಳ ಮಿಶ್ರಣದ ಮೇಲೆ ಅದರ ತಿರುಳು ಅವಲಂಬಿಸಿರುತ್ತದೆ. ಇಂತಹ ಸಂದರ್ಭದಲ್ಲಿ ಮೈತ್ರಿ ಸ್ವಾಭಾವಿಕವಾಗಿರುತ್ತದೆ, ಇನ್ನುಳಿದ ಅಂಶಗಳು ಅಲ್ಲಿ ಪ್ರವೇಶಿಸಿ ಅದನ್ನು ಕೆಳಗೆ ತರುವ ಇಲ್ಲವೆ ಮುರಿದುಹಾಕುವ ಅವಕಾಶ ಅತಿ ಕಡಿಮೆ ಇರುತ್ತದೆ.

ಪ್ರಾಣಿಕ ಮಾತ್ರ ಸೌಹಾರ್ದತೆಯನ್ನು ತಂದುಕೊಡಬಲ್ಲದು ಮತ್ತು ಚೈತ್ಯಾತ್ಮಿಕವಾದದ್ದು ಭೌತದ ಆವೇಗವಿಲ್ಲದ, ಉತ್ಸಾಹಶೂನ್ಯವಾದ ಏನೋ ಒಂದು ಎಂದು ಯೋಚಿಸುವುದು ತಪ್ಪು. ಶುದ್ಧ, ನಿರ್ಮಲ ಸದ್ಭಾವನೆ ಬಹಳ ಒಳ್ಳೆಯದು ಹಾಗೂ ಅಪೇಕ್ಷಣೀಯವಾದದು, ಆದರೆ ಅದನ್ನು ಚೈತ್ಯಾತ್ಮಿಕ ಪ್ರೇಮ ಎಂದು ಕರೆಯಲಾಗದು, ಪ್ರೇಮ ಕೇವಲ ಸದ್ಭಾವನೆಯಾಗಿರುವುದಿಲ್ಲ. ಚೈತ್ಯಾತ್ಮಿಕ ಪ್ರೇಮ ಸೌಹಾರ್ದತೆಯನ್ನು ಹೊಂದಿರಬಹುದು ಮತ್ತು ಅದರ ಭಾವದ ಆವೇಗ ಪ್ರಾಣಿಕದಷ್ಟು ಗಾಢ ಮತ್ತು ಅದಕ್ಕಿಂತ ಇನ್ನೂ ಹೆಚ್ಚು ಗಾಢವಾಗಿರಬಹುದು. ಅದು ಕೇವಲ ಶುದ್ಧ ಪ್ರೇಮಾಗ್ನಿಯಾಗಿದ್ದು, ಅಹಂಕಾರಿಕ ಆಸೆಯ ತೃಪ್ತಿಯ ಮೇಲೆ ಹಾಗೂ ಅದು ಅಪ್ಪಿಕೊಂಡದ್ದನ್ನು ತಿಂದುಹಾಕುವುದರ ಮೇಲೆ ಅವಲಂಬಿಸಿರುವುದಿಲ್ಲ. ಅದು ಶ್ವೇತಾಗ್ನಿ, ಕೆಂಪು ವರ್ಣದ್ದಲ್ಲ, ಆದರೆ ಶ್ವೇತಾಗ್ನಿಯ ಕಾವು ಆದರ ಉತ್ಸಾಹದಲ್ಲಿ ಕೆಂಪು ವರ್ಣದ ಅಗ್ನಿಯ ಶಾಖಕ್ಕಿಂತ ಕಡಿಮೆಯಾಗಿರುವುದಿಲ್ಲ. ಚೈತ್ಯಾತ್ಮಿಕ ಪ್ರೇಮ ಅದರ ಪೂರ್ತಿ ಲೀಲೆಯನ್ನು ಮಾನವಿಕ ಸಂಬಂಧಗಳಲ್ಲಿ, ಸ್ವಭಾವಗಳಲ್ಲಿ ಕಂಡುಕೊಳ್ಳುವುದಿಲ್ಲ ಎಂಬುದು ಸತ್ಯ, ಅದರ ಅಗ್ನಿ ಭಗವಂತನೆಡೆಗೆ ತನ್ನನ್ನು ಎತ್ತಿಹಿಡಿದಾಗ, ಭಾವಪೂರ್ಣತೆಯನ್ನು ಹಾಗೂ ಅತ್ಯಾನಂದವನ್ನು ಬಹಳ ಸುಲಭವಾಗಿ ಕಂಡುಕೊಳ್ಳುತ್ತದೆ. ಮಾನವ ಸಂಬಂಧದಲ್ಲಿ ಚೈತ್ಯಾತ್ಮಿಕ ಪ್ರೇಮ ಇತರ ಅಂಶಗಳೊಡನೆ ಮಿಶ್ರಣಗೊಳ್ಳುತ್ತದೆ, ಆ ಅಂಶಗಳು ಚೈತ್ಯವನ್ನು ಕೂಡಲೆ ಉಪಯೋಗಿಸುವುದನ್ನು ಅರಸುತ್ತವೆ ಮತ್ತು ಅದನ್ನು ಮಂಕಾಗಿಸುತ್ತವೆ, ಅದು ತನ್ನ ಪೂರ್ಣ ಗಾಢತೆಗಳಿಗೆ ಕೆಲವೇ ಅಪರೂಪದ ಕ್ಷಣಗಳಲ್ಲಿ ಅಭಿವ್ಯಕ್ತಿಯ ಮಾರ್ಗವೊಂದನ್ನು ದೊರಕಿಸುತ್ತದೆ. ಹಾಗಿಲ್ಲದಿದ್ದರೆ ಅದು ಅಂಶದ ರೂಪದಲ್ಲಿ ಮಾತ್ರ ಬರುತ್ತದೆ, ಹಾಗಿದ್ದಾಗ್ಯೂ ಮೂಲಭೂತವಾಗಿ ಪ್ರಾಣಿಕವಾದ ಪ್ರೇಮದಲ್ಲಿ ಎಲ್ಲ ಉಚ್ಚತರ ವಿಷಯಗಳನ್ನು ಜೊತೆಗೆ ಸೇರಿಸಿಕೊಂಡು ತನ್ನ ಪಾಲನ್ನು ಕೊಡುತ್ತದೆ, ಈ ಉಚ್ಚ ವಿಷಯಗಳೆಂದರೆ ಸೂಕ್ಷ್ಮತರ ಮಾಧುರ್ಯ, ಕೋಮಲತೆ, ಸ್ವಾರ್ಪಣೆ, ತ್ಯಾಗ, ಆತ್ಮವನ್ನು ಆತ್ಮ ಸಂಧಿಸುವಿಕೆ, ಸತ್ಯನಿಷ್ಠೆ, ಮಾನವ ಪ್ರೇಮವನ್ನು ಅದರಾಚೆಗೆ

ಮೇಲಕ್ಕೆತ್ತಿ ಆದರ್ಶೀಕರಣಗೊಳಿಸುವ ಉದಾತ್ತತೆಗಳಾಗಿದ್ದು ಇವು ಚೈತ್ಯದಿಂದ ಬರುತ್ತವೆ. ಮಾನಸಿಕ, ಪ್ರಾಣಿಕ ಹಾಗೂ ಭೌತಿಕವಾಗಿರುವ ಮಾನವ ಪ್ರೇಮದ ಇತರ ಆಂಶಗಳ ಮೇಲೆ ಚೈತ್ಯವು ಪ್ರಭುತ್ವ ಸಾಧಿಸಿದರೆ, ಆಳಿಕೆ ನಡೆಸಿದರೆ ಹಾಗೂ ಅವುಗಳನ್ನು ಬದಲಾವಣೆಗೆ ಒಳಪಡಿಸುವುದಾದರೆ, ಆಗ ಪೃಥ್ವಿಯ ಮೇಲೆ ಪ್ರೇಮವು ನಿಜವಾದ ವಿಷಯದ ಪ್ರತಿಬಿಂಬ ಇಲ್ಲವೆ ತಯಾರಿ, ಎರಡು ಜೀವನಗಳಲ್ಲಿ ಆತ್ಮ ಹಾಗೂ ಅದರ ಉಪಕರಣಗಳ ಸಮಗ್ರ ಏಕತೆ ಇವೆಲ್ಲ ಆಗಬಹುದಾಗಿದೆ. ಇಂತಹದರ ಅಪರಿಪೂರ್ಣ ತೋರಿಕೆಯೂ ಕೂಡ ಅಪರೂಪಕ್ಕೆ ನೋಡಲು ಸಿಗುವಂತಹದು.

ನಮ್ಮ ದೃಷ್ಟಿಯಲ್ಲಿ, ಸಾಮಾನ್ಯವಾದ ವಿಷಯವೆಂದರೆ, ಯೋಗದಲ್ಲಿ ಸ್ವಭಾವದ ಇಡೀ ಭಾವಾವೇಗವನ್ನು ಭಗವಂತನತ್ತ ಹೊರಳಿಸುವುದಾಗಿದೆ ಮತ್ತು ಉಳಿದದ್ದಕ್ಕಾಗಿ ನಿಜವಾದ ಆಧಾರ ಬರುವುದನ್ನು ಕಾದುಕೊಂಡಿರಬೇಕಾಗುತ್ತದೆ. ಉಚ್ಚತರವಾದ ವಿಷಯಗಳನ್ನು, ಸಾಮಾನ್ಯ ಪ್ರಜ್ಞೆಯ ಉಸುಕು ಹಾಗೂ ಕೆಸರಿನ ಮೇಲೆ ನಿರ್ಮಿಸುವುದು ಸುರಕ್ಷಿತವಾಗಿರಲಾರದು. ಅದು ಮೈತ್ರಿಯನ್ನು, ಒಡನಾಟವನ್ನು, ಅವಶ್ಯವೆಂದಾಗಿ, ಹೊರಗುಳಿಸುವುದಿಲ್ಲ, ಆದರೆ ಇವು ಕೇಂದ್ರ ಪ್ರೇಮಾಗ್ನಿಗೆ ಅಧೀನವಾಗಿರಬೇಕು. ಈ ಮಧ್ಯೆ ಯಾರಾದರೂ ಭಗವಂತನೊಡನಿರುವ ತನ್ನ ಸಂಬಂಧದಲ್ಲಿ ಮಗ್ನವಾಗಿರುವುದನ್ನು ತಮ್ಮ ಗುರಿಯನ್ನಾಗಿರಿಸಿಕೊಂಡಿದ್ದರೆ ಅದು ಸ್ವಾಭಾವಿಕ ಹಾಗೂ ಸಾಧನೆಗೆ ಪೂರ್ಣ ಶಕ್ತಿಯನ್ನು ಕೊಡುವಂತಹದು. ನಾವು ಅರಸುತ್ತಿರುವ ದೈವೀ ಪ್ರಜ್ಞೆಯು ಹೊರಹೊಮ್ಮಿಸುವ ಪ್ರಕಾಶವಾದಾಗ ಚೈತ್ಯ ಪ್ರೇಮವು ತನ್ನನ್ನು ತಾನು ಪೂರ್ತಿಯಾಗಿ ಕಂಡುಕೊಳ್ಳುತ್ತದೆ, ಅದಾಗುವವರೆಗೆ ಅದರ ಮಬ್ಬಾಗಿರಿಸಿದ ಸಮಗ್ರ ಆತ್ಮವನ್ನು ಮತ್ತು ಆಕಾರವನ್ನು ಹೊರಗೆ ತೋರಿಸಿಕೊಡಲು ಅದಕ್ಕೆ ಕಠಿಣವಾಗುತ್ತದೆ.

ತಾ.ಕ. (P.S.) ಮನಸ್ಸು ಹಾಗೂ ಭೌತಿಕ ಇವು ಆತ್ಮದ ಉಪಕರಣಗಳು. ಅವು ತಮಗಾಗಿಯೇ ಕಾರ್ಯನಿರತವಾದಾಗ ಅಜ್ಞಾನದ ಹಾಗೂ ಅಪರಿಪೂರ್ಣ ವಿಷಯಗಳನ್ನು ಉತ್ಪಾದಿಸುವವು – ಅವುಗಳನ್ನು ಚೈತ್ಯದ ಪ್ರಜ್ಞಾಪೂರ್ಣ ಉಪಕರಣಗಳನ್ನಾಗಿ ಮಾಡಿದಾಗ ಅವು ತಮ್ಮ ದೈವೀ ಫಲಪ್ರದತೆಯನ್ನು ಕಂಡುಕೊಳ್ಳುವವು, ಅದನ್ನೇ ನಾವು ಈ ಯೋಗದಲ್ಲಿ ಪರಿವರ್ತನೆಯೆಂದು ಕರೆಯುತ್ತೇವೆ.

**– ಶ್ರೀ ಅರವಿಂದರು**

# ಮಾನವ ಮಮತೆ ವಿಶ್ವಾಸಾರ್ಹವಾದದ್ದಲ್ಲ

**– ಅನುವಾದ: ಶ್ರೀ ಪುರುಷೋತ್ತಮ ಗಲಗಲಿ**

(23/808–09) ಮಾನವ ಮಮತೆ ನಿಸ್ಸಂಶಯವಾಗಿ ವಿಶ್ವಾಸಾರ್ಹವಲ್ಲದ್ದಾಗಿದೆ, ಏಕೆಂದರೆ ಅದು ಹೆಚ್ಚಾಗಿ ಸ್ವಾರ್ಥ ಹಾಗೂ ಆಸೆಗಳನ್ನು ಆಧಾರಿಸಿದೆ, ಅದು ಅಹಂಕಾರದ ಜ್ವಾಲೆ, ಕೆಲವೊಮ್ಮೆ ಕ್ಷುಬ್ಧ ಹಾಗೂ ಮಂಜುಕವಿದದ್ದು ಆಗಿರುತ್ತದೆ, ಇನ್ನು ಕೆಲವೊಮ್ಮೆ ಹೆಚ್ಚು ನಿರ್ಮಲ ಹಾಗೂ ವರ್ಣಮಯವಾಗಿರುತ್ತದೆ – ಕೆಲವೊಮ್ಮೆ ಹುಟ್ಟು ಗುಣ ಮತ್ತು ರೂಢಿಗಳ ತಳಹದಿ ಹೊಂದಿ ತಾಮಸಿಕವಾಗಿರುತ್ತದೆ, ಕೆಲವೊಮ್ಮೆ ರಾಜಸಿಕ, ಭಾವೋದ್ರೇಕದಿಂದ ಪೋಷಿತ ಹಾಗೂ ಕೊಡಕೊಳ್ಳುವಿಕೆಗಾಗಿ ಕೂಗಿಕೊಳ್ಳುವಂತಹದು ಆಗಿರುತ್ತದೆ. ಇನ್ನು ಕೆಲವೊಮ್ಮೆ ಹೆಚ್ಚು ಸಾತ್ವಿಕ ಮತ್ತು ನಿರಾಸಕ್ತ ಇಲ್ಲವೆ ತನ್ನೆಡೆಗೆ ನಿರಾಸಕ್ತಿಯಿಂದ ನೋಡಿಕೊಳ್ಳುವಂತಹದು ಆಗಿರುತ್ತದೆ. ಆದರೆ ಮೂಲಭೂತವಾಗಿ ಅದು ವೈಯಕ್ತಿಕ ಆವಶ್ಯಕತೆ, ಆಂತರಿಕವಾಗಿ ಇಲ್ಲವೆ ಬಾಹ್ಯದಲ್ಲಿ ಏನನ್ನೋ ಪ್ರತಿಯಾಗಿ ನಿರೀಕ್ಷಿಸುವಿಕೆ ಇವುಗಳ ಮೇಲೆ ಅವಲಂಬಿಸಿರುತ್ತದೆ. ಆ ಆವಶ್ಯಕತೆಗೆ ತೃಪ್ತಿ ಸಿಗದೆ ಇದ್ದಾಗ ಇಲ್ಲವೆ ಪ್ರತಿಯಾಗಿ ಬರುವುದು ನಿಂತು ಹೋದಾಗ, ಏನೂ ದೊರಕದೆ ಇದ್ದಾಗ ಅದು, ಬಹಳಷ್ಟು ಸಲ, ಕ್ಷೀಣವಾಗುತ್ತದೆ, ಇಲ್ಲವೆ ನಾಶವಾಗುತ್ತದೆ, ಇಲ್ಲವೆ ಅರೆಮನಸ್ಸಿನ ಇಲ್ಲವೆ ಭೂತಕಾಲದ ರೂಢಿಯ ಪಳೆಯುಳಿಕೆಯಾಗಿ ಅಸ್ತಿತ್ವದಲ್ಲಿರುತ್ತದೆ, ಇಲ್ಲವೆ ತೃಪ್ತಿಗಾಗಿ ಬೇರೊಂದು ಕಡೆಗೆ ಹೊರಳುತ್ತದೆ. ಅಹಂಕಾರ ಹೆಚ್ಚು ತೀಕ್ಷ್ಣವಾದಂತೆ ಅದು ತುಮುಲ, ತಾಕಲಾಟ, ಜಗಳಗಳು, ಎಲ್ಲ ಬಗೆಯ ಅಹಂಕಾರಿಕ ತಲ್ಲಣಗಳು ಸ್ವಾರ್ಥ, ಸುಲಿಗೆಯ ಮನೋವೃತ್ತಿ, ಕೋಪೋದ್ರೇಕ ಹಾಗೂ ದ್ವೇಷಗಳಿಂದಾಗುವ ಅಚಾತುರ್ಯ, ಸ್ನೇಹಭಂಗ ಇವೆಲ್ಲವುಗಳ ತೊಂದರೆಗೆ ಒಳಗಾಗುವ ಸಾಧ್ಯತೆಯಿರುತ್ತದೆ. ಈ ಮಮತೆಗಳು ಉಳಿದುಕೊಳ್ಳುವುದಿಲ್ಲವೆಂದಲ್ಲ – ತಾಮಸಿಕ ಹುಟ್ಟುಗುಣದ ಮಮತೆಗಳು, ಜನರನ್ನು ವಿಭಜನೆಗೊಳಪಡಿಸುವ ಏನೆಲ್ಲ ವಿಷಯಗಳು ಇದ್ದಾಗ್ಯೂ, ರೂಢಿಗತವಾಗಿ ಬಂದುದರಿಂದ ಉಳಿದುಕೊಳ್ಳುತ್ತವೆ, ಉದಾಹರಣೆಗೆ ಕೆಲವೊಂದು ಕೌಟುಂಬಿಕ ಮಮತೆಗಳು, ರಾಜಸಿಕ ಮಮತೆಗಳು, ಎಲ್ಲ ಕ್ಷೋಭೆ, ಅಸಾಮರಸ್ಯ ಮತ್ತು ಭೀಕರವಾಗಿ ನಡೆಯುವ ಸ್ನೇಹಭಂಗಗಳು ಇದ್ದಾಗ್ಯೂ ಕೆಲವೊಮ್ಮೆ ಉಳಿದುಕೊಳ್ಳುವವು, ಏಕೆಂದರೆ ಮನುಷ್ಯನಿಗೆ ಇನ್ನೊಬ್ಬರ

ಪ್ರಾಣಿಕ ಅವಶ್ಯಕತೆ ಇರುತ್ತದೆ, ಆ ಕಾರಣಕ್ಕಾಗಿ ಇಲ್ಲವೆ ಒಬ್ಬರಿಗೆ ಇನ್ನೊಬ್ಬರ ಅವಶ್ಯಕತೆ ಇರುವುದರಿಂದ ಅವು ಅಂಟಿಕೊಂಡು ಉಳಿದುಕೊಳ್ಳುತ್ತವೆ. ಅವರು ಸತತ ಒಬ್ಬರಿಂದ ಇನ್ನೊಬ್ಬರು ಬೇರ್ಪಟ್ಟು ಹೋಗುತ್ತಾರೆ, ಮರಳಿ ಬರುತ್ತಾರೆ, ಹಾಗೆ ಮರಳಿ ಬರುವುದು ಮತ್ತೆ ಬೇರ್ಪಟ್ಟು ಹೋಗುವುದಕ್ಕಾಗಿಯೇ ಇರುತ್ತದೆ, ಇಲ್ಲವೆ ಜಗಳಾಡಿ ರಾಜಿಯಾಗುವವರೆಗೆ, ಹಾಗೆಯೇ ರಾಜಿಯಿಂದ ಜಗಳದವರೆಗೆ ಮುಂದುವರಿಯುತ್ತಾರೆ. ಸಾತ್ವಿಕ ಮಮತೆಗಳು, ಕರ್ತವ್ಯ ದೃಷ್ಟಿಯಿಂದ, ಆದರ್ಶ ಪಾಲನೆಯ ಕಾರಣದಿಂದ ಇಲ್ಲವೆ ಬೇರೆ ಇನ್ನಾವುದೋ ಆಧಾರದ ಮೇಲೆ ಉಳಿದುಕೊಳ್ಳುತ್ತವೆ, ಆದಾಗ್ಯೂ ಮೊದಲಿನ ತೀಕ್ಷ್ಣತೆ, ಗಾಢತೆ ಇಲ್ಲವೆ ಉಜ್ವಲತೆ ಉಳಿದುಕೊಂಡಿರುವುದಿಲ್ಲ. ಚೈತ್ಯಾಂಶವು ಸಾಕಷ್ಟು ಬಲವುಳ್ಳದ್ದಾಗಿ ಇನ್ನುಳಿದ ಅಂಶಗಳ ಮೇಲೆ ಪ್ರಭುತ್ವ ಸಾಧಿಸಿ ಅವುಗಳನ್ನು ವರ್ಣಮಯವಾದವುಗಳನ್ನಾಗಿ ಮಾಡಿದಾಗ ಮಾತ್ರ ಮಾನವ ಮಮತೆಗಳಲ್ಲಿ ನಿಜವಾದ ವಿಶ್ವಾಸಪಾತ್ರತೆ ಬರುತ್ತದೆ. ಆ ಕಾರಣದಿಂದಾಗಿಯೆ, ಮಾನವ ಮಮತೆಗಳಲ್ಲಿ, ಸ್ನೇಹವು, ಬಹಳಷ್ಟು ಸಲ, ಬಹಳ ಕಾಲದವರೆಗೆ ಉಳಿದುಕೊಳ್ಳುತ್ತದೆ, ಏಕೆಂದರೆ ಅಲ್ಲಿ ಪ್ರಾಣಿಕದ ಮಧ್ಯ ಪ್ರವೇಶಿಸುವಿಕೆ ಅತಿ ಕಡಿಮೆ ಪ್ರಮಾಣದಲ್ಲಿರುತ್ತದೆ, ಅದು ಅಹಂಕಾರದ ಜ್ವಾಲೆಯಾಗಿದ್ದರೂ ಶಾಂತ ಹಾಗೂ ಶುದ್ಧವಾಗಿರುವ ಸಾಧ್ಯತೆಯಿದೆ ಮತ್ತು ಅದು, ಯಾವಾಗಲೂ ಸೌಹಾರ್ದತೆ ಹಾಗೂ ಪ್ರಕಾಶ ನೀಡುವಂತಹದಿರುತ್ತದೆ. ಆದಾಗ್ಯೂ ವಿಶ್ವಾಸಪಾತ್ರವಾದ ಸ್ನೇಹ ಬಹುಮಟ್ಟಿಗೆ, ಯಾವಾಗಲೂ ಕೇವಲ ಕೆಲವರಲ್ಲಿರುವುದು ಕಂಡುಬರುತ್ತದೆ. ಪ್ರೀತಿ ತೋರಿಸುವ, ನಿಸ್ವಾರ್ಥದಿಂದ ವಿಶ್ವಾಸಪಾತ್ರರಾಗಿರುವ ಮಿತ್ರರ ಒಂದು ಹಿಂಡೇ ಇದೆ ಎಂದು ಕಂಡುಬಂದರೆ, ಅದು ಕೇವಲ ಒಂದು ಭ್ರಮೆಯೆಂದು, ಯಾವ ಅನುಮಾನವಿಲ್ಲದೆ ಭಾವಿಸಬಹುದು. ಸಂದರ್ಭ ಯಾವುದೇ ಇರಲಿ, ಮಾನವ ಮಮತೆಗೆ ಅದರ ಮೌಲ್ಯ ಏನೇ ಆಗಿರಲಿ, ಒಂದು ಸ್ಥಾನವಿದೆ, ಏಕೆಂದರೆ ಅದರ ಮೂಲಕ ಚೈತ್ಯವು, ತೋರಿಕೆಯದಾಗಿರುವುದಕ್ಕಿಂತ ನಿಜವಾದ, ಅಪರಿಪೂರ್ಣವಾಗಿರುವುದಕ್ಕಿಂತ ಪರಿಪೂರ್ಣವಾದ, ಅನುಭವವನ್ನು ಇಷ್ಟಪಡಲು ತಯಾರಾಗುವವರೆಗೆ, ತನಗೆ ಅವಶ್ಯವಾಗಿರುವ ಭಾವನಾತ್ಮಕ ಅನುಭವವನ್ನು ಪಡೆಯುತ್ತದೆ. ಪ್ರಜ್ಞೆಯು ಉಚ್ಚ ಸ್ತರಕ್ಕೇರಬೇಕಾಗಿರುವುದರಿಂದ, ಹೃದಯದ ಚಟುವಟಿಕೆಗಳೂ ಕೂಡ ಉಚ್ಚ ಸ್ತರಕ್ಕೇರಬೇಕಾಗಿದೆ ಮತ್ತು ತಮ್ಮ ಗುಣಲಕ್ಷಣಗಳ ತಳಹದಿಯನ್ನು ಬದಲಿಸಬೇಕಾಗಿದೆ. ಭಗವಂತನಲ್ಲಿ ಎಲ್ಲ ಜೀವನವನ್ನು ಹಾಗೂ ಪ್ರಜ್ಞೆಯನ್ನು

ಸ್ಥಾಪಿಸುವುದೇ ಯೋಗವಾಗಿದೆ, ಹಾಗೆಯೇ ಪ್ರೇಮ ಹಾಗೂ ಮಮತೆಗಳು ಭಗವಂತನಲ್ಲಿ ನೆಲೆಕಂಡುಕೊಳ್ಳುವುದು ಹಾಗೂ ಆಧ್ಯಾತ್ಮಿಕವಾಗಿ, ಚೈತ್ಯಾತ್ಮಿಕವಾಗಿ ಅವನಲ್ಲಿ ಏಕತೆ ಪಡೆಯುವುದು ಅವುಗಳ ತಳಹದಿಯಾಗಬೇಕು – ಉಳಿದ ಸಂಗತಿಗಳನ್ನು ಬದಿಗಿರಿಸಿ ಭಗವಂತನತ್ತ ಸಾಗುವುದು ಇಲ್ಲವೆ ಭಗವಂತನನ್ನು ಮಾತ್ರ ಅರಸುವುದು ಬದಲಾವಣೆಗೆ ನೇರ ಮಾರ್ಗವಾಗಿದೆ. ಅದರರ್ಥ ಅನಾಸಕ್ತಿ – ಅದು ಮಮತೆಯನ್ನು ನಿರ್ಮೂಲ ಮಾಡುವುದಲ್ಲ, ಇಲ್ಲವೆ ಕೊರೆಯುವಂತೆ ಉದಾಸೀನ ಮಾಡುವುದಲ್ಲ. ಆದರೆ ಕ್ಷ ನು ತನ್ನ ಪ್ರಾಣಿಕ ಭಾವನೆಗಳನ್ನು, ಅವು ಇರುವ ಹಾಗೆ, ಭಗವಂತನಲ್ಲಿ ಎತ್ತೊಯ್ಯಲು ಬಯಸುತ್ತಾನೆ. ಅವನನ್ನು ಪ್ರಯತ್ನ ಮಾಡಲು ಬಿಡು, ಅವನಲ್ಲಿ ತಪ್ಪು ಕಂಡುಹಿಡಿದು ಅವನನ್ನು ಖಂಡಿಸಿ ತೊಂದರೆ ಕೊಡಬೇಡ. ಹಾಗೆ ಮಾಡಲು ಸಾಧ್ಯವಾಗದಿದ್ದರೆ ಅವನೇ ಸ್ವತಃ ಅದನ್ನು ತನಗಾಗಿ ಕಂಡುಕೊಳ್ಳಬೇಕು.

(23/809–10) ನಿನ್ನ ಪ್ರಾಣಿಕ, ನಿನ್ನೊಡನೆ ಸಂಬಂಧವಿರಿಸಿಕೊಂಡವರಿಂದ ನಿರೀಕ್ಷಿಸಿದ ತೃಪ್ತಿಯನ್ನು ಕಂಡುಕೊಳ್ಳದೆ ಇರುವುದಕ್ಕೆ ಕಾರಣ ನಿನ್ನ ಸ್ವಭಾವವಲ್ಲ, ಇಲ್ಲವೆ ಕೆಟ್ಟ ಅದೃಷ್ಟವೂ ಅಲ್ಲ. ಈ ಸಂಬಂಧಗಳು ಎಂದಿಗೂ ಪೂರ್ಣ ಇಲ್ಲವೆ ಶಾಶ್ವತ ತೃಪ್ತಿಯನ್ನು ತಂದುಕೊಡಲಾರವು. ಅವು ಹಾಗೆ ತಂದುಕೊಡುತ್ತಿದ್ದರೆ ಆಗ ಮಾನವನು ಭಗವಂತನನ್ನು ಅರಸಲು ಕಾರಣ ಎಂದೆಂದಿಗೂ ಉಳಿಯುತ್ತಿರಲಿಲ್ಲ. ಅವನು ಪೃಥ್ವಿಯ ಮೇಲಿನ ಸಾಮಾನ್ಯ ಜೀವನದಲ್ಲಿ ತೃಪ್ತಿ ಹೊಂದಿ ಉಳಿದುಬಿಡುತ್ತಿದ್ದನು. ಭಗವಂತನನ್ನು ಕಂಡುಕೊಂಡಾಗ ಮತ್ತು (ಸಾಮಾನ್ಯ) ಪ್ರಜ್ಞೆ ನಿಜವಾದ ಪ್ರಜ್ಞೆಯಲ್ಲಿ ಮೇಲಕ್ಕೆತ್ತಲ್ಪಟ್ಟಾಗ ಮಾತ್ರ ಇತರರೊಡನೆ ನಿಜವಾದ ಸಂಬಂಧ ಬರಲು ಸಾಧ್ಯ.

(23/85–6) ಭಗವಂತನಿಗೆ ಸಮೀಪವಾಗುವುದಕ್ಕೆ ಪ್ರೇಮದ ಹಾಗೂ ಭೂತದಯೆಯ ಅಭಾವ ಅವಶ್ಯವಾಗಿರುವುದಿಲ್ಲ, ತದ್ವಿರುದ್ಧವಾಗಿ, ಇತರರೊಡನೆ ಹೊಂದುವ ಸಾಮೀಪ್ಯದ ಹಾಗೂ ಏಕತೆಯ ಭಾವನೆಯು, ಸಾಧಕನು ಭಗವಂತನಿಗೆ ಹತ್ತಿರವಾಗುವುದರಿಂದ ಹಾಗೂ ಅವನೊಡನೆ ಏಕತೆ ಪಡೆಯವುದರಿಂದ ದೊರಕಿಸುವ ದೈವೀ ಪ್ರಜ್ಞೆಯ ಭಾಗವಾಗಿರುತ್ತದೆ.

ಇನ್ನೊಂದೆಡೆಗೆ ಮಾನವ ಸಮಾಜ, ಮಾನವ ಸ್ನೇಹ, ಪ್ರೇಮ, ಮಮತೆ, ಭೂತದಯೆ ಇವೆಲ್ಲ ಹೆಚ್ಚಾಗಿ ಹಾಗೂ ಸಾಮಾನ್ಯವಾಗಿ – ಇಡಿಯಾಗಿ ಅಲ್ಲ

ಅಥವಾ ಎಲ್ಲ ಸಂದರ್ಭಗಳಲ್ಲೂ ಅಲ್ಲ – ಪ್ರಾಣಿಕ ಆಧಾರದ ಮೇಲೆ ಸ್ಥಾಪಿತವಾಗಿರುತ್ತವೆ ಮತ್ತು ಅವುಗಳ ಕೇಂದ್ರದಲ್ಲಿ ಅಹಂಕಾರದ ಹಿಡಿತಕ್ಕೆ ಒಳಗಾಗಿರುತ್ತವೆ. ಇನ್ನೊಬ್ಬರ ಪ್ರೀತಿಯಿಂದ ಬರುವ ಸಂತೋಷಕ್ಕಾಗಿ, ಸಂಪರ್ಕದಿಂದ ಅಹಂಕಾರವನ್ನು ಭವ್ಯವಾಗಿರಿಸುವುದಕ್ಕಾಗಿ, ಮನೋಭಾವನೆಗಳು ಪರಸ್ಪರರಲ್ಲಿ ಒಳನುಗ್ಗುವಿಕೆ, ಪ್ರಾಣಿಕ ವಿನಿಮಯದಿಂದ ಬರುವ ಉಲ್ಲಾಸ ಇಂತಹವೆಲ್ಲ ಮನುಷ್ಯನ ವ್ಯಕ್ತಿತ್ವಕ್ಕೆ ಪೋಷಣೆ ನೀಡುತ್ತವೆ, ಇವೆಲ್ಲವುಗಳನ್ನು ಜನರು ಪ್ರೇಮದಿಂದ ಕಾಣುತ್ತಾರೆ. ಇತರ ಹಾಗೂ ಇನ್ನೂ ಹೆಚ್ಚು ಸ್ವಾರ್ಥದಿಂದ ಕೂಡಿದ ಉದ್ದೇಶಗಳು ಸಾರಭೂತ ಜೀವನದಲ್ಲಿ ಸೇರಿಕೊಳ್ಳುತ್ತವೆ. ಸಹಜವಾಗಿ ಉಚ್ಚತರ ಆಧ್ಯಾತ್ಮಿಕ, ಚೈತ್ಯಾತ್ಮಿಕ, ಮಾನಸಿಕ ಹಾಗೂ ಪ್ರಾಣಿಕ ಅಂಶಗಳಿವೆ, ಅವು ಒಳಸೇರುತ್ತವೆ ಇಲ್ಲವೆ ಒಳಸೇರುವ ಸಾಧ್ಯತೆಯಿರುತ್ತದೆ. ಇದೇ ಕಾರಣದಿಂದಾಗಿ ಯಾವುದೋ ಒಂದು ಹಂತದಲ್ಲಿ, ತೋರಿಬರುವ ಕಾರಣ ಇರಲಿ, ಬಿಡಲಿ, ಜಗತ್ತು, ಜೀವನ, ಮಾನವ ಸಮಾಜ ಹಾಗೂ ಸಂಬಂಧಗಳು, ಲೋಕೋಪಕಾರ (ಇದೂ ಕೂಡ ಉಳಿದವುಗಳ ಹಾಗೆ ಅಹಂಕಾರದಿಂದ ಪೀಡಿತವಾಗಿರುತ್ತದೆ) ಇವು ನೀರಸವಾಗಲು ಪ್ರಾರಂಭಿಸುತ್ತವೆ.

**– ಶ್ರೀ ಅರವಿಂದರು**

(16/297) ನಿಜವಾದ ಪ್ರೇಮ ಏಕೈಕವಾಗಿದೆ – ಅದು ದೈವೀ ಪ್ರೇಮ, ಇತರ ಎಲ್ಲ ಪ್ರೇಮಗಳು ಕ್ಷೀಣಿಸಿದಂತಹವು, ಮಿತಿಗೊಳಪಟ್ಟಿರುವಂತಹವು, ಮತ್ತು ಆ ಪ್ರೇಮವನ್ನು ವಿರೂಪಗೊಳಿಸಿದಂತಹವು ಆಗಿರುತ್ತವೆ. ಭಗವಂತನಿಗಾಗಿ ಭಕ್ತನ ಪ್ರೇಮ ಕೂಡ ಕ್ಷೀಣಿಸುವಂತಹದು ಮತ್ತು ಅಹಂಕಾರದಿಂದ ಕಲಂಕಿತವಾದಂತಹದು ಆಗಿರುತ್ತದೆ. ಆದರೆ ಬಹಳ ಸ್ವಾಭಾವಿಕವಾಗಿ ಮನುಷ್ಯ ತಾನು ಪ್ರೀತಿಸಿದ ಭಗವಂತನ ಹಾಗೆ ಆಗಲು ಪ್ರಾರಂಭಿಸಿದಾಗ, ಆ ಭಕ್ತನು ನಿಷ್ಕಪಟನಾಗಿದ್ದರೆ, ತಾನು ಆರಾಧಿಸುವ ಭಗವಂತನ ಹಾಗೆ ಆಗಲು ಪ್ರಾರಂಭಿಸುತ್ತಾನೆ ಮತ್ತು ಹೀಗೆ ಅವನ ಪ್ರೇಮ ಹೆಚ್ಚು ಹೆಚ್ಚಾಗಿ ಶುದ್ಧವಾಗುತ್ತದೆ. ಮನುಷ್ಯ ತಾನು ಪ್ರೀತಿಸಿದ ವ್ಯಕ್ತಿಯಲ್ಲಿ ಭಗವಂತನನ್ನು ಆರಾಧಿಸುವುದು ಈ ಸಮಸ್ಯೆಗೆ ಪರಿಹಾರವೆಂದು ಹಲವಾರು ಸಲ ಸೂಚಿಸಲಾಗಿದೆ, ಆದರೆ ಮಾನವನ ಹೃದಯ ಹಾಗೂ ಯೋಚನೆಗಳು ಅತ್ಯಂತ ಶುದ್ಧವಾಗಿರದೆ ಹೋದಾಗ ಅದು ಶೋಚನೀಯವಾದ ಹೀನ ಸ್ಥಿತಿಗೆ ಕೊಂಡೊಯ್ಯುವುದು.

(6/372–73) ಸಾಮಾಜಿಕ ಸಂಬಂಧಗಳಲ್ಲಿ ದೊಡ್ಡ ದೌರ್ಬಲ್ಯವಿದೆ, ಅದು ಬಹಳ ದೊಡ್ಡ ದೌರ್ಬಲ್ಯ. ಆ ಕಾರಣದಿಂದಾಗಿಯೇ ಮನುಷ್ಯ ಸಿಟ್ಟಿಗೇಳುತ್ತಾನೆ, ಅದರ ಸೆಳವಿನಲ್ಲಿ ಸಿಕ್ಕುಬೀಳುತ್ತಾನೆ ಮತ್ತು ಮಾತನಾಡಬಾರದ ವಿಷಯಗಳ ಬಗ್ಗೆ ಮಾತನಾಡುತ್ತಾನೆ.

ಚಿತ್ತಕ್ಷೋಭೆ, ಹಿಂಸೆ, ಕ್ರೋಧ ಇವೆಲ್ಲ ವಿಷಯಗಳಲ್ಲಿ ಪ್ರತಿಯೊಂದೂ ದೌರ್ಬಲ್ಯದ ಸಂಕೇತವಾಗಿರುತ್ತದೆ. ವಿಶೇಷವಾಗಿ ಯಾರಾದರೂ ಮಾತನಾಡುತ್ತಿರುವಾಗ ಅದರ ಸೆಳವಿನಲ್ಲಿ ಸಿಕ್ಕು ಮಾತನಾಡಬಾರದೆ ಇದ್ದುದ್ದನ್ನು ಹೇಳಿದರೆ ಆದು ನಿಜವಾಗಿ ಭೀಕರ ಮಾನಸಿಕ ದೌರ್ಬಲ್ಯವಾಗಿರುತ್ತದೆ – ದೌರ್ಬಲ್ಯ ಮಾನಸಿಕ ಮತ್ತು ಪ್ರಾಣಿಕವಾಗಿದ್ದು ಭಯಾನಕವಾಗಿರುತ್ತದೆ ನೀವು ಜಗತ್ತಿನಲ್ಲಿರುವ ಎಲ್ಲ ಬಗೆಯ ಅವಮಾನಕರ ಮಾತುಗಳನ್ನು ಕೇಳಬಹುದು, ಜನರು ಸಾಧ್ಯವಿರುವ ಮೂರ್ಖತನದ ಎಲ್ಲ ವಿಷಯಗಳನ್ನು ನಿಮಗೆ ಹೇಳಬಹುದು, ದುರ್ಬಲರಾಗಿರದಿದ್ದರೆ, ಬಾಹ್ಯದಲ್ಲಿ ಮುಗುಳ್ನಗೆ ಬೀರದೆ ಇರಬಹುದು, ಏಕೆಂದರೆ ಹಾಗೆ ಮಾಡುವುದು ಸೌಜನ್ಯದ ಲಕ್ಷಣವಾಗಿರುವುದಿಲ್ಲ, ಆದರೆ ನಿಮ್ಮ ಅಂತರಂಗದ ಆಳದಲ್ಲಿ ನೀವು ಮುಗುಳ್ನಗುತ್ತಿರುತ್ತೀರಿ, ಅದು ಸಾಗಿಹೋಗಲು ಬಿಟ್ಟುಕೊಡುತ್ತೀರಿ, ಅದು ನಿಮ್ಮನ್ನು ಸ್ಪರ್ಶಿಸುವುದಿಲ್ಲ.... ಇಲ್ಲಿ ಸಲಹೆ ನೀಡಿದ ಪ್ರಕಾರ ನಿಮ್ಮ ಮನಸ್ಸನ್ನು ಶಾಂತವಾಗಿರಿಸಿಕೊಳ್ಳುವುದನ್ನು ರೂಢಿಯಲ್ಲಿ ತಂದಿದ್ದರೆ, ನಿಮ್ಮಂತರಂಗದಲ್ಲಿ ಸತ್ಯದ ಗ್ರಹಿಕೆ ಇರುವುದಾದರೆ, ನೀವು ಏನನ್ನೂ ಕೇಳಿಸಿಕೊಳ್ಳಬಹುದು, ಅದು ಕಂಪನವೆಂದು ತೋರಿಬರುವಂತಹದನ್ನೂ ಸೃಷ್ಟಿಸುವುದಿಲ್ಲ – ಎಲ್ಲವೂ ಸಂಪೂರ್ಣವಾಗಿ ಸ್ಥಿರವಾಗಿ, ಶಾಂತವಾಗಿ ಇರುತ್ತದೆ. ನಾವು ಸ್ವಲ್ಪ ಸಮಯದ ಹಿಂದೆ ಮಾತನಾಡುತ್ತಿದ್ದ (ಇಂತಹ ಎಲ್ಲ ಮಾತುಗಳಿಗೆ) ಸಾಕ್ಷಿಯೊಬ್ಬನು ಅಲ್ಲಿದ್ದು ಈ ಹಾಸ್ಯ ಪ್ರಧಾನ ನಾಟಕವನ್ನು ನೋಡುತ್ತಿದ್ದರೆ, ನಿಶ್ಚಿತವಾಗಿ ಮುಗುಳ್ನಗು ಬೀರುವನು.

ತನ್ನೆಲ್ಲ ಹಿಂಸೆ, ಕ್ರೋಧಗಳನ್ನು ನಿಮ್ಮ ಮೇಲೆ ಎಸೆಯುವ ವ್ಯಕ್ತಿಯಿಂದ ಬರುವ ಕಂಪನಗಳು ನಿಮ್ಮ ಭಾವನೆಗೆ ಬಂದರೆ, ನೀವು ಅವುಗಳನ್ನು ನಿಮ್ಮ ಭಾವನೆಗೆ ತಂದುಕೊಂಡರೆ – ಮೊದಲಿಗೆ ಆವುಗಳ ಪ್ರಭಾವ ನಿಮ್ಮ ಮೇಲಾಗುತ್ತದೆ – ಮತ್ತು ಆಗ ಒಮ್ಮೆಲೆ ಪ್ರತಿಕ್ರಿಯೆಯೊಂದಿರುತ್ತದೆ, ನೀವು ಅವನ ಕ್ರೋಧದ ಪ್ರಭಾವಕ್ಕೆ ಒಳಗಾದರೆ ನೀವು ಅವನಷ್ಟೆ ದುರ್ಬಲರಾಗಿರುತ್ತೀರಿ ಎಂಬುದು ನಿಶ್ಚಿತ.

(1/246) ಮಾನವರು ಇತರರೊಡನಿರುವ ತಮ್ಮ ಸಂಬಂಧಕ್ಕೆ ಭೌತಿಕ, ಪ್ರಾಣಿಕ ಹಾಗೂ ಮಾನಸಿಕ ಸಂಪರ್ಕಗಳನ್ನು ಆಧಾರವಾಗಿರಿಸಿಕೊಂಡಿರುತ್ತಾರೆ, ಆ ಕಾರಣದಿಂದಾಗಿ ಯಾವಾಗಲೂ ವೈಮನಸ್ಯ ಹಾಗೂ ದುಃಖ ಉಂಟಾಗುತ್ತವೆ. ತದ್ವಿರುದ್ಧವಾಗಿ ಚೈತ್ಯಾತ್ಮಿಕ (ಒಂದು ಆತ್ಮ ಇನ್ನೊಂದು ಆತ್ಮದೊಡನೆ ಇರುವ) ಸಂಬಂಧದ ಆಧಾರ ಪಡೆದರೆ ಅವರು ತೊಂದರೆಗೀಡಾದಾಗ ತೋರಿಕೆಗಳ ಹಿಂದೆ ಗಾಢ ಹಾಗೂ ತಾಳಿಕೊಳ್ಳುವ ಸಾಮರಸ್ಯವಿರುವುದನ್ನು ಕಂಡುಕೊಳ್ಳುವರು, ಈ ಸಾಮರಸ್ಯ, ಜೀವನದ ಎಲ್ಲ ಚಟುವಟಿಕೆಗಳಲ್ಲಿ ಅಭಿವ್ಯಕ್ತಿ ಪಡೆಯುವುದು ಮತ್ತು ವೈಮನಸ್ಯ ಹಾಗೂ ದುಃಖಗಳ ಸ್ಥಾನದಲ್ಲಿ ಶಾಂತಿ ಹಾಗೂ ದಿವ್ಯಾನಂದಗಳು ಬರುವವು.

(16/297–98) **ಪ್ರಶ್ನೆ:** *ನಮ್ಮಲ್ಲಿ ದೋಷಗಳಿರುವ ಕಾರಣದಿಂದಾಗಿ ಅವು ಇತರರಲ್ಲಿ ಇರುವುದನ್ನು ಸಹಿಸಲಿಕ್ಕಾಗುವುದಿಲ್ಲ, ಅಲ್ಲವೆ? ನಮಗೆ ಆಗುವ ಆಘಾತಕ್ಕೆ ಉಗಮವೆಲ್ಲಿರುತ್ತದೆ?*

**ಶ್ರೀಮಾತೆ:** ಹೌದು, ಸಾಮಾನ್ಯವಾಗಿ, ನಿಮ್ಮಲ್ಲಿಯೇ ಇರುವ ದೋಷಗಳ ಕಾರಣದಿಂದಾಗಿಯೇ ಅವು ಇತರರಲ್ಲಿ ಕಂಡುಬಂದಾಗ ನಿಮಗೆ ಆಘಾತಕರವೆನಿಸುವುದು.

ನಂತರ, ಇತರರು ನೀವಿರುವ ರೀತಿಯನ್ನು ಪ್ರತಿಫಲಿಸಿ ತೋರಿಸುವ ಕನ್ನಡಿಯಂತೆ ಇರುವರೆಂಬುದನ್ನು ನೀವು ತಿಳಿದುಕೊಳ್ಳುವಿರಿ.

(17/36) **ಪ್ರಶ್ನೆ:** *"'ಯ'ನು ನಿನ್ನ ಉಪದೇಶವನ್ನು ಗಂಭೀರವಾಗಿ ತೆಗೆದುಕೊಂಡರೆ ನನಗೆ ಆಶ್ಚರ್ಯವಾಗುವು" ಎಂದು ನನಗೆ ಹೇಳಿದ್ದಿರಿ. ಅದರರ್ಥ ಮನುಷ್ಯ ಇನ್ನೊಬ್ಬರ ಉಪದೇಶವನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು ಎಂದಾಗುವುದೆ?*

**ಶ್ರೀಮಾತೆ:** ಸಾಮಾನ್ಯ ನಿಯಮದ ಪ್ರಕಾರ ಯಾರಾದರೂ ನಿಮಗೆ ಉಪದೇಶ ಕೊಡಲು ಕೇಳಿದಾಗ ಮಾತ್ರ ಕೊಡಬೇಕು. ಆದರೆ ನೀವು ಇತರರಿಂದ ಉಪದೇಶ ಪಡೆದಾಗ ಅದನ್ನು ಕುರಿತು ಲಕ್ಷ್ಯಪೂರ್ವಕವಾಗಿ ಯೋಚಿಸಬೇಕು ಮತ್ತು ಅದರ ಪ್ರಯೋಜನ ಪಡೆಯಲು ಯತ್ನಿಸಬೇಕು.

**– ಶ್ರೀಮಾತೆ**

# ಉಪಶಮನ ಮಾಡುವದಕ್ಕೆ ಅತಿ ಶಾಂತವಾದ ವಿಧಿ

**– ಅನುವಾದ: ಡಾ॥ ಶ್ರೀಮತಿ ಮಧುಮತಿ ಕುಲಕರ್ಣಿ**

(23/822) ಇತರರನ್ನು ಕುರಿತಾಗಿರುವ ಭಾವನೆಗಳಲ್ಲಿ ಅಸಮಾನತೆ, ಇಷ್ಟಾನಿಷ್ಟಗಳು, ಇವೆಲ್ಲ ಮಾನವನ ಪ್ರಾಣಿಕ ಸ್ವಭಾವದಲ್ಲಿ ಆಳವಾಗಿ ಬೇರು ಬಿಟ್ಟರುತ್ತವೆ. ಇದು ಹಾಗಿರುವುದು ಏಕೆಂದರೆ, ಕೆಲವರು ಒಬ್ಬನಲ್ಲಿರುವ ಅವನದೇ ಆದ ಪ್ರಾಣಿಕ ಮನೋಭಾವದೊಂದಿಗೆ ಸಾಮರಸ್ಯ ಕಂಡುಕೊಳ್ಳುತ್ತಾರೆ, ಇನ್ನು ಕೆಲವರು ಕಂಡುಕೊಳ್ಳುವುದಿಲ್ಲ. ಅಲ್ಲದೆ ಪ್ರಾಣಿಕ ಅಹಂಕಾರವಿರುತ್ತದೆ, ಅದಕ್ಕೆ ನೋವಾದರೆ ಇಲ್ಲವೆ ಜನರು ಅದರ ಒಲವಿನ ಪ್ರಕಾರ ಕಾರ್ಯ ಮಾಡದಿದ್ದರೆ, ಇಲ್ಲವೆ ಅವರು ಮಾಡಬೇಕೆಂದುದು ಅಹಂಕಾರದ ಬಯಕೆಯ ಪ್ರಕಾರ ಇರದಿದ್ದರೆ ಅದಕ್ಕೆ ಅಸಂತೋಷವಾಗುತ್ತದೆ.

(23/824) ಜಗಳಗಳು, ಖಂಡನೆಗಳು ಸಾಧನೆಯ ಭಾಗಗಳಲ್ಲವೆಂದು ನಾನೀಗಾಗಲೆ ಹೇಳಿದ್ದೇನೆ. ನೀನು ಹೇಳುವ ತಿಕ್ಕಾಟ, ಕದನಗಳು ಬಾಹ್ಯ ಜಗತ್ತಿನಲ್ಲಿರುವಂತೆ ಪ್ರಾಣಿಕ ಅಹಂಕಾರದೊಡನೆ ಆಗುವ ಘರ್ಷಣೆಗಳಾಗಿರುತ್ತವೆ. ಲೈಂಗಿಕ ಪ್ರೇರಣೆ ಹಾಗೂ ಕ್ರಿಯೆಗಳು ಸಾಧನೆಯ ಭಾಗಗಳಲ್ಲವೆಂದು ಹೇಳುವ ಹಾಗೆ ಜುಗುಪ್ಸೆ, ವೈಷಮ್ಯ, ಸೇರದಿರುವಿಕೆ, ಜಗಳಾಡುವಿಕೆಗಳು ಇವೆಲ್ಲವುಗಳ ಮೇಲೆ ಇನ್ನೂ ಹೆಚ್ಚು ಒತ್ತುಕೊಟ್ಟು ಅವು ಸಾಧನೆಯ ಭಾಗಗಳಲ್ಲ ಎಂದು ಸಾರಿ ಹೇಳಬೇಕಾಗಿಲ್ಲ. ಸಾಮರಸ್ಯ, ಸದಿಚ್ಛೆ, ಸಹನಶೀಲತೆ ಹಾಗೂ ಸಮತೆ ಇವು ಸಾಧಕರ ಮಧ್ಯದ ಸಂಬಂಧಗಳಲ್ಲಿ ಅವಶ್ಯವಾಗಿ ಇರಬೇಕಾದ ಆದರ್ಶಗಳು. ಸಾಧಕನೊಬ್ಬ ಇನ್ನಿತರ ಸಾಧಕರ ಜೊತೆಗೆ ಸೇರಲೇಬೇಕೆಂದಿಲ್ಲ, ಆದರೆ ಅವನು ತನ್ನಷ್ಟಕ್ಕೆ ತಾನೇ ಏಕಾಕಿಯಾಗಿರಲು ಬಯಸಿದರೆ, ಅದು ಸಾಧನೆಯ ಕಾರಣದಿಂದಾಗಿರಬೇಕು, ಅದರಲ್ಲಿ ಬೇರೆ ಯಾವ ಉದ್ದೇಶವೂ ಇರಬಾರದು; ಅಲ್ಲದೆ ಆದು ತನ್ನನ್ನು ಕುರಿತು ಪ್ರಾಧಾನ್ಯತೆ ಅಥವಾ ಇತರರ ಬಗ್ಗೆ ತಿರಸ್ಕಾರದ ಭಾವನೆ ಹೊಂದಿರಬಾರದು. ಒಬ್ಬ ಸಾಧಕ ಇನ್ನೊಬ್ಬ ಸಾಧಕನ ಜೊತೆಗೆ ಯಾವುದೇ ಕಾರಣಕ್ಕಾಗಿ ಜೊತೆಗೂಡಬೇಕಾಗಿ ಬಂದಾಗ ಅವನಲ್ಲಿ/ಅವಳಲ್ಲಿ/ ಪ್ರಾಣಿಕ ಭಾವನೆಗಳು ಉದಿಸುವಂತಾದರೆ – ವಿವೇಚನಾಯುಕ್ತರಾಗಿ ಅವನು/ಅವಳು ಆ ದೌರ್ಬಲ್ಯದ ಮೇಲೆ ಜಯ ಸಾಧಿಸುವವರೆಗೆ, ಆ ಸಹವಾಸದಿಂದ ಹಿಂತೆಗೆಯಬಲ್ಲನು/ಬಲ್ಲಳು. ಆದರೆ ಆ ಆವಶ್ಯಕತೆಯಲ್ಲಿ ತಪಿಸುವಿಕೆಯ ಡಂಭಾಚಾರದ

ಪ್ರದರ್ಶನ, ಇಲ್ಲವೆ ಸಾರ್ವಜನಿಕ ಖಂಡನೆಗಳು ಸೇರಿಕೊಂಡಿರಬಾರದು ಮತ್ತು ಸರಿಸಮಾನವಾಗಿ ಜಯಿಸಬೇಕಾದ ಭಾವನೆಗಳು ನಿಷ್ಠೆ ತಪ್ಪುವಂತಾಗಬಾರದು.

**– ಶ್ರೀ ಅರವಿಂದರು**

## ಪ್ರಾಣಿಕ ಪ್ರತಿಕ್ರಿಯೆಗಳು

ಬೇರೆಯವರು ಏನು ಮಾಡುತ್ತಾರೆ, ಯೋಚಿಸುತ್ತಾರೆ, ಇಲ್ಲವೆ ಹೇಳುತ್ತಾರೆ ಎಂಬುದರಿಂದ ನೋವಿನ ಭಾವನೆ ತಂದುಕೊಳ್ಳುವುದು ದೌರ್ಬಲ್ಯದ ಸಂಕೇತವಾಗಿರುತ್ತದೆ ಮತ್ತು ಇಡೀ ಸತ್ತೆ ಭಗವಂತನತ್ತ ಮಾತ್ರ ಹೊರಳಿಕೊಂಡಿರುವುದಿಲ್ಲ ಎನ್ನುವುದಕ್ಕೆ ಪ್ರಮಾಣವಾಗಿರುತ್ತದೆ. ಮತ್ತು ಆಗ ಮನುಷ್ಯ ತನ್ನೊಡನೆ ಪ್ರೇಮ, ಸಹಿಷ್ಣುತೆ, ತಿಳಿವಳಿಕೆ, ತಾಳ್ಮೆ ಇವುಗಳಿಂದ ಕೂಡಿದ ದೈವೀ ವಾತಾವರಣವನ್ನು ತರುವುದರ ಬದಲಾಗಿ ಅವನ ಅಹಂಕಾರವು ಬಿಗುಮಾನ ಹಾಗೂ ನೋವಿನ ಭಾವನೆಗಳೊಂದಿಗೆ ಇನ್ನೊಬ್ಬನ ಅಹಂಕಾರಕ್ಕೆ ಪ್ರತಿಕ್ರಿಯೆ ನೀಡುವುದು, ಹಾಗೂ ಅಸಾಮರಸ್ಯ ಉಲ್ಬಣಗೊಳ್ಳುವುದು. ಭಗವಂತನ ಕಾರ್ಯಗತಿಗಳು ಬೇರೆ, ಬೇರೆ ಜನರಲ್ಲಿ ಭಿನ್ನವಾಗಿರುತ್ತವೆ ಎಂಬುದನ್ನು ಅಹಂಕಾರ ಎಂದಿಗೂ ತಿಳಿದುಕೊಳ್ಳುವುದಿಲ್ಲ ಮತ್ತು ಅಹಂಕಾರ ತನ್ನದೇ ದೃಷ್ಟಿಕೋನದಿಂದ ವಿಷಯಗಳ ಬಗ್ಗೆ ತೀರ್ಮಾನಕ್ಕೆ ಬರುವುದು ದೊಡ್ಡ ತಪ್ಪು ಮತ್ತು ಅದು ಗೊಂದಲವನ್ನು ಹೆಚ್ಚಿಸದೇ ಬಿಡದು. ನಾವು ಭಾವೋದ್ರಿಕ್ತರಾಗಿ, ಅಸಹಿಷ್ಣುಗಳಾಗಿ ಮಾಡುವುದು ದೈವಿಕವಾಗಿರಲಾರದು, ಏಕೆಂದರೆ ಭಗವಂತ ಕೇವಲ ಶಾಂತಿ, ಸಾಮರಸ್ಯಗಳಲ್ಲಿ ಕಾರ್ಯಕೈಕೊಳ್ಳುತ್ತಾನೆ.

(17/239) ಕೆಲವು ಜನರ ಪ್ರಾಣಿಕ, ಯಾವಾಗಲೂ, ಅಸಾಮರಸ್ಯಕ್ಕೆ, ಜಗಳಗಳಿಗೆ, ಮತ್ತು ಗೊಂದಲಕ್ಕೆ ಕರೆ ಕೊಡುತ್ತದೆ. ಮತ್ತು ಸಾಮಾನ್ಯವಾಗಿ ಅವರು ಇತರರಿಂದ ಕಿರುಕುಳಕ್ಕೆ ಈಡಾಗುತ್ತಿರುವರೆಂಬ ಭ್ರಾಂತಿಯಲ್ಲಿರುತ್ತಾರೆ. ಹಾಗೂ ಎಲ್ಲರೂ ತಮಗೆ ವಿರೋಧಿಗಳಾಗಿದ್ದಾರೆ ಎಂದು ನಂಬುತ್ತಾರೆ. ಅದಕ್ಕೆ ಚಿಕಿತ್ಸೆ ನೀಡುವುದು ಬಹಳ ಕಠಿಣವಾದದ್ದು ಮತ್ತು ಅದಕ್ಕಾಗಿ ಸ್ವಭಾವದ ಆಮೂಲಾಗ್ರ ಪರಿವರ್ತನೆ ಬೇಕಾಗುತ್ತದೆ.

ಅಂತಹ ಜನರೊಂದಿಗೆ ವ್ಯವಹರಿಸುವಾಗ, ಅವರ ಪ್ರತಿಕ್ರಿಯೆಗಳತ್ತ ಲಕ್ಷ್ಯಗೊಡದೆ ಇರುವುದು ಮತ್ತು ಮಾಡಬೇಕಾದುದನ್ನು ಸರಳವಾಗಿ, ನಿಷ್ಕಪಟತನದಿಂದ ಮಾಡುತ್ತ ಹೋಗುವುದು ಅತ್ಯಂತ ಒಳ್ಳೆಯದು.

(14/28) ಜನರ ಪ್ರತಿಕ್ರಿಯೆಗಳು, ಅವೆಷ್ಟೇ ಅಸಂತೋಷಕರವಾಗಿರಲಿ, ಅವುಗಳನ್ನು ಕುರಿತು ಚಿಂತಿಸಬೇಡಿರಿ. – ಪ್ರಾಣಿಕ ಎಲ್ಲೆಡೆ, ಪ್ರತಿಯೊಬ್ಬನಲ್ಲಿ ಅಶುದ್ಧತೆಗಳಿಂದ ತುಂಬಿಕೊಂಡಿದೆ ಮತ್ತು ಭೌತಿಕ ಪ್ರಜ್ಞಾರಹಿತವಾಗಿದೆ. ಇವೆರಡೂ ಅಪರಿಪೂರ್ಣತೆಗಳಿಗೆ ಚಿಕಿತ್ಸೆ ನೀಡಬೇಕಾಗಿದೆ, ಅದು ಬಹಳ ಸಮಯ ತೆಗೆದುಕೊಳ್ಳಬಹುದು ಮತ್ತು ನಾವು ಕೇವಲ ಅದಕ್ಕಾಗಿ ತಾಳ್ಮೆಯಿಂದ ಹಾಗೂ ಧೈರ್ಯದಿಂದ ಶ್ರಮಿಸಬೇಕು.

**ಜಗಳಗಳು**

(14/262) ಜಗಳಗಳಿಗೆ ನನ್ನ ಒಪ್ಪಿಗೆಯಿಲ್ಲ ಮತ್ತು ಜಗಳಾಡುವ ಎರಡೂ ಪಕ್ಷಗಳು ಸಮನಾಗಿ ತಪ್ಪು ಮಾಡುತ್ತವೆ ಎಂದು ನಾನು ಯಾವಾಗಲೂ ಪರಿಗಣಿಸಿದ್ದೇನೆ. ಮನುಷ್ಯ ತನ್ನ ಭಾವನೆಗಳ ಮೇಲೆ, ಬೇಕು–ಬೇಡಗಳ ಮೇಲೆ, ಇಷ್ಟವಾಗದುದರ ಮೇಲೆ ಹಾಗೂ ಪ್ರಚೋದನೆಗಳ ಮೇಲೆ ಜಯ ಸಾಧಿಸಬೇಕಾದುದು ಇಲ್ಲಿ ಅತ್ಯವಶ್ಯವಾದ ಶಿಸ್ತುಪಾಲನೆಯಾಗಿದೆ.

(14/263) ಮನುಷ್ಯ, ತಾನು ಆಕ್ರಮಣಕಾರಿಯಾಗಿರದಿದ್ದರೂ, ಜಗಳಾಡುವುದು ಯಾವಾಗಲೂ ತಪ್ಪು.

*

ನೀವೊಂದು ಜಗಳವನ್ನು ಪ್ರಾರಂಭಿಸಿದರೆ, ಅದು ಭಗವಂತನ ಕಾರ್ಯದ ಮೇಲೆ ನೀವು ಯುದ್ಧ ಸಾರಿದಂತಿರುತ್ತದೆ.

*

ಹೌದು ಈ ಎಲ್ಲ ಜಗಳಗಳು ಬಹಳ ವಿಷಾದನೀಯ ವಿಷಯಗಳು – ಅವು ಕಾರ್ಯದಲ್ಲಿ ಭೀಕರವಾಗಿ ಹಸ್ತಕ್ಷೇಪ ಮಾಡುತ್ತವೆ ಮತ್ತು ಎಲ್ಲವನ್ನೂ ಹೆಚ್ಚು ಕಠಿಣವಾದದ್ದನ್ನಾಗಿ ಮಾಡುತ್ತವೆ.

*

ಇತರರ ತಪ್ಪುಗಳ ಬಗೆಗೆ ಸಿಟ್ಟಿಗೇಳುವುದಕ್ಕಿಂತ ಮೊದಲು, ಮನುಷ್ಯ ತನ್ನದೇ ತಪ್ಪುಗಳನ್ನು, ಯಾವಾಗಲೂ ನೆನಪಿಗೆ ತಂದುಕೊಳ್ಳಬೇಕು.

(14/264) ಮನುಷ್ಯ ತನ್ನದೇ ತಪ್ಪುಗಳ ಬಗೆಗೆ ವಿಷಾದದ ಭಾವನೆ ತಂದುಕೊಳ್ಳುತ್ತಾನೆ – ಇದು ಅವುಗಳನ್ನು ತಿದ್ದಿಕೊಳ್ಳಲು ತನ್ನ ನಿರ್ಧಾರವನ್ನು ಬಲಪಡಿಸುವುದಕ್ಕೆ ಅವಶ್ಯವಾದರೆ, ಉಪಯುಕ್ತವಾಗಬಹುದು.

ಆದರೆ ಮನುಷ್ಯ ಇನ್ನೊಬ್ಬರ ನಡತೆಯಿಂದ ಮನದಲ್ಲಿ ನೊಂದುಕೊಂಡರೆ ಅದು ಆಧ್ಯಾತ್ಮಿಕ ಜೀವನದಲ್ಲಿ ಹಾಗೂ ಭಗವಂತನ ಸೇವೆಗಾಗಿ ಯಾವ ಉಪಯುಕ್ತತೆಯನ್ನೂ ಹೊಂದಿರುವುದಿಲ್ಲ.

**ಸಣ್ಣ ಮನಸ್ಸು ಹಾಗೂ ಪಕ್ಷಪಾತ**

(14/166) ಇನ್ನೊಬ್ಬರ ವಿಚಾರಗಳು, ಅವರ ಅಭಿಪ್ರಾಯ ನಿಮ್ಮವುಗಳೊಂದಿಗೆ ಅನುರೂಪವಾಗಿರದಿದ್ದರೆ, ನೀವು ಅವರೊಂದಿಗೆ ಸಾಮರಸ್ಯದಿಂದ ಇರಲಾರಿರಿ ಎಂಬ ವಸ್ತುಸ್ಥಿತಿ ಎಲ್ಲ ತೊಂದರೆಯನ್ನು ತರುತ್ತದೆ.

ನಿಮ್ಮ ಪ್ರಜ್ಞೆ ವಿಸ್ತಾರಗೊಳ್ಳುವಂತೆ ಮಾಡಬೇಕು ಮತ್ತು ಪ್ರತಿಯೊಬ್ಬನಿಗೂ ಅವನದೇ ನಿಯಮವಿರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ವ್ಯಕ್ತಿಗಳ ಸಂಕಲ್ಪಗಳ ಸಂತೋಷಕರ ಸಂಯೋಜನೆಯಲ್ಲಿ ತಿಳಿವಳಿಕೆಯ ಹಾಗೂ ಸಾಮರಸ್ಯದ ನೆಲಗಟ್ಟನ್ನು ಕಂಡುಕೊಳ್ಳುವುದು ಅವಶ್ಯವಿದೆ. ಮತ್ತು ಎಲ್ಲರೂ ತದ್ರೂಪದ ಸಂಕಲ್ಪ ಹಾಗೂ ಕ್ರಿಯೆಯಲ್ಲಿ ಒಂದೇ ಆಗಿರಲಿ ಎನ್ನುವ ದಿಶೆಯಲ್ಲಿ ಪ್ರಯತ್ನ ಮಾಡಕೂಡದು.

(14/267) ಪ್ರಗತಿಪರ ಸಾಮರಸ್ಯವನ್ನು ಸ್ಥಾಪಿಸುವುದರಲ್ಲಿ ಇರುವ ಅಡತಡೆಗಳಲ್ಲಿ 'ನಾವು ಸರಿಯಾಗಿದ್ದೇವೆ, ನಮ್ಮ ವಿರೋಧಿ ತಪ್ಪು ಮಾಡುತ್ತಿದ್ದಾನೆ' ಎಂದು ಸಿದ್ಧಮಾಡಲು ನಮ್ಮಲ್ಲಿರುವ ಆತುರ ಒಂದು ಪ್ರಮುಖ ಅಡೆತಡೆಯಾಗಿದೆ.

*

ಮಾನವ ಸತ್ತೆಗಳ ಮಧ್ಯೆ ಬಹಳ ವಿಸ್ತಾರವಾಗಿ ಹರಡಿಕೊಂಡಿರುವ ರೋಗವೆಂದರೆ ಮಾನಸಿಕ ಸಂಕುಚಿತತೆ, ಅವರು ತಮ್ಮ ಪ್ರಜ್ಞೆಯಲ್ಲಿರುವುದನ್ನು ಮಾತ್ರ ತಿಳಿದುಕೊಳ್ಳುತ್ತಾರೆ, ಬೇರೆ ಯಾವುದನ್ನೂ ಅವರು ಸಹಿಸಲಾರರು.

ತನ್ನ ಅಭಿಪ್ರಾಯವನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುವ ಮನುಷ್ಯ ಹೆಚ್ಚೆಚ್ಚು ಸಂಕುಚಿತ ಮನಸ್ಸಿನವನಾಗಿರುತ್ತಾನೆ.

(14/267–68) ಪ್ರತಿಯೊಂದು ಸಮಸ್ಯೆಗೆ ಎಲ್ಲರಿಗೂ ಸಮಾಧಾನ ತಂದುಕೊಡುವ ಪರಿಹಾರವಿರುತ್ತದೆ, ಆದರೆ ಪ್ರತಿಯೊಬ್ಬನೂ ತನ್ನದೇ ಬೇಕು–ಬೇಡಗಳನ್ನು ಇತರರ ಮೇಲೆ ಒತ್ತಾಯಪೂರ್ವಕ ಹೇರುವುದರ ಬದಲಾಗಿ ಈ ಆದರ್ಶ ಪರಿಹಾರವನ್ನು ಹುಡುಕಲು ಪ್ರಯತ್ನಿಸಬೇಕು.

ನಿಮ್ಮ ಪ್ರಜ್ಞೆ ವಿಸ್ತಾರಗೊಳ್ಳುವಂತೆ ಮಾಡಿರಿ ಮತ್ತು ಎಲ್ಲರಿಗೂ ಸಮಾಧಾನವಾಗಲಿ ಎಂದು ಅಭೀಪ್ಸೆಪಡಿರಿ.

(14/268) ಪ್ರಶ್ನೆಯ ನಿಮ್ಮ ಬದಿಯನ್ನಷ್ಟೇ ನೀವು ನೋಡುತ್ತೀರಿ. ನಿಮ್ಮ ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳಲು ನೀವು ಬಯಸಿದರೆ, ಎಲ್ಲ ಬದಿಗಳಿಂದ ಪಕ್ಷಪಾತವಿಲ್ಲದೆ ಆ ಪ್ರಶ್ನೆಯನ್ನು ನೋಡುವುದು ಹೆಚ್ಚು ಒಳ್ಳೆಯದು. ನಂತರ ನೀವು ಈ ಮನೋವೃತ್ತಿ ಹೆಚ್ಚು ಲಾಭದಾಯಕ ಎಂಬುದನ್ನು ಕಂಡುಕೊಳ್ಳುವಿರಿ.

**– ಶ್ರೀಮಾತೆ**

### ದೋಷ ಹುಡುಕುವಿಕೆ ಹಾಗೂ ನಿಂದನೆ

(23/826) ಸಹಾನುಭೂತಿಯಿಂದ ಹಾಗೂ ನಿಷ್ಪಕ್ಷಪಾತವಾಗಿ ನೋಡುವುದರಲ್ಲಿ ಹಾಗೂ ಅವಲೋಕನ ಮಾಡುವುದರಲ್ಲಿ ಯಾವ ಕೇಡೂ ಇರುವುದಿಲ್ಲ – (ಬಹಳಷ್ಟು ಸಲ, ಬಹಳ ತಪ್ಪು ರೀತಿಯಲ್ಲಿ ಅನಾವಶ್ಯಕವಾಗಿ ನಿಂದಿಸುವುದು ದೋಷ ಹುಡುಕುವುದು ಮತ್ತು ಇತರರನ್ನು ಖಂಡಿಸುವ ಮನಸ್ಸಿನ ಪ್ರವೃತ್ತಿ ತನಗೆ ಹಾಗೂ ಇತರರಿಗೆ ಕೆಟ್ಟ ವಾತಾವರಣವನ್ನು ಸೃಷ್ಟಿಸುತ್ತದೆ. ಈ ನಿಷ್ಠುರತೆ ಮತ್ತು ದೃಢ ನಂಬಿಕೆಯ ಖಂಡನೆ ಏತಕ್ಕಾಗಿ? ಪ್ರತಿಯೊಬ್ಬನಲ್ಲೂ ಅವನದೇ ದೋಷಗಳಿರುವುದಿಲ್ಲವೆ – ಇನ್ನೊಬ್ಬರ ದೋಷಗಳನ್ನು ಕಂಡುಹಿಡಿಯುವುದರಲ್ಲಿ ಅವನು ಅಷ್ಟೊಂದು ಆತುರವನ್ನೇಕೆ ತೋರಿಸಬೇಕು ಮತ್ತು ಅವರನ್ನೇಕೆ ಖಂಡಿಸಬೇಕು? ಕೆಲವೊಮ್ಮೆ ತೀರ್ಮಾನಕ್ಕೆ ಬರಬೇಕಾಗುತ್ತದೆ, ಆದರೆ ಅದನ್ನು ಅವಸರದಿಂದ ಹಾಗೂ ತಪ್ಪು ಹುಡುಕುವ ಮನೋಭಾವದಿಂದ ಮಾಡಬಾರದು.

(23/826–27) ಮನುಷ್ಯರು ತಾವೇ ಸ್ವತಃ ಮಾಡುವ ತಪ್ಪುಗಳನ್ನು ತಪ್ಪಿಸಲು ಚಾತುರ್ಯ ಹೊಂದಿರುವುದಕ್ಕಿಂತ ಹೆಚ್ಚಾಗಿ ಇತರರ ಕಾರ್ಯವನ್ನು ತೀಕ್ಷ್ಣವಾಗಿ ವಿಮರ್ಶಿಸುವುದರಲ್ಲಿ ಹಾಗೂ ಕಾರ್ಯಗಳನ್ನು ಹೇಗೆ ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎಂದು ಅವರಿಗೆ ಹೇಳುವುದರಲ್ಲಿ ಹೆಚ್ಚು

ದಕ್ಷರಾಗಿರುತ್ತಾರೆ. ಬಹಳಷ್ಟು ಸಲ, ನಿಜವಾಗಿ, ಮನುಷ್ಯ ಇತರರಲ್ಲಿರುವ ದೋಷಗಳನ್ನು ಸುಲಭವಾಗಿ ನೋಡುತ್ತಾನೆ, ಆ ದೋಷಗಳು ತನ್ನಲ್ಲಿಯೇ ಇದ್ದಾಗ್ಯೂ ಅವುಗಳನ್ನು ನೋಡಲು ವಿಫಲನಾಗುತ್ತಾನೆ. ಇವು ಮತ್ತು ನೀನು ಉಲ್ಲೇಖಿಸಿದ ಇತರ ದೋಷಗಳು ಮಾನವ ಸ್ವಭಾವಕ್ಕೆ ಸಾಮಾನ್ಯವಾಗಿರುತ್ತವೆ ಮತ್ತು ಕೆಲವೇ ಜನರು ಅವುಗಳಿಂದ ತಪ್ಪಿಸಿಕೊಳ್ಳುತ್ತಾರೆ. ಮಾನವ ಮನಸ್ಸು, ನಿಜವಾಗಿ, ತನ್ನ ಬಗ್ಗೆ ಅರಿವುಳ್ಳದ್ದಾಗಿರುವುದಿಲ್ಲ – ಆ ಕಾರಣದಿಂದಾಗಿಯೆ, ಯೋಗದಲ್ಲಿ, ಮನುಷ್ಯ ತನ್ನಲ್ಲೇನಿರುವುದೋ ಅದನ್ನು ನೋಡಬೇಕಾಗುತ್ತದೆ ಮತ್ತು ಹೆಚ್ಚು ಹೆಚ್ಚಾಗಿ ಪ್ರಜ್ಞಾಪೂರ್ಣನಾಗಬೇಕಾಗುತ್ತದೆ.

(23/827) ಇನ್ನೊಬ್ಬರಲ್ಲಿರುವ ನಿಜವಾದ ಇಲ್ಲವೆ ನಿಜವಲ್ಲದ ದೋಷಗಳನ್ನು ಶೋಧಿಸಿ, ಅವುಗಳನ್ನು ಕುರಿತು ಮಾತನಾಡುವುದು ಕ್ಷುದ್ರ ಅಹಂಕಾರಕ್ಕೆ ಇಷ್ಟವಾಗಿರುತ್ತದೆ – ಅವು ನಿಜವಾಗಿರುವವೋ, ಇಲ್ಲವೋ ಎಂಬುದು ಮುಖ್ಯವಾಗಿರುವುದಿಲ್ಲ. ಅವುಗಳನ್ನು ಕುರಿತು ತೀರ್ಮಾನಕ್ಕೆ ಬರಲು ಅಹಂಕಾರಕ್ಕೆ ಹಕ್ಕಿರುವುದಿಲ್ಲ. ಏಕೆಂದರೆ ಅದಕ್ಕೆ ಸರಿಯಾದ ದೃಷ್ಟಿಕೋನವಾಗಲಿ, ಸರಿಯಾದ ಮನೋಭಾವವಾಗಲಿ ಇರುವುದಿಲ್ಲ. ಶಾಂತ ರೀತಿಯ, ಕರುಣಾಪೂರ್ಣವಾದ, ಪ್ರೇಮಪೂರ್ಣವಾದ ದೈವೀ ಮನೋಭಾವ ಮಾತ್ರ ಸರಿಯಾಗಿ ತೀರ್ಮಾನಿಸಬಲ್ಲದು ಮತ್ತು ಪ್ರತಿಯೊಬ್ಬ ಮನುಷ್ಯನಲ್ಲಿ ಬಲವನ್ನು, ದೌರ್ಬಲ್ಯವನ್ನು ಸರಿಯಾಗಿ ನೋಡಬಲ್ಲದು.

(23/814) ಭಗವಂತನೊಡನೆ ಏಕತೆ ಪಡೆಯುವ ಅನುಭವದಿಂದ ಮಾತ್ರ ಆಂತರಿಕ ಏಕಾಕಿತನಕ್ಕೆ ಚಿಕಿತ್ಸೆ ಒದಗುವುದು. ಯಾವುದೇ ಮಾನವ ಒಡನಾಟ ಆ ಶೂನ್ಯವನ್ನು ತುಂಬಲಾರದು. ಅದೇ ರೀತಿಯಾಗಿ ಆಧ್ಯಾತ್ಮಿಕ ಜೀವನಕ್ಕೆ, ಇತರರೊಂದಿಗೆ ಸಾಮರಸ್ಯವನ್ನು ಮಾನಸಿಕ ಮತ್ತು ಪ್ರಾಣಿಕ ಒಲವುಗಳ ಆಧಾರದ ಮೇಲೆ ಸ್ಥಾಪಿಸಬಾರದು, ಆದರೆ ಅದು ದೈವೀ ಪ್ರಜ್ಞೆ ಮತ್ತು ಭಗವಂತನೊಂದಿಗಿನ ಏಕತೆಯ ಆಧಾರದ ಮೇಲೆ ಸ್ಥಾಪಿತವಾಗಬೇಕು. ಅಲ್ಲಿಯವರೆಗೆ ಇರಬೇಕಾದುದೇನೆಂದರೆ ಎಲ್ಲರಿಗೂ ಸಾಮಾನ್ಯವಾಗಿರುವ ದೈವೀ ಗುರಿ, ಮತ್ತು ಶ್ರೀಮಾತೆಯ ಮಕ್ಕಳಾಗಿರುವ ಭಾವನೆ ಇವುಗಳ ಮೇಲೆ ಆಧಾರಿತವಾಗಿರುವ ಸದ್ಭಾವನೆ ಹಾಗೂ ಏಕತೆ. ನಿಜವಾದ ಸಾಮರಸ್ಯ ಚೈತ್ಯಾತ್ಮಿಕ ಇಲ್ಲವೆ ಆಧ್ಯಾತ್ಮಿಕ ಆಧಾರದ ಮೇಲೆ ಬರಬಲ್ಲದು.

**– ಶ್ರೀ ಅರವಿಂದರು**

# ಸಂಬಂಧಕ್ಕೊಂದು ಹೊಸ ತಳಹದಿ

**– ಅನುವಾದ: ಡಾ॥ ಕೆ.ಎಸ್. ಆಮೂರ**

(23/803) ನೀನು ಈ ಯೋಗವನ್ನು ಅರ್ಥಮಾಡಿಕೊಂಡಂತಿಲ್ಲ. ಹಳೆಯ ಯೋಗವು ಸಂಪೂರ್ಣ ತ್ಯಾಗವನ್ನು ಬೇಡುತ್ತಿತ್ತು, ಅದು ಪ್ರಾಪಂಚಿಕ ಜೀವನವನ್ನು ತೊರೆದುಬಿಡುವುದಾಗಿತ್ತು. ಈ ಯೋಗವು, ಅದರ ಬದಲಾಗಿ, ಪರಿವರ್ತನೆ ಹೊಂದಿದ ಜೀವನವನ್ನು ಗುರಿಯಾಗಿರಿಸಿಕೊಂಡಿದೆ. ಆದರೆ ಅದು ಅಷ್ಟೇ ನಿಷ್ಠುರವಾಗಿ ಮನಸ್ಸು, ಪ್ರಾಣ ಹಾಗೂ ದೇಹ ಇವುಗಳಲ್ಲಿರುವ ಆಸೆ, ಆಸಕ್ತಿಗಳನ್ನು ಸಂಪೂರ್ಣವಾಗಿ ತೊಲಗಿಸಿಬಿಡುವಂತೆ ಆಗ್ರಹಪಡಿಸುತ್ತದೆ. ಅದರ ಗುರಿ ಜೀವನವನ್ನು ಆತ್ಮದ ಸತ್ಯದಲ್ಲಿ ಪುನಃ ಕಂಡುಕೊಳ್ಳುವುದಾಗಿದೆ ಮತ್ತು ಆ ಉದ್ದೇಶಕ್ಕಾಗಿ, ನಾವಾಗಿರುವುದರ ಹಾಗೂ ನಾವು ಕೈಕೊಳ್ಳುವುದರ ಬೇರುಗಳನ್ನು ಮನಸ್ಸು ಪ್ರಾಣ ಹಾಗೂ ದೇಹ ಇವುಗಳಿಂದ ಮೇಲ್ಗಡೆಗಿರುವ ಶ್ರೇಷ್ಠತರ ಪ್ರಜ್ಞೆಯಲ್ಲಿ ವರ್ಗಾಯಿಸುವುದಾಗಿದೆ. ಅದರರ್ಥ, ಹೊಸ ಜೀವನದಲ್ಲಿ, ಎಲ್ಲ ಸಂಬಂಧಗಳು ನಮ್ಮ ಸದ್ಯದ ಸಂಬಂಧಗಳಿಗೆ ಆಧಾರವಾಗಿರುವುದಕ್ಕಿಂತ ಎಲ್ಲ ರೀತಿಯಲ್ಲಿ ಬೇರೆಯಾಗಿರುವ ಆಧ್ಯಾತ್ಮಿಕವಾದ ಗಾಢ ಪರಿಚಯದಲ್ಲಿ ಹಾಗೂ ಸತ್ಯದಲ್ಲಿ ಸ್ಥಾಪಿತವಾಗಬೇಕು. ಉಚ್ಚತರ ಕರೆ ಬಂದಾಗ ಮನುಷ್ಯ, ಸ್ವಾಭಾವಿಕ ಒಲವುಗಳು ಎಂದು ಕರೆಯಲಾದವುಗಳೆಲ್ಲವನ್ನು ತ್ಯಾಗಮಾಡಬೇಕು, ಅವುಗಳನ್ನು ಉಳಿಸಿಕೊಂಡ ಸಂದರ್ಭದಲ್ಲಿ, ಅವುಗಳನ್ನು ಒಟ್ಟಿನಲ್ಲಿ ಪರಿವರ್ತಿಸುವ ಬದಲಾವಣೆಯೊಂದಿಗೆ ಉಳಿಸಿಕೊಳ್ಳಬೇಕು. ಆದರೆ ಅವುಗಳನ್ನು ತ್ಯಾಗ ಮಾಡಬೇಕೋ ಇಲ್ಲವೆ ಉಳಿಸಿಕೊಂಡು ಬದಲಾಯಿಸಬೇಕೋ ಎಂಬುದನ್ನು ಮೇಲ್ಗಡೆಗಿರುವ ಸತ್ಯ ನಿರ್ಧರಿಸಬೇಕು, ವೈಯಕ್ತಿಕ ಆಸೆಗಳು ಅದನ್ನು ಮಾಡಕೂಡದು, ಎಲ್ಲವನ್ನೂ ಯೋಗದ ಸರ್ವೋಚ್ಚ ಸ್ವಾಮಿಗೆ ಬಿಟ್ಟುಕೊಡಬೇಕು.

(23/803–04) ಎಲ್ಲ ಸಾಧಕರು, ಒಬ್ಬರಿಂದ ಇನ್ನೊಬ್ಬರು ದೂರವಿರಬೇಕು, ಒಬ್ಬರ ವಿರುದ್ಧ ಇನ್ನೊಬ್ಬರು ಕತ್ತಿ ಮಸೆಯುತ್ತಿರಬೇಕು ಎಂಬ ವಿಚಾರ ಪೂರ್ವ ಕಲ್ಪಿತವಾದದ್ದು, ಅದನ್ನು ಕೈಬಿಡಬೇಕು. ಯೌಗಿಕ ಜೀವನಕ್ಕೆ ಸಾಮರಸ್ಯವಿರಬೇಕಲ್ಲದೆ ಜಗಳವಿರಬಾರದು.

ಅಲ್ಲದೆ ಎಲ್ಲ ಸಂಬಂಧಗಳು ಪ್ರಾಣಿಕ ನಿಲುವಿನಿಂದ ಆಧ್ಯಾತ್ಮಿಕ ನಿಲುವಿಗೆ ಸಾಗಿ ಹೋಗಬೇಕು. ಪ್ರಾಣಿಕವು ಕೇವಲ ಆಧ್ಯಾತ್ಮಿಕತೆಯ ಉಪಕರಣವಾಗಿರಬೇಕು

– ಅದರರ್ಥ ಒಬ್ಬರು ಇನ್ನೊಬ್ಬರ ಜೊತೆಗೆ ಯಾವ ಸಂಬಂಧವನ್ನೇ ಹೊಂದಿರಲಿ, ಅದು ಎಲ್ಲ ಅಸೂಯೆ, ಜಗಳ, ವೈರ, ಅಸಹ್ಯಪಟ್ಟುಕೊಳ್ಳುವಿಕೆ, ಮತ್ಸರ ಮತ್ತು ಇತರ ಎಲ್ಲ ದುಷ್ಟ ಪ್ರಾಣಿಕ ಭಾವನೆಗಳನ್ನು ತೊರೆದುಬಿಡಬೇಕು, ಏಕೆಂದರೆ ಅವು ಆಧ್ಯಾತ್ಮಿಕ ಜೀವನದ ಭಾಗವಾಗಲಾರವು.

ಹಾಗೆಯೇ ಎಲ್ಲ ಅಹಂಕಾರಯುಕ್ತ ಪ್ರೇಮ ಮತ್ತು ಆಸಕ್ತಿಗಳು ಮಾಯವಾಗಬೇಕು – ಅಹಂಕಾರದ ತೃಪ್ತಿಗಾಗಿ ವ್ಯಕ್ತಪಡಿಸುವ ಪ್ರೇಮ ಮತ್ತು ಅಹಂಕಾರಕ್ಕೆ ನೋವುಂಟಾದಾಗ ಮತ್ತು ಅತೃಪ್ತಿಯಾದಾಗ ನಿಂತುಹೋಗುವ ಇಲ್ಲವೆ ಮತ್ಸರ ಮತ್ತು ದ್ವೇಷ ವ್ಯಕ್ತಪಡಿಸುವ ಪ್ರೇಮ ಕೂಡ ಮಾಯವಾಗಬೇಕು. ಪ್ರೀತಿಯ ಹಿಂದೆ ನಿಜವಾದ ಜೀವಕಳೆಯುಳ್ಳ ಹಾಗೂ ಶಾಶ್ವತನಾದ ಒಕ್ಕೂಟ ಇರಬೇಕು. ಲೈಂಗಿಕ ಅಶುದ್ಧತೆಯಂತಹದು ಕೂಡ ಮಾಯವಾಗಬೇಕೆಂಬುದು ಸಹಜವಾಗಿ ಅರ್ಥಮಾಡಿಕೊಂಡಿರಬೇಕಾದ ವಿಷಯ.

(23/815) ಹೆಚ್ಚುತ್ತಿರುವ ಹಿಡಿದಿಟ್ಟುಕೊಳ್ಳುವ ಶಕ್ತಿಯಲ್ಲಿ ಮತ್ತು ಬೆಳೆಯುತ್ತಿರುವ ಏಕತೆಯಲ್ಲಿ ಭಗವಂತನತ್ತ ಹೊರಳಿದ ಭಾವನೆಯಿರುವ ಪ್ರೇಮವಿದೆ. ಅದು ಭಗವಂತನಿಂದ ಪಡೆದದ್ದನ್ನು ಇತರರ ಮೇಲೆ ಸುರಿಸುತ್ತದೆ, ಹಾಗೆ ಸುರಿಸುವಾಗ ಪ್ರತಿಯಾಗಿ ಏನನ್ನೂ ಬೇಡುವುದಿಲ್ಲ – ನೀವು ಅಂತಹ ಸಾಮರ್ಥ್ಯ ಹೊಂದಿದ್ದರೆ ಅದು ಅತ್ಯುಚ್ಚ ಹಾಗೂ ಅತ್ಯಂತ ತೃಪ್ತಿಯಿಂದ ಕೂಡಿದ ಪ್ರೇಮದ ರೀತಿಯಾಗಿರುತ್ತದೆ.

(23/818–19) ಮೈತ್ರಿ ಹಾಗೂ ಮಮತೆ ಇವುಗಳನ್ನು ಯೋಗದಿಂದ ಪ್ರತ್ಯೇಕಿಸಲಾಗದು. ಭಗವಂತನೊಡನೆ ಸ್ನೇಹ, ಸಾಧನೆಯಲ್ಲಿ ಅಂಗೀಕೃತವಾದ ಸಂಬಂಧವಾಗಿರುತ್ತದೆ. ಸಾಧಕರ ನಡುವೆ ಸ್ನೇಹ ಸಂಬಂಧಗಳು ಅಸ್ತಿತ್ವದಲ್ಲಿರುತ್ತವೆ ಮತ್ತು ಇಂತಹ ಸಂಬಂಧಗಳಿಗೆ ಶ್ರೀಮಾತೆಯವರು ಉತ್ತೇಜನ ನೀಡುತ್ತಾರೆ. ಆದರೆ ಮಾನವತೆಯ ಬಹಳಷ್ಟು ಭಾಗದಲ್ಲಿ ಅನಿಶ್ಚಿತತೆಯಿಂದ ಸ್ಥಾಪಿತವಾಗಿರುವ ಮೈತ್ರಿಗಿಂತ ಭಿನ್ನವಾದ, ಸುನಿಶ್ಚಿತವಾದ ಆಧಾರದ ಮೇಲೆ ಮೈತ್ರಿ ಸ್ಥಾಪಿತವಾಗಲಿ ಎಂಬುದನ್ನು ಮಾತ್ರ ನಾವು ಅರಸುತ್ತಿದ್ದೇವೆ. ನಾವು ಈ ಬದಲಾವಣೆಯನ್ನು ಬಯಸುವುದೇಕೆಂದರೆ ಮೈತ್ರಿ, ಭ್ರಾತೃತ್ವ ಹಾಗೂ ಪ್ರೇಮ ಇವು ಪವಿತ್ರವಾದ ವಿಷಯಗಳು ಎಂದು ನಾವು ನಿಖರವಾಗಿ ಭಾವಿಸುತ್ತೇವೆ – ಮತ್ತು ಏಕೆಂದರೆ ಪ್ರಾಣಿಕಕ್ಕೆ ಒಲವಿರುವ ಅಹಂಕಾರದ ಚಲನೆಗಳಿಂದ

ಹೊಲಸಾಗಿ, ಭಾವೋದ್ರೇಕ, ಅಸೂಯೆ ಹಾಗೂ ಮೋಸಗಳಿಂದ ಹಾಳಾಗಿ ಅವು ಮುರಿದು ಬಿದ್ದುಹೋಗುವುದನ್ನು ನಾವು ಕಾಣಲು ಬಯಸುವುದಿಲ್ಲ – ಅವುಗಳು ನಿಜವಾಗಿಯೂ ಪವಿತ್ರವಾದವುಗಳು ಭದ್ರವಾದವುಗಳು ಆಗುವಂತೆ ಹಾಗೂ ಅವು ಆತ್ಮದಲ್ಲಿ ಬೇರು ಬಿಡುವಂತೆ, ಭಗವಂತನ ಬಂಡೆಗಲ್ಲಿನ ಮೇಲೆ ಸ್ಥಾಪಿತವಾಗುವಂತೆ ಮಾಡಬೇಕಾಗಿದೆ. ನಮ್ಮ ಯೋಗವು ಸನ್ಯಾಸಿಗಳ ಯೋಗವಲ್ಲ. ಅದು ಪರಿಶುದ್ಧತೆಯನ್ನು ತನ್ನ ಗುರಿಯನ್ನಾಗಿರಿಸಿಕೊಂಡಿದೆ, ದಯಾದಾಕ್ಷಿಣ್ಯಗಳಿಲ್ಲದ ವೈರಾಗ್ಯವನ್ನಲ್ಲ. ನಾವು ಅಭೀಪ್ಸೆಪಡುತ್ತಿರುವ ಸಾಮರಸ್ಯದಲ್ಲಿ ಮೈತ್ರಿ ಹಾಗೂ ಪ್ರೇಮ ಅತ್ಯಗತ್ಯವಾದ ಲಕ್ಷಣಗಳಾಗಿರುತ್ತವೆ. ಅದು ವ್ಯರ್ಥ ಕನಸಲ್ಲ, ಏಕೆಂದರೆ ಅಪರಿಪೂರ್ಣ ಸ್ಥಿತಿಗಳಲ್ಲೂ ಕೂಡ, ಅತ್ಯಗತ್ಯವಾದ ಅಂಶ ಬೇರಿನಲ್ಲಿ ಅಲ್ಪಮಟ್ಟದಲ್ಲಿದ್ದಾಗ, ಆ ವಿಷಯ ಸಾಧ್ಯವಾಗುವುದನ್ನು ನಾವು ನೋಡಿದ್ದೇವೆ. ಅದು ಕಠಿಣವಾದದ್ದು, ಹಳೆಯ ಅಡೆತಡೆಗಳು ಇನ್ನೂ ಹಟಮಾರಿತನದಿಂದ ಅಂಟಿಕೊಂಡಿರುತ್ತವೆ. ಆದರೆ ಯಾವ ವಿಜಯವನ್ನೂ, ಗುರಿಯ ಬಗೆಗೆ ಸ್ಥಿರವಾದ ಸತ್ಯನಿಷ್ಠೆಯನ್ನು ಹೊಂದಿರದೆ ಹಾಗೂ ದೀರ್ಘ ಪ್ರಯತ್ನಪಡದೆ; ದೊರಕಿಸಲಾಗದು. ಪಟ್ಟು ಹಿಡಿಯುವುದರ ಹೊರತಾಗಿ ಬೇರೆ ಮಾರ್ಗವಿಲ್ಲ.

(23/819) ಯೋಗದಲ್ಲಿ ಮೈತ್ರಿ ಉಳಿದುಕೊಳ್ಳಬಹುದು, ಆದರೆ ಆಸಕ್ತಿ ಇಲ್ಲವೆ ಮನುಷ್ಯನನ್ನು ಸಾಮಾನ್ಯ ಜೀವನಕ್ಕೆ ಕಟ್ಟಿಹಾಕುವ, ತಲ್ಲೀನವಾಗಿಸುವ ಮಮತೆ ತೊಲಗಿ ಹೋಗಬೇಕು.

**– ಶ್ರೀ ಅರವಿಂದರು**

(17/170) ಮನುಷ್ಯ ತನ್ನ ಪ್ರೇಮವನ್ನು ಇನ್ನೊಬ್ಬನಿಗೆ ಕೊಟ್ಟಾಗ, ಅವನು ಸಾಮಾನ್ಯವಾಗಿ ಮಾಡುವ ಮೊದಲ ತಪ್ಪೆಂದರೆ ಆ ಇನ್ನೊಬ್ಬನು ಅವನ ರೀತಿಯಲ್ಲಿ ಹಾಗೂ ಅವನ ಗುಣ ಲಕ್ಷಣದ ಪ್ರಕಾರ ಪ್ರೇಮಿಸಲೆಂದು ಬಯಸದೆ, ತನದೇ ರೀತಿಯಲ್ಲಿ, ತನ್ನ ಆಸೆಗಳನ್ನು ತೃಪ್ತಿಗೊಳಿಸಲು, ತನ್ನನ್ನು ಪ್ರೇಮಿಸಲೆಂದು ಬಯಸುವುದಾಗಿದೆ. ಮಾನನವರ ಎಲ್ಲ ದುರವಸ್ಥೆಗಳಿಗೆ, ನಿರಾಶೆಗಳಿಗೆ ಹಾಗೂ ನೋವುಗಳಿಗೆ ಕಾರಣವಾಗುವವುಗಳಲ್ಲಿ ಇದು ಪ್ರಥಮ ಸ್ಥಾನದಲ್ಲಿರುತ್ತದೆ.

ಪ್ರೇಮಿಸುವುದೆಂದರೆ ಮನುಷ್ಯ ತನ್ನನ್ನು ಯಾವ ಚೌಕಾಸಿಯಿಲ್ಲದೆ ಕೊಟ್ಟುಕೊಳ್ಳುವುದಾಗಿದೆ, ಹಾಗಿಲ್ಲದಿದ್ದರೆ ಅದು ಪ್ರೇಮವೇ ಅಲ್ಲ. ಆದರೆ ಜನರು ಇದನ್ನು ತಿಳಿದುಕೊಂಡಿರುವುದು, ಅದರಲ್ಲೂ ಅದನ್ನು ಆಚರಣೆಗೆ ತಂದಿರುವುದು

ಅಪರೂಪಕ್ಕೆ ಕಂಡುಬರುತ್ತದೆ. ಮತ್ತು ಪರಿಣಾಮಗಳು ದುಃಖದಾಯಕ–ವಾಗಿರುತ್ತವೆ.

(14/23) ಮನುಷ್ಯ ತನ್ನ ಮೇಲೆ ನಿಯಂತ್ರಣ ಹೊಂದಿರುವುದು ಮೊದಲ ಅವಶ್ಯಕತೆಯಾಗಿದೆ, ಅದರಲ್ಲೂ ತನ್ನ ನಾಲಿಗೆಯ ಮೇಲೆ ನಿಯಂತ್ರಣ–ವಿಟ್ಟುಕೊಂಡಿರುವುದು ಅತ್ಯಂತ ಅವಶ್ಯವಾದದ್ದಾಗಿರುತ್ತದೆ. ಜನರು ಮೌನದಿಂದ ಇರುವುದನ್ನು ಕಲಿತುಕೊಂಡರೆ ಅದೆಷ್ಟೋ ತೊಂದರೆಗಳನ್ನು ತಪ್ಪಿಸಬಹುದು.

*

ಅನುಪಯುಕ್ತವಾದ ಹಲವಾರು ಮಾತುಗಳನ್ನು ಆಡಲಾಗುತ್ತದೆ. ಅವು ತಪ್ಪು ತಿಳಿವಳಿಕೆಯನ್ನು ಹಾಗೂ ಕೆಟ್ಟ ಭಾವನೆಗಳನ್ನು ಉಂಟು ವೂಡುತ್ತವೆ. ಮೌನವನ್ನಾಚರಿಸುವುದರ ಮೂಲಕ ಅವು ಸಂಭವಿಸದಂತೆ ತಡೆಯಬಹುದಾಗಿದೆ.

ಮಾತನಾಡಲು ಅವಶ್ಯವಿರುವ ಶಬ್ದಗಳನ್ನಷ್ಟೆ ಉಚ್ಚರಿಸುತ್ತಿದ್ದರೆ ಜಗತ್ತು ಮೌನದಿಂದಿರುವ ಸ್ಥಳವಾಗುವುದು.

(2/227–29) ಸಾಮಾನ್ಯವಾಗಿ ಇತರರನ್ನು ನೋಡುವಾಗ, ಅವರಲ್ಲಿ ಅತಿ ಕನಿಷ್ಠ ಪ್ರಮಾಣದಲ್ಲಿ ನಮಗೆ ಅನುಕೂಲಕರವಿರುವುದನ್ನು ನೋಡುವುದಕ್ಕಿಂತ ಹೆಚ್ಚು ಸುಲಭವಾದ ವಿಷಯ ಬೇರೊಂದಿಲ್ಲ. ಪ್ರತಿಯೊಬ್ಬನಲ್ಲೂ ದೋಷಗಳಿರುತ್ತವೆ, ಅವುಗಳಿಗೆ ಅವನು ಲಕ್ಷ್ಯಕೊಡುವುದಕ್ಕಿಂತ ಹೆಚ್ಚಾಗಿ ಅವನ ನೆರೆಹೊರೆಯವರು ಲಕ್ಷ್ಯಕೊಡುತ್ತಾರೆ. ಆದರೆ ಯಾರನ್ನಾದರೂ ಅನ್ಯಾಯವಾಗಿ ತೀರ್ಮಾನಕ್ಕೊಳಪಡಿಸದೆ ಇರುವುದಕ್ಕಾಗಿ ಅವನಲ್ಲಿ ಅತ್ಯುತ್ತಮವಾದದ್ದೇನಿದೆ ಎಂಬುದನ್ನು ನೋಡಬೇಕು. ನಿಮ್ಮ ಮಿತ್ರ ಒಕ್ಕಣ್ಣಿನವನಾಗಿದ್ದರೆ, ಅವನ ಒಳ್ಳೆಯ ಭಾಗವನ್ನಷ್ಟೆ ನೋಡಬೇಕು ಎಂದು ಹೇಳುವ ಗಾದೆ ಮಾತಿದೆ.

ನಿಮ್ಮ ಮಿತ್ರನೊಬ್ಬ ನಯವಿಲ್ಲದವನಂತೆ, ನಿಧಾನಗತಿಯುಳ್ಳವನಂತೆ ತೋರಿಬರಬಹುದು, ಆದರೆ ಅವನು ನಿಮ್ಮ ತರಗತಿಯಲ್ಲಿ ಬಹಳ ಶ್ರಮವಹಿಸಿ ಅಭ್ಯಾಸ ಮಾಡುವ ವಿಧ್ಯಾರ್ಥಿಯಾಗಿರಬಹುದು.

ಅತ್ಯಂತ ಕಟ್ಟುನಿಟ್ಟಿನ ಹಾಗೂ ನಿಷ್ಠುರ ಶಿಕ್ಷಕ ಎಂದು ನೀವು ಭಾವಿಸಿರುವ ಮನುಷ್ಯ ಬಹುಶಃ ನಿಮ್ಮ ಮೇಲೆ ಪ್ರೇಮವುಳ್ಳವನಾಗಿರಬಹುದು ಮತ್ತು ನೀವು ಪ್ರಗತಿ ಸಾಧಿಸಲಿ ಎಂದು ಮಾತ್ರ ಬಯಸುತ್ತಿರಬಹುದು.

ಕೆಲವೊಮ್ಮೆ ನಿಮಗೆ ಅತ್ಯಂತ ಬೇಸರವನ್ನುಂಟುಮಾಡುವವ ಅಥವಾ ಸಿಡುಕು ಮೋರೆಯವ ಎಂದು ನೀವು ಭಾವಿಸುವ ನಿಮ್ಮ ಮಿತ್ರ, ಒಟ್ಟಿನಲ್ಲಿ, ನಿಮಗಿರುವ ಮಿತ್ರರಲ್ಲಿ ಅತ್ಯುತ್ತಮನಾದವನಿರಬಹುದು.

ತಮ್ಮ ಹೃದಯಾಂತರಾಳದಲ್ಲಿ, ಬೇರೆಯವರು ಗ್ರಹಿಸಲಾಗದ ಏನನ್ನೋ ಕೊಂಡೊಯ್ಯುತ್ತಿರುವ ಎಷ್ಟೋ ಜನರನ್ನು ದುಷ್ಟರೆಂದು ಭಾವಿಸಿ ನಾವು ಅವರನ್ನು ಕಠೋರ ರೀತಿಯಲ್ಲಿ ನಡೆಸಿಕೊಳ್ಳುತ್ತಿರುತ್ತೇವೆ.

ಖಾನೆಗಳುಳ್ಳ ಪೆಟ್ಟಿಗೆಯನ್ನು ತಯಾರಿಸುವಾಗ ದಕ್ಷನಾಗಿರುವ ಬಡಗಿ ಫಲಕಗಳು ಎಷ್ಟೇ ಕೊಳೆತಿದ್ದರೂ ಅವುಗಳಲ್ಲಿ ಗಟ್ಟಿ ಎಳೆಗಳುಳ್ಳ ಕೆಲವಾದರೂ ಇರುವುದನ್ನು ಕಂಡುಕೊಳ್ಳುವುದು ನಿಶ್ಚಿತ. ಬಡಗಿ ಅದಕ್ಷನಾಗಿದ್ದರೆ ಅವನು ಅಜ್ಞಾನದಿಂದ ಹಾಗೂ ತಿರಸ್ಕಾರದಿಂದ ಆ ಎಲ್ಲ ಫಲಕಗಳನ್ನು ಎಸೆದು ಬಿಡುವನು. ಆದರೆ ದಕ್ಷನಾದ ಬಡಗಿ ಅವುಗಳನ್ನು ಎತ್ತಿಕೊಂಡು ಹುಳತಿಂದ ಭಾಗವನ್ನು ಕಾಳಜಿಪೂರ್ವಕ ತೆಗೆದು ಹಾಕಿ ಉಳಿದಿದ್ದನ್ನು ಸಪಾಟಾಗುವಂತೆ ಮಾಡುವನು. ಅತಿ ಬಿರುಸಾದ ಗಂಟುಗಳುಳ್ಳ ಕಟ್ಟಿಗೆಯಿಂದ ಕಲಾವಿದನು ಹೃದಯವನ್ನು ಕಲಕುವ ಆಕಾರಗಳನ್ನು ತಯಾರಿಸಬಲ್ಲನು.

**– ಶ್ರೀಮಾತೆ**

**ಸಹಾನುಭೂತಿ ಹಾಗೂ ಇತರರಿಗೆ ಸಹಾಯ ಮಾಡುವುದು:**

(23/831) ಬುದ್ಧಿಯಲ್ಲಿ ಹಾಗೂ ಹೃದಯದಲ್ಲಿ ಅಚಲರಾಗಿ ಇನ್ನೊಬ್ಬರ ಹಿತವನ್ನು ಬಯಸುವುದು, ಮನುಷ್ಯ ಕೊಡಬಹುದಾದ, ಅತ್ಯಂತ ಶ್ರೇಷ್ಠ ಸಹಾಯವಾಗಿರುತ್ತದೆ.

ಏನನ್ನಾದರೂ ಯಾರನ್ನಾದರೂ ನೀವು ಭಗವಂತನ ಕೈಗೆ ಒಪ್ಪಿಸಿಬಿಟ್ಟರೆ ಆ ಬಗ್ಗೆ ನಂತರ ನಿಮ್ಮಲ್ಲಿ ಆಸಕ್ತಿಯಾಗಲಿ, ಕಳವಳವಾಗಲಿ ಇರಬಾರದು. ಅತ್ಯಂತ ಒಳ್ಳೆಯದನ್ನು ಮಾಡಲು ಭಗವಂತನಿಗೆ ಬಿಟ್ಟುಕೊಡಬೇಕು.

ನೀನು ಹೇಳುತ್ತಿರುವ ಸ್ಥಿತಿ, ತನ್ನಷ್ಟಕ್ಕೆ ತಾನೇ ಸ್ಥಿರಗೊಂಡಿರುವುದು, ಬಹಳ ಒಳ್ಳೆಯ ಸಂಗತಿ – ಅದು ಶ್ರೇಷ್ಠ ಪ್ರಗತಿ. ಪ್ರಾರ್ಥನೆಗಳನ್ನು ಕುರಿತು ಹೇಳುವುದಾದರೆ ಪ್ರಾರ್ಥನೆ ಮಾಡುವುದು ಮತ್ತು ವಿಶೇಷವಾಗಿ ಇತರರಿಗಾಗಿ ನಿಸ್ವಾರ್ಥ ಪ್ರಾರ್ಥನೆ ಸಲ್ಲಿಸುವುದರಿಂದ ಬರುವ ಮನೋವೃತ್ತಿ ನಿನ್ನಲ್ಲಿ ಉಚ್ಚತರ

ಸಾಮರ್ಥ್ಯವನ್ನು ತೆರೆದಿಡುವುದು. ನೀನು ಯಾರ ಸಲುವಾಗಿ ಪ್ರಾರ್ಥನೆ ಮಾಡುವಿಯೋ ಅವರಲ್ಲಿ ಪರಿಣಾಮ ಕಂಡು ಬರದೇ ಇರಬಹುದು, ಅದನ್ನು ಕುರಿತು ನಿಶ್ಚಿತವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ, ಏಕೆಂದರೆ ಪರಿಣಾಮ ಅವಶ್ಯವಾಗಿ ಆ ವ್ಯಕ್ತಿಗಳ ಮೇಲೆ ಅವಲಂಬಿಸಿರುತ್ತದೆ: ಪ್ರಾರ್ಥನೆ ಕೆಳಗೆ ತಂದುಕೊಡುವ ದೈವೀ ಶಕ್ತಿಗೆ ಅವರು ತೆರೆದುಕೊಂಡಿರುತ್ತಾರೋ ಇಲ್ಲವೋ, ಗ್ರಹಿಸಲು ಇಷ್ಟವುಳ್ಳವರಾಗಿರುತ್ತಾರೋ ಇಲ್ಲವೋ ಇಲ್ಲವೆ ಅವರಲ್ಲಿರುವ ಏನೋ ಒಂದು ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೋ ಇಲ್ಲವೋ ಎಂಬುದು ಈ ವಿಷಯದಲ್ಲಿ ಮಹತ್ವದ್ದಾಗಿರುತ್ತದೆ.

**– ಶ್ರೀ ಅರವಿಂದರು**

**ನಿಜವಾಗಿ ಪ್ರೀತಿಸುವುದು;**

(5/237–38) **ಪ್ರಶ್ನೆ:** *ಶ್ರೀಮಾತೆಯವರೆ, "ನೀನು ನನ್ನನ್ನು ಪ್ರೀತಿಸಿದರೆ, ನಾನು ನಿನ್ನನ್ನು ಪ್ರೀತಿಸುವೆ" ಎಂದು ಹೇಳುವ ಪ್ರೇಮ ಯಾವ ಬಗೆಯದು?*

**ಶ್ರೀಮಾತೆ:** ನೀನು ನನ್ನನ್ನು ಪ್ರೀತಿಸಿದರೆ, ನಾನು ನಿನ್ನನು ಪ್ರೀತಿಸುವೆನು? ನಿಖರವಾಗಿ ಮನುಷ್ಯರು ಮಾತನಾಡುವುದೇ ಹಾಗೆ: "ನೀನು ನನ್ನನ್ನು ಪ್ರೀತಿಸಿದರೆ, ನಾನು ನಿನ್ನನ್ನು ಪ್ರೀತಿಸುವೆ, ನೀನು ನನ್ನನ್ನು ಪ್ರೀತಿಸದಿದ್ದರೆ, ನಾನು ನಿನ್ನನ್ನು ಪ್ರೀತಿಸುವುದಿಲ್ಲ." ಇದು ಮಾನವ ಸ್ವಭಾವದ ಅತ್ಯಂತ ಸಾಮಾನ್ಯವಾದ ಅಭಿವ್ಯಕ್ತಿ. ಅದಿನ್ನೂ ಮುಂದೆ ಹೋಡುಗುತ್ತದೆ, ಭಗವಂತನೊಡನೆ ಇರುವ ಸಂಬಂಧಕ್ಕೆ ಅವರು ಅದನ್ನು ಅನ್ವಯಿಸುತ್ತಾರೆ: "ನಾನು ಬಯಸಿದ್ದನ್ನು ನೀನು ಮಾಡಿದೆಯಾದರೆ, ಆಗ ನೀನು ನನ್ನನ್ನು ಪ್ರೇಮದಿಂದ ಕಾಣುತ್ತಿರುವಿ ಎಂದು ಹೇಳುತ್ತೇನೆ, ನಾನು ಬಯಸಿದ್ದನ್ನು ನೀನು ಮಾಡದೆ ಇದ್ದರೆ, ನೀನು ನನ್ನನ್ನು ಪ್ರೇಮದಿಂದ ನೋಡುತ್ತಿರುವಿ ಎಂದು ಯೋಚಿಸಲೂ ಸಾಧ್ಯವಿಲ್ಲ, ನಿಶ್ಚಿತವಾಗಿ ನಾನು ನಿನ್ನನ್ನು ಪ್ರೀತಿಸಲಾರೆ."

ಅದಿರುವುದು ಹಾಗೆ, ಅದರರ್ಥ ಅದೊಂದು ವ್ಯಾಪಾರದ ವಿಷಯವಾಗುತ್ತದೆ.

**ಪ್ರಶ್ನೆ:** "ನೀನು ನನ್ನನ್ನು ಪ್ರೀತಿಸದಿದ್ದರೂ ನಾನು ನಿನ್ನನ್ನು ಪ್ರೀತಿಸುವೆ" ಎಂದು ಹೇಳಿದಾಗ?

**ಶ್ರೀಮಾತೆ:** ಅದು ಒಳ್ಳೆಯದಾಗಲು ಪ್ರಾರಂಭಿಸುತ್ತದೆ. ಅದಕ್ಕಿಂತಲೂ ಹೆಚ್ಚು ಒಳ್ಳೆಯದೆಂದರೆ ಮನುಷ್ಯ ತನ್ನನ್ನು ಪ್ರೀತಿಸಲಾಗುತ್ತದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳದೆ ಇರುವುದಾಗಿದೆ. ಅವನು ಅದರ ಬಗ್ಗೆ ಸಂಪೂರ್ಣವಾಗಿ ಉದಾಸೀನನಾಗಿರಬೇಕು. ಅದು ನಿಜವಾದ ಪ್ರೇಮವಾಗಲು ಪ್ರಾರಂಭಿಸುತ್ತದೆ: ಆಗ ಮನುಷ್ಯ ತಾನು ಪ್ರೀತಿಸಬೇಕೆಂದು ಪ್ರೀತಿಸುತ್ತಾನೆ, ತನ್ನ ಪ್ರೇಮಕ್ಕೆ ಪ್ರತಿಕ್ರಿಯೆ ದೊರಕುತ್ತದೆ ಎಂಬ ಕಾರಣದಿಂದ ಅಲ್ಲವೇ ಅಲ್ಲ. ಇಲ್ಲವೆ ಆ ಇನ್ನೊಬ್ಬ ನಿಮ್ಮನ್ನು ಪ್ರೀತಿಸುತ್ತಾನೆ ಎಂಬ ಕಾರಣಕ್ಕಾಗಿಯೂ ಅಲ್ಲ. ಈ ಎಲ್ಲ ನಿಬಂಧನೆಗಳಿದ್ದಾಗ ಅದು ಪ್ರೇಮವಲ್ಲವೇ ಅಲ್ಲ. ಮನುಷ್ಯ ಪ್ರೀತಿಸದೆ ಇರುವುದು ಅವನಿಗೆ ಸಾಧ್ಯವಾಗುವುದಿಲ್ಲ ಎಂಬ ಕಾರಣದಿಂದ ಪ್ರೀತಿಸುತ್ತಾನೆ, ಏಕೆಂದರೆ ಅವನಿಗೆ ಪ್ರೀತಿಸುವುದು ಬೇಕಾಗಿರುತ್ತದೆ. ಮುಂದೆ ಏನು ಸಂಭವಿಸುವುದು ಎಂಬುದರ ಬಗ್ಗೆ ಅವನಿಗೆ ಕಾಳಜಿಯಿರುವುದಿಲ್ಲ. ತನ್ನ ಪ್ರೇಮದ ಭಾವನೆಯಿಂದ ಅವನು ಪರಿಪೂರ್ಣವಾಗಿ ತೃಪ್ತಿಯಿಂದಿರುತ್ತಾನೆ. ಮನುಷ್ಯ ಪ್ರೀತಿಸಬೇಕೆಂಬ ಕಾರಣದಿಂದಾಗಿ ಪ್ರೀತಿಸುತ್ತಾನೆ.

ಉಳಿದದ್ದೆಲ್ಲ ಚೌಕಾಸಿ ಮಾಡುವಂತಹದಾಗಿರುತ್ತದೆ, ಅದು ಪ್ರೇಮವಲ್ಲ.

ಮನಸ್ಸಿನಲ್ಲಿ ಈ ಬಗೆಯ ಲೆಕ್ಕಾಚಾರವಿರುವವರೆಗೆ, ಇಲ್ಲವೆ ಭಾವನೆಗಳಾಗಲಿ, ಸಂವೇದನೆಗಳಾಗಲಿ ಇರುವವರೆಗೆ, ಹೆಚ್ಚು ಕಡಿಮೆ ಸರಿಯೆಂದು ಒಪ್ಪಿಕೊಂಡಾಗಲೂ ಸ್ವಲ್ಪ ಲೆಕ್ಕಾಚಾರವಿರುವವರೆಗೆ ಅದು ಚೌಕಾಸಿಮಾಡುವುದಾಗಿರುತ್ತದೆ, ಪ್ರೇಮವಾಗಿರುವುದಿಲ್ಲ.

ಉಳಿದದ್ದೆಲ್ಲ ಪ್ರೇಮವನ್ನುಕುರಿತು ಜನರು ಮಾಡಿದ್ದಾಗಿರುತ್ತದೆ, ಅಲ್ಲದೆ ಅದು ಬಹಳ ಸುಂದರವಾಗಿರುವುದಿಲ್ಲ, ಮತ್ತು ಇನ್ನೂ ಕಡಿಮೆ ಸುಂದರವಾಗಿರುವ ಎಲ್ಲ ಬಗೆಯ ವಿಷಯಗಳತ್ತ ಉದಾಹರಣೆಗೆ ಅಸೂಯೆ ಇಲ್ಲವೆ ಮತ್ಸರಗಳತ್ತ, ಹಿಂಸಾತ್ಮಕ ಸ್ವಭಾವಿರುವವರಲ್ಲಿ ದ್ವೇಷಿಸುವವರೆಗೂ ಕೊಂಡೊಯ್ಯುತ್ತದೆ. ಚಿಕ್ಕ ಪ್ರಾರಂಭ ಹೀಗಿರುತ್ತದೆ: ಮನುಷ್ಯ ಪ್ರೀತಿಸಿದಾಗ ಅವನು ಯಾರನ್ನು ಪ್ರೀತಿಸುತ್ತಾನೋ ಆ ವ್ಯಕ್ತಿ ತಾನು ಪ್ರೀತಿಸಲ್ಪಡುತ್ತಿದ್ದೇನೆಂದು ಅರಿತುಕೊಳ್ಳಬೇಕಾದ ಆವಶ್ಯಕತೆ ಉಂಟಾಗುವುದು. ಆದರೆ ಭಗವಂತನೊಡನಿರುವ ಸಂಬಂಧದಲ್ಲಿ ಮನುಷ್ಯ ಭಗವಂತನನ್ನು ಪ್ರೀತಿಸುತ್ತಾನೆ, ಆದರೆ ಭಗವಂತ ಅದನ್ನು ಅರಿತುಕೊಳ್ಳಬೇಕೆಂದು ಒತ್ತಾಯ ತರುತ್ತಾನೆ. ಅದು ಪತನದ ಪ್ರಾರಂಭ. ಮನುಷ್ಯ ನಿಜವಾದ ವಿಷಯ

ಕುರಿತು ಯೋಚನೆಯನ್ನು ಕೂಡ ಮಾಡುವುದಿಲ್ಲ, ಅದು ಸ್ವಲ್ಪವಾಗಿಯಾದರೂ ಮನುಷ್ಯನನ್ನು ಸ್ಪರ್ಶಿಸುವುದಿಲ್ಲ.

ಮನುಷ್ಯ ಯೋಚಿಸುವುದಿಲ್ಲ, ಅವನು ಪ್ರೀತಿಸುತ್ತಾನೆ, ಅಷ್ಟೆ ಮನುಷ್ಯ ಪ್ರೀತಿಸುತ್ತಾನೆ ಹಾಗೂ ಪ್ರೇಮದ ವಿಸ್ತಾರದಲ್ಲಿ ಹಾಗೂ ಪ್ರೇಮದ ಗಾಢ ಸಂತೋಷದಲ್ಲಿರುತ್ತಾನೆ, ಅಷ್ಟೆ.

ಜನರು ಪ್ರೇಮವೆಂದು ಕರೆಯುವುದರಿಂದ ನಿಜವಾದ ಪ್ರೇಮದವರೆಗೆ ಹೋಗುವ ದಾರಿ ಬಹಳ ದೀರ್ಘವಾಗಿರುತ್ತದೆ – ನಿಜವಾಗಿಯೂ ಬಹಳ ದೀರ್ಘವಾಗಿರುತ್ತದೆ.

ಮನುಷ್ಯನ ಸಾಮಾನ್ಯ ಪ್ರಜ್ಞೆಯಲ್ಲಿ ಅದು ತಾಳುವ ಎಲ್ಲ ತಿರಸ್ಕಾರಯೋಗ್ಯ ರೂಪಗಳನ್ನು ಕುರಿತು ನಾನು ಇಲ್ಲಿ ಹೇಳುತ್ತಿಲ್ಲ, ಅತ್ಯುತ್ತಮ ಸ್ಥಿತಿಗಳನ್ನು ಕುರಿತು, ಅಂದರೆ, ಪ್ರೇಮ ಅತ್ಯಂತ ಒಳ್ಳೆಯ ರೂಪದಲ್ಲಿರುವುದುನ್ನು ಕುರಿತು ಹಾಗೂ ಅತ್ಯಂತ ಉದಾಸೀನ ಭಾವದಲ್ಲಿರುವುದನ್ನು ಕೂಡ ಕುರಿತು ಹೇಳುತ್ತಿದ್ದೇನೆ. ಮಾನವರಿಗೆ ಪ್ರಶ್ನೆ ಮಾಡಿ, ಕೊಟ್ಟು ತೆಗೆದುಕೊಳ್ಳುವಿಕೆಯ ಬಗೆಗೆ ನಿರ್ಲಕ್ಷ್ಯದಿಂದಿರುವ ಜನರ ಶೇಕಡಾವಾರು ಸಂಖ್ಯೆಯನ್ನು ಅರಿತುಕೊಳ್ಳಲು ಬಯಸುತ್ತೇನೆ. ಸರಳವಾಗಿ ಅದಷ್ಟನ್ನೇ ಮಾತ್ರ. “ನೀನು ಪ್ರೀತಿಸಿದರೆ ನಾನು ಪ್ರೀತಿಸುವೆ” ಎಂದು ಹೇಳುವ ಜನರ ಮಟ್ಟ ನಿಜವಾಗಿ (ಪ್ರೇಮವನ್ನು ಕುರಿತಾಗಿರುವ) ಏಣಿಯ ತಳಭಾಗದಲ್ಲಿರುತ್ತದೆ, ಅದರ ಕೆಳಗಿರುವ ತಗ್ಗಿನಲ್ಲೆಂದೂ ಹೇಳಬಹುದು. ಅದಕ್ಕೂ ಕೆಳಗಿನ ಹಂತವಿದೆ: “ನನ್ನನ್ನು ಪ್ರೀತಿಸು, ನಂತರ ನಿನ್ನನ್ನು ಪ್ರೀತಿಸಲು ಸಾಧ್ಯವಾಗುವುದೆ ಎಂಬುದನ್ನು ನೋಡುತ್ತೇನೆ.” ಅಲ್ಲಿ ನೀವು, ಒಟ್ಟಿನಲ್ಲಿ, ಅಸಹ್ಯಕರ ಜನರೊಂದಿಗೆ ವ್ಯವಹರಿಸಬೇಕಾಗುತ್ತದೆ. ಕೊಟ್ಟು ತೆಗೆದುಕೊಳ್ಳುವುದರ ಅವಶ್ಯಕತೆ ಕುರಿತು ಮಾತ್ರ ನಾನು ಮಾತನಾಡುತ್ತಿದ್ದೇನೆ. ಅದು ಕೆಳಗಿಳಿದು ಹೋಗುವ ಶ್ರೇಣಿಯಲ್ಲಿ ಮೊದಲ ಹಂತವಾಗಿರುತ್ತದೆ.

ಹಾಗಿದ್ದಾಗ್ಯೂ ಇದನ್ನು ನೀವು ಒಂದು ದಿನ ತಿಳಿದುಕೊಳ್ಳುವಿರಿ. ನೀವಿನ್ನೂ ಬಹಳ ಚಿಕ್ಕವರಿದ್ದೀರಿ.

**ಮಾನವ ಪ್ರೇಮದ ಬಾಹ್ಯ ತೋರಿಕೆಗಳನ್ನು ಭೇದಿಸಿ ನೋಡಿರಿ**

(8/300–302) **ಪ್ರಶ್ನೆ:** *ಭಗವಂತನ ಪ್ರೇಮದ ಬಗ್ಗೆ ಅರಿವು ತಂದುಕೊಳ್ಳಲು ಎಲ್ಲ ಇನ್ನಿತರ ಪ್ರೇಮವನ್ನು ಕೈಬಿಡಬೇಕಾಗುತ್ತದೆ ಎಂದು ಹೇಳಲಾಗಿದೆ.*

*ಹಟಮಾರಿತನದಿಂದ ನಮ್ಮನ್ನು ಅಂಟಿಕೊಳ್ಳುವ ಮತ್ತು ನಮ್ಮನ್ನು ಸುಲಭವಾಗಿ ಬಿಟ್ಟುಹೋಗದ ಇತರ ಪ್ರೇಮವನ್ನು ನಿರಾಕರಿಸುವುದಕ್ಕೆ ಅತ್ಯಂತ ಒಳ್ಳೆಯ ರೀತಿ ಯಾವುದು?*

**ಶ್ರೀಮಾತೆ:** ಅದರೊಳಗಿಂದ (ಇತರ ಪ್ರೇಮದೊಳಗಿಂದ) ಹಾದು ಹೋಗಬೇಕು.

ಅದರ ಹಿಂದೆ ಏನಿದೆ ಎಂಬುದನ್ನು ಕಂಡುಕೊಳ್ಳಲು ಅದರೊಳಗಿಂದ ಹಾದು ಹೋಗಬೇಕು. ತೋರಿಕೆಯನ್ನು ಕಂಡು ನಿಲ್ಲಬಾರದು. ಬಾಹ್ಯ ರೂಪದಿಂದ ತೃಪ್ತಿ ಪಡಬಾರದು. ಈ ಪ್ರೇಮದ ಹಿಂದಿರುವ ತತ್ವವನ್ನು ಹುಡುಕುವುದರ ಸಲುವಾಗಿ ತನ್ನಲ್ಲಿ ಪ್ರೇಮದ ಭಾವನೆಯ ಮೂಲವನ್ನು ಕಂಡುಕೊಳ್ಳುವವರೆಗೆ ಮನುಷ್ಯ ಸಂತುಷ್ಟನಾಗಬಾರದು. ಆಗ ಬಾಹ್ಯ ರೂಪ ತನ್ನಿಂದ ತಾನೇ ಬಿದ್ದು ಹೋಗುತ್ತದೆ ಮತ್ತು ನೀವು ಎಲ್ಲದರ ಹಿಂದಿರುವ ದೈವೀ ಪ್ರೇಮದೊಂದಿಗೆ ಸಂಪರ್ಕ ಪಡೆಯುತ್ತೀರಿ.

ಅದೇ ಅತ್ಯಂತ ಒಳ್ಳೆಯ ಮಾರ್ಗ.

ಇನ್ನೊಂದನ್ನು ಕಂಡುಕೊಳ್ಳುವುದಕ್ಕಾಗಿ ಇದ್ದ ಒಂದನ್ನು ತೊಡೆದು ಹಾಕುವುದು ಬಹಳ ಕಠಿಣವಾದದ್ದು. ಅದು ಹೆಚ್ಚಿನ ಮಟ್ಟಿಗೆ ಅಸಾಧ್ಯವಾದ ಕಾರ್ಯ, ಏಕೆಂದರೆ ಮಾನವ ಸ್ವಭಾವ ಸೀಮಿತವಾಗಿದ್ದು ವೈರುಧ್ಯಗಳಿಂದ ತುಂಬಿಕೊಂಡಿರುತ್ತದೆ ಮತ್ತು ತನ್ನ ಚಲನೆಗಳಲ್ಲಿ ಎಷ್ಟೊಂದು ಪ್ರತ್ಯೇಕತೆಯ ರೀತಿಯಲ್ಲಿ ವರ್ತಿಸುತ್ತದೆಂದರೆ ಮನುಷ್ಯ ಅದನ್ನು ನಿಮ್ನ ರೂಪದಲ್ಲಿ, ಅಂದರೆ, ಮಾನವ ಅನುಭವಕ್ಕೆ ತಂದುಕೊಳ್ಳುವ ರೀತಿಯಲ್ಲಿ ಇರುವುದನ್ನು ತಿರಸ್ಕರಿಸಬೇಕೆಂದು ಆಂತರಿಕ ಪ್ರಯತ್ನ ಕೈಕೊಂಡರೆ, ಅವನು ಸಾಮಾನ್ಯವಾಗಿ, ಪ್ರೇಮದ ಭಾವನೆಯನ್ನು ತಂದುಕೊಳ್ಳುವುದನ್ನು ತಿರಸ್ಕರಿಸುತ್ತಾನೆ ಮತ್ತು ಕಲ್ಲಿನಂತಾಗುತ್ತಾನೆ. ಮತ್ತು ನಂತರ, ಕೆಲವು ಸಲ, ಮನುಷ್ಯ ತನ್ನಲ್ಲಿ ಪ್ರೇಮವನ್ನು ಸ್ವೀಕರಿಸಲು ಹಾಗೂ ಪ್ರಕಟಗೊಳಿಸಲು ಸಾಮರ್ಥ್ಯನ್ನು ಪುನಶ್ಚೇತನ ಗೊಳಿಸುವುದಕ್ಕಾಗಿ ಹಲವಾರು ವರ್ಷಗಳ ಕಾಲ ಇಲ್ಲವೆ ಶತಮಾನಗಳ ಕಾಲ ಕಾಯಬೇಕಾಗುತ್ತದೆ.

ಆದ್ದರಿಂದ ಪ್ರೇಮ ಬಂದಾಗ, ಅದು ಯಾವುದೇ ರೂಪದಲ್ಲಿ ಬಂದಿರಲಿ, ಅನುಸರಿಸಬೇಕಾದ ಅತ್ಯುತ್ತಮ ಮಾರ್ಗವೆಂದರೆ, ಪ್ರಯತ್ನಪಟ್ಟು ಅದರ ಬಾಹ್ಯ

ರೂಪವನ್ನು ಭೇದಿಸಿ, ಅದರ ಹಿಂದಿರುವ ಹಾಗೂ ಅದಕ್ಕೆ ಅಸ್ತಿತ್ವ ನೀಡುವ ದೈವೀ ತತ್ವವನ್ನು ಕಂಡು ಹಿಡಿಯುವುದಾಗಿದೆ. ಸ್ವಾಭಾವಿಕವಾಗಿ ಅದು ಪ್ರಲೋಭನೆಗೊಳಪಡಿಸುವ ಉಪಾಯಗಳಿಂದ ಹಾಗೂ ತೊಂದರೆಗಳಿಂದ ತುಂಬಿಕೊಂಡಿದೆ. ಆದರೆ ಆದು ಹೆಚ್ಚು ಪರಿಣಾಮಕಾರಿ. ಮನುಷ್ಯ ತಪ್ಪಾಗಿ ಪ್ರೇಮಿಸುತ್ತಾನೆಂದು, ಪ್ರೇಮಿಸುವುದನ್ನೇ ಕೈಬಿಡುವುದರ ಬದಲಾಗಿ ಅವನು ತಪ್ಪಾಗಿ ಪ್ರೇಮಿಸುವುದನ್ನು ನಿಲ್ಲಿಸಬೇಕು ಹಾಗೂ ಒಳ್ಳೆಯ ರೀತಿಯಿಂದ ಪ್ರೇಮಿಸುವುದನ್ನು ಬಯಸಬೇಕು.

ಉದಾಹರಣೆಗೆ ಮಾನವರ ನಡುವಿರುವ ಪ್ರೇಮ, ಅದರ ಎಲ್ಲ ರೂಪಗಳಲ್ಲಿ ಅದು ಮಕ್ಕಳಿಗಾಗಿ ತಂದೆ ತಾಯಿಯರ ಪ್ರೇಮ, ತಂದೆ ತಾಯಿಗಳಿಗಾಗಿ, ಅಕ್ಕ ತಂಗಿಯರಿಗಾಗಿ, ಮಿತ್ರರಿಗಾಗಿ, ಪ್ರೇಮಿಗಳಿಗಾಗಿ ಮಕ್ಕಳ ಪ್ರೇಮವಾಗಿದ್ದು ಅದೆಲ್ಲವೂ ಅಜ್ಞಾನದಿಂದ ಸ್ವಾರ್ಥದಿಂದ ಮತ್ತು ಮನುಷ್ಯನ ನ್ಯೂನತೆಗಳ ಎಲ್ಲ ದೋಷದಿಂದ ಕಳಂಕಿತವಾಗಿದೆ. ಆದ್ದರಿಂದ ಪ್ರೇಮಿಸುವುದನ್ನು ಪೂರ್ತಿಯಾಗಿ ನಿಲ್ಲಿಸುವುದರ ಬದಲಾಗಿ – ಶ್ರೀ ಅರವಿಂದರು ಹೇಳಿದಂತೆ ಅದು ಬಹಳ ಕಠಿಣವಾದ ಕಾರ್ಯ ಮತ್ತು ಹೃದಯವನ್ನು ಶುಷ್ಕವನ್ನಾಗಿ ಮಾಡುತ್ತದಲ್ಲದೆ ಯಾವ ಗುರಿಯನ್ನೂ ತಲುಪಲು ಸಾಧ್ಯವಾಗುವುದಿಲ್ಲ – ಮನುಷ್ಯ ಒಳ್ಳೆಯ ರೀತಿಯಲ್ಲಿ ಹೇಗೆ ಪ್ರೇಮಿಸಬೇಕೆಂಬುದನು ಕಲಿಯಬೇಕು: ಭಕ್ತಿಯಿಂದ, ತನ್ನನ್ನು ಕೊಟ್ಟುಕೊಳ್ಳುವುದರಿಂದ, ಸ್ವ–ನಿರಾಕರಣೆಯಿಂದ, ಪ್ರೇಮದ ವಿರುದ್ಧ ಹೋರಾಡದೆ ಅದರ ವಿಕೃತ ರೂಪಗಳ ವಿರುದ್ಧ ಹೋರಾಡಬೇಕು. ಈ ರೂಪಗಳೆಂದರೆ ಏಕಸ್ವಾಮ್ಯದ ಬಯಕೆ, ಮೋಹ, ಸ್ವಾಮ್ಯಾಸಕ್ತಿ, ಅಸೂಯೆ, ಮತ್ತು ಈ ಎಲ್ಲ ಪ್ರಮುಖ ಚಲನೆಗಳೊಂದಿಗೆ ಬರುವಂತಹವು. ತನ್ನ ವಶದಲ್ಲಿ ಇಟ್ಟುಕೊಳ್ಳಲು ಬಯಸದೆ ಇರುವುದು, ಅಧಿಕಾರ ಚಲಾಯಿಸದೆ ಇರುವುದು, ತನ್ನ ಸಂಕಲ್ಪಗಳನ್ನು, ಲಹರಿಗಳನ್ನು, ಆಸೆಗಳನ್ನು ಹೇರದೆ ಇರುವುದು, ತೆಗೆದುಕೊಳ್ಳಲು ಬಯಸದೆ ಕೇವಲ ಕೊಡಲು ಬಯಸುವುದು, ಇನ್ನೊಬ್ಬರ ಪ್ರತಿಸ್ಪಂದನಕ್ಕಾಗಿ ಒತ್ತಾಯ ತರದೆ ಇರುವುದು, ಆದರೆ ತನ್ನದೇ ಪ್ರೇಮದಿಂದ ಸಂತುಷ್ಟನಾಗಿರುವುದು, ತನ್ನ ವೈಯಕ್ತಿಕ ಅಭಿರುಚಿಗಳನ್ನು, ಸಂತೋಷವನ್ನು ಮತ್ತು ತನ್ನ ವೈಯಕ್ತಿಕ ಆಸೆಯ ನೆರವೇರಿಕೆಯನ್ನು ಆರಸದೆ ಇರುವುದು, ಆದರೆ ತನ್ನ ಪ್ರೇಮವನ್ನು, ವಾತ್ಸಲ್ಯವನ್ನು ನೀಡುವುದು, ಯಾವ ಬಗೆಯ ಪ್ರತಿಸ್ಪಂದನವನ್ನು ಬೇಡದೆ ಇರುವುದು, ಕೇವಲ ಪ್ರೇಮವನ್ನು ವ್ಯಕ್ತಪಡಿಸುವುದು ಮತ್ತು ಸಂತೋಷದಿಂದಿರುವುದು, ಮತ್ಯಾವುದೂ ಅಲ್ಲ.

ನೀವು ಹೀಗೆ ಮಾಡಿದರೆ, ಒಂದು ದೊಡ್ಡ ಹೆಜ್ಜೆಯನ್ನು ಮುಂದಿರಿಸುತ್ತೀರಿ. ಮತ್ತು ಈ ಮನೋಭಾವದ ಮೂಲಕ ಕ್ರಮೇಣ ಆ ಭಾವನೆಯಲ್ಲಿ ಮುಂದುವರಿಯುವಿರಿ. ಮತ್ತು ಒಂದು ದಿನ ಈ ಪ್ರೇಮ ವೈಯಕ್ತಿಕವಾದದ್ದಲ್ಲ ಎಂದು ಗ್ರಹಿಸುತ್ತೀರಿ. ಪ್ರೇಮ ವಿಶ್ವವ್ಯಾಪಿ ದೈವೀ ಭಾವನೆಯಾಗಿದ್ದು ಅದು ನಿಮ್ಮ ಮೂಲಕ. ಹೆಚ್ಚು ಕಡಿಮೆ, ಶ್ರೇಷ್ಠ ರೀತಿಯಲ್ಲಿ ಪ್ರಕಟವಾಗುತ್ತದೆ, ಆದರೆ ಅದು ಸಾರದಲ್ಲಿ ದೈವಿಕವಾಗಿರುತ್ತದೆ.

ಮೊದಲನೆಯ ಹೆಜ್ಜೆ ಸ್ವಾರ್ಥಿಯಾಗದೆ ಇರುವುದು. ಯೋಗದ ಆಚರಣೆ ಮಾಡುವವರಿಗಷ್ಟೇ ಅಲ್ಲ, ಆದರೆ ಸಾಮಾನ್ಯ ಜೀವನದಲ್ಲಿಯೂ ಕೂಡ ಪ್ರತಿಯೊಬ್ಬನಿಗೂ ಅದು ಒಂದೇ ಆಗಿರುತ್ತದೆ. ಮನುಷ್ಯ ತಾನು ಹೇಗೆ ಪ್ರೇಮ ವ್ಯಕ್ತಪಡಿಸಬೇಕು ಎಂಬುದನ್ನು ತಿಳಿಯಬಯಸಿದರೆ ಮೊದಲು ತನ್ನ ಬಗ್ಗೆ ಸ್ವಾರ್ಥಿಯಾಗಿ ಪ್ರೇಮ ಹೊಂದಿರಬಾರದು. ತಾನು ಪ್ರೀತಿಸುವುದಕ್ಕೆ ಪ್ರತಿಯಾಗಿ ಪ್ರೀತ್ಯಾಸ್ಪದವಾದುದರಿಂದ ಏನಾದರೂ ಬರಲಿ ಎಂದು ಒತ್ತಾಯಪಡಿಸದೆ ತನ್ನನ್ನು ಕೊಟ್ಟುಕೊಳ್ಳಬೇಕು. ತನ್ನ ಮೇಲೆ ತಾನೇ ಜಯ ಸಾಧಿಸುವುದಕ್ಕೆ ಮತ್ತು ಅಸಂಸ್ಕೃತವಲ್ಲದ ಜೀವನ ನಡೆಸುವುದಕ್ಕೆ ಈ ಶಿಸ್ತುಪಾಲನೆ ಪ್ರಥಮ ಹಂತದ್ದು.

ಯೋಗವನ್ನು ಕುರಿತು ಹೇಳುವಾಗ ಇನ್ನೊಂದು ವಿಷಯವನ್ನು ಇಲ್ಲಿ ಸೇರಿಸಬಹುದು. ಅದು, ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ, ಈ ಸೀಮಿತ ಹಾಗೂ ಮಾನವ ರೂಪದ ಪ್ರೇಮವನ್ನು ಛೇದಿಸಿ ಹೋಗಿ ದೈವೀ ಪ್ರೇಮದ ತತ್ವವನ್ನು ಕಂಡುಕೊಳ್ಳುವ ಸಂಕಲ್ಪವಾಗಿದೆ. ಆಗ ಮನುಷ್ಯ ನಿಶ್ಚಿತವಾಗಿ ಪರಿಣಾಮ ಕಂಡುಕೊಳ್ಳುತ್ತಾನೆ. ಅದು ಅವನು ತನ್ನ ಹೃದಯವನ್ನು ಶುಷ್ಕವಾಗಿರಿಸುವುದಕ್ಕಿಂತ ಒಳ್ಳೆಯದು. ಅದು ಬಹುಶಃ ಸ್ವಲ್ಪ ಕಠಿಣವಾದದ್ದು, ಆದರೆ ಅದು ಎಲ್ಲ ರೀತಿಯಲ್ಲಿ ಒಳ್ಳೆಯದು. ಏಕೆಂದರೆ ಈ ರೀತಿಯಾಗಿ ಅಹಂಕಾರಪೂರಿತರಾಗಿ ಇತರರು ದುಃಖಪಡುವಂತೆ ಮಾಡುವುದರ ಬದಲಾಗಿ, ತಮ್ಮ ಚಲನೆಯಲ್ಲಿ ಅವರು ಶಾಂತ ರೀತಿಯಿಂದ ಇರಲು ಬಿಟ್ಟುಕೊಟ್ಟು ತನ್ನ ಸಂಕಲ್ಪವನ್ನು ಇತರರ ಮೇಲೆ ಹೇರದೆ, ತನ್ನನ್ನೇ ಪರಿವರ್ತಿಸುವ ಕಾರ್ಯವನ್ನು ಕುರಿತು ಪ್ರಯತ್ನಿಸಬಹುದು. ಹೀಗೆ ಮಾಡುವುದು ಸಾಮಾನ್ಯ ಜೀವನದಲ್ಲಿಯೂ ಕೂಡ ಉಚ್ಚತರವಾದುದರೆಡೆಗೆ ಒಂದು ಹೆಜ್ಜೆ ಇಟ್ಟಂತೆ ಮತ್ತು ಅದು ಹೆಚ್ಚು ಸಾಮರಸ್ಯದಿಂದ ಕೂಡಿರುತ್ತದೆ.

# ಶ್ರೀ ಅರವಿಂದರ
# ದಿವ್ಯ ಜೀವನ

**– ಜಾನ್ವಿ**

## ವಿಶ್ವದಲ್ಲಿನ ಮಾನವನ ಸ್ಥಾನ

ಶ್ವೇತಾಶ್ವತರೋಪನಿಷತ್ತಿನ "ಸರ್ವಾಜೀವೇ ಸರ್ವಸಂಸ್ಥೆ ಬೃಹನ್ತೇ ಅಸ್ಮಿನ್ ಹಂಸೋ ಬ್ರಾಮ್ಯತೇ ಬ್ರಹ್ಮಚಕ್ರೇ। ಪೃಥಗಾತ್ಮಾನಂ ಪ್ರೇರಿತಾರಾಂ ಚ ಮತ್ವಾ ಜುಷ್ಟುಸ್ತತಸ್ತೇನಾಮಾಮೃತತ್ವಮೇತಿ॥ (1:16) ಎನ್ನುವ ಶ್ಲೋಕ್ಲದಿಂದ ಈ ಅಧ್ಯಾಯವನ್ನು ಶ್ರೀ ಅರವಿಂದರು ಆರಂಭ ಮಾಡುತ್ತಾರೆ. ಅಸ್ಮಿನ್‌ಹಂಸ ಅಂದರೆ ನಮ್ಮ ಆತ್ಮವು ತಾನು ಪೃಥಗಾತ್ಮನೆಂದೇ ಪರಿಭಾವಿಸಿ ಈ ಬೃಹತ್ ಬ್ರಹ್ಮ ಚಕ್ರದಲ್ಲಿ ಪರಿಭ್ರಮಿಸುತ್ತದೆ. ಜುಷ್ಟಃ ತತಃ ತೇನ ಅಮೃತತ್ವಂ ಏತಿ ಅಂದರೆ ಬ್ರಹ್ಮನ ಅನುಮತಿ ಪಡೆದು ಆಮೇಲೆ ಅಧ್ಯಾಯವನ್ನು ಅವರು ಕಟ್ಟಿಕೊಡುತ್ತಾರೆ.

ಪರಮ ಸತ್ಯವೂ ಅನೇಕ ಆಯಾಮಗಳನ್ನು ಹೊಂದಿದೆ. ಅನೇಕ ಸಾಪೇಕ್ಷ ಸಂಬಂಧಗಳನ್ನು ಹೊಂದಿದೆ. ಅಸ್ತಿತ್ವದ ಕೆಲ ಸ್ತರಗಳು ನಮ್ಮ ಅನುಭವಕ್ಕೆ ಬರುತ್ತವಾದರೂ, ಅನೇಕ ಸ್ತರಗಳು ನಮ್ಮ ಅನುಭವಕ್ಕೆ ದಕ್ಕುವುದಿಲ್ಲ; ಅದಕ್ಕೂ ಹೆಚ್ಚಾಗಿ ಅವು ಇವೆ ಅನ್ನುವುದೇ ಗೊತ್ತಾಗುವುದಿಲ್ಲ. ನಮ್ಮ ನಮ್ಮ ಪ್ರಜ್ಞೆ, ಅನುಭವಗಳನ್ನು ವಿಸ್ತಾರಗೊಳಿಸಿಕೊಳ್ಳುತ್ತ ಹೋದಂತೆ – ವಿಕಾಸದ ಕೆಲಸವೇ ಅದು ಅನುಭವಕ್ಕೆ ಬರುವದು. ಈ ಅಲೌಕಿಕ ಸ್ತರಗಳ ಇರುವಿಕೆಯ ಬಗ್ಗೆ ಅರಿವು ಮೂಡುತ್ತದೆ. ಹೀಗೆ ಹಂತ ಹಂತವಾಗಿ, ನಿಧಾನವಾಗಿ, ತನ್ನ ರಹಸ್ಯದ ಸ್ತರಗಳನ್ನು ಬಿಚ್ಚಿಕೊಳ್ಳುತ್ತ ಹೋಗುವುದೇ ವಿಶ್ವದ ಅರ್ಥ ಹಾಗೂ ಸಾರ್ಥಕತೆ. ವಿಶ್ವವು ಆಕಸ್ಮಾತ್ತಾಗಿ ನಿರ್ಮಾಣವಾದದ್ದೂ ಅಲ್ಲ. ಇಂದ್ರಿಯಗಳು ಸೃಷ್ಟಿಸಿದ ಮಾಯಾಜಾಲವೂ ಅಲ್ಲ. ವಿಶ್ವವೆಂಬುದು ಹೇಗೋ ಆಕಸ್ಮಿಕವಾಗಿ ಸೃಷ್ಟಿಯಾಗಿದೆ. ಹೇಗೊ ನಡೆದುಕೊಂಡು ಹೋಗುತ್ತದೆ ಅನ್ನುವಂಥ ಉಡಾಫೆ ಸಿದ್ಧಾಂತ ಸಲ್ಲದು. ಪ್ರಜ್ಞೆ ಇದೆ. ನಿರ್ಜೀವ, ಸಜೀವ, ಚರಾಚರ ಸಮಸ್ತ ಸೃಷ್ಟಿಯನ್ನು ಒಂದು ಕ್ರಮಬದ್ಧವಾದ, ಸುಂದರ ವ್ಯವಸ್ಥೆಗೊಳಸಿದ ಪ್ರಜ್ಞೆಯನ್ನು ಅರ್ಥಮರ್ಥ ಪ್ರಜ್ಞೆ ಎಂದಾಗಲಿ, ಅಜ್ಞ ಎದುರಾಗಲು ಹೇಳಲಾದೀತೇ? ಯಾವ ಮಹಾಶಕ್ತಿಯ ಸೃಷ್ಟಿಯನ್ನು ಅಸ್ತಿತ್ವದಲ್ಲಿ ತಂದಿದೆಯೋ ಅದು ಪ್ರತಿಯೊಂದು ಕಣದಲ್ಲೂ ಸಮಾಹಿತವಾಗಿದೆ. ಪ್ರತಿ ವಸ್ತುವಿನಲ್ಲಿ ಕೂಡ ಪೂರ್ಣ ಪ್ರಮಾಣದಿಂದ ಪ್ರಕಟವಾಗಿದೆ.

ವಿಶ್ವಾತೀತವಾದ ಪರಮ ಅಸ್ತಿತ್ವವನ್ನು ನಮ್ಮ ಪೂರ್ವಜರು ಬಹು ಆದರರಿಂದ ಕಂಡರೂ, ಆರಾಧನಾ ಭಾವದಿಂದ ಕಂಡರು. ವ್ಯಕ್ತಿಯಲ್ಲಿ ವಿಶ್ವಾತೀತ ಸತ್ತೆಯ (ಪ್ರಜ್ಞೆ) ಮೂಡುವುದನ್ನೇ ಅವರು ಅರುಣೋದಯವೆಂದು ಕರೆದರು. ವಿಶ್ವಂಭರವಾದ ವಿಷ್ಣುವು ತನ್ನ ಮೂರನೆಯ ಪಾದವನ್ನು ವಿಶ್ವ ಮಾನಸದ ಶುದ್ಧ ಸ್ವರ್ಗಗಳಲ್ಲಿ ಊರಿದನು. ಅಂದರೆ ಅವನು ದಿವ್ಯದರ್ಶನ ಸಮರ್ಥನಾದನು. ವಿಶೋತ್ತರ ಅತ್ಯುನ್ನತ ಸ್ಥಾನದಲ್ಲಿ ಅವನ ಹೆಜ್ಜೆ ಮೂಡಿದೆ, ಅವನ ದೃಷ್ಟಿಯೂ ಇದೆ ಎನ್ನುವುದು ಅವರ ನಂಬಿಕೆ, ಹಾಗೆನ್ನುವುದಕ್ಕಿಂತ ಅದು ಅವರ ದೃಢ ವಿಶ್ವಾಸವಾಗಿತ್ತು. ಆ ಅತ್ಯುನ್ನತ ಸ್ಥಾನವೇ ಮಾನವನ ಗಮ್ಯ! ಮಾನವನು ಮೊದಲು ತನಗೆ ಅರಿವಿಲ್ಲದ ಕಡೆ ಹೋಗಿ ಅಲ್ಲಿಗೆ ತಲುಪುತ್ತಾನೆ. ಅದು ಪ್ರಕೃತಿಯ ಸಹಜ ಕ್ರಿಯೆಯ ಮೂಲಕ ಸಾಧ್ಯವಾಗುತ್ತದೆ. ಕೊನೆ ಕೊನೆಗೆ ಪ್ರಜ್ಞಾ ಜಾಗೃತಿ, ಸ್ವಾತ್ಮ ವಿಸ್ತರಣೆಯ ಮೂಲಕ ಆ ಅಂತಿಮ ಸ್ಥಿತಿಯಲ್ಲಿ ವಾಸ ಮಾಡುತ್ತಾನೆ. ಈ ವಿಧವಾಗಿ ದೈವೀ ಜೀವಕ್ಕೇರುವುದೇ ಮಾನವನ ಜೀವನದ ಅಂತಿಮ ಗುರಿ. ಅವನ ಅಸ್ತಿತ್ವದ ಸಾರ್ಥಕತೆ ಅದರಲ್ಲೇ ಅಡಗಿದೆ. ಇದು ಸಾಮಾನ್ಯವಾಗಿ ಭಾರತದ ಸುಸಂಸ್ಕೃತ ನಂಬಿಕೆ, ಭರವಸೆ ಮತ್ತು ಸಾಧನೆಯಾಗಿದೆ. ಇದು ಅವತ್ತಿಗೂ ಸತ್ಯ, ಇವತ್ತಿಗೂ ಸತ್ಯ.

ಈ ಸತ್ಯ ಮಾನವನ ಬದುಕಿನಲ್ಲಿ ಸಾಕಾರಗೊಳ್ಳಲೇಬೇಕಾಗಿದೆ, ಪ್ರಕಟವಾಗಬೇಕಾಗಿದೆ. ವಿಶ್ವದಲ್ಲಿನ ಎಲ್ಲ ವಿರೋಧಾಭಾಸಗಳ ಹಿಂದೆ ಅಡಗಿರುವ ಏಕೈಕ ಸತ್ಯದ ದರ್ಶನ ಮಾನವನಿಗೆ ಆಗಬೇಕಾಗಿದೆ. ಅಂಥ ಸತ್ಯ ಅಥವಾ ಸತ್ತೆಯು ನಿಷ್ಕ್ರಿಯವಾಗಿದ್ದರೂ, ಆ ಕ್ರಿಯೆಯೂ ಆ ಸ್ಥಿತಿಯನ್ನು ವಿರೋಧಿಸುವುದಿಲ್ಲ. ಯಾವ ತೀಕ್ಷ್ಣತೆ, ತೀಕ್ಷ್ಣ ಕ್ರಿಯೆಯೂ ಆ ಸ್ಥಿತಿಯನ್ನು ಪ್ರಕಟ ಮಾಡಿ ತೋರಿಸಲು ಸಾಧ್ಯವಿಲ್ಲ. ಆ ನಿಷ್ಕ್ರಿಯ ಸತ್ತೆಯು ಪ್ರಕಟನಾ ಬಾಹಿರವಾದ ಅವಸ್ಥೆಯಾಗಿದೆ. ವಿಶ್ವದ ಸಮಸ್ತ ಚಟುವಟಿಕೆಗಳು, ಕ್ರಿಯೆಗಳು, ಕಾರ್ಯಗಳು ಅದರಿಂದಲೇ ಬಂದಿದ್ದರೂ ಸಹ, ವಿಶ್ವದ ಯಾವ ಕ್ರಿಯೆಯೂ ಆ ಮೂಲಭೂತ ಸತ್ತೆಯನ್ನು ಪ್ರತಿನಿಧಿಸಲಾರದು, ತೋರಿಸಲಾರದು, ಅಭಿವ್ಯಕ್ತಗೊಳಿಸಲಾರದು. ಆ ಸತ್ತೆಯು ವಿಶ್ವದಲ್ಲಿ ಮಾತ್ರ ನಾಮರೂಪಗಳ ಮಿತಿಯೊಳಗೇ ಪ್ರಕಟವಾಗಬಲ್ಲದೇ ಹೊರತು, ಮೂಲ ನಿರಾಕಾರ ಸ್ವರೂಪದಲ್ಲಿ ಪ್ರಕಟವಾಗಲಾರದು. ಸಮಸ್ತ ಸೃಷ್ಟಿಯ ಸಕಲ ಚರಾಚರ ವಸ್ತುಗಳಲ್ಲಿ ಸಮಾನ

ರೂಪದಿಂದ ಅಂತರ್ನಿಹಿತವಾಗಿರುವ ಆ ಪರಾ–ಸತ್ತೆಯು ಅಂತಃಸ್ಫೂರ್ತಿಯ ಜ್ಞಾನಕ್ಕೆ ವೇದ್ಯವಾದಿತೇ ವಿನಃ ಸಾಮಾನ್ಯತಃ ಅಭೇದ್ಯವಾಗಿಯೇ ಉಳಿದು ಬಿಡುವುದು. ವಿಕಾಸವು ಕೂಡ ಅದೆ ರೀತಿಯಲ್ಲಿ ಇರುತ್ತದೆ. ಆ ಪರ ವಸ್ತು ನಾವು ಅದೇ ಆಗುವುದರ ಮೂಲಕ ಮಾತ್ರ ಅರ್ಥವಾಗಬಲ್ಲದು, ಅಥವಾ ಆಗ ವೇದ್ಯವಾಗಬಲ್ಲದು. ಸಚ್ಚಿದಾನಂದ ಸ್ವರೂಪವನ್ನು ಮನಃಪ್ರಾಣ ಶರೀರಗಳಲ್ಲಿ ತುಂಬುಕೊಳ್ಳುವುದರ ಮೂಲಕ, ಅದೇ ಆಗುವುದರ ಮೂಲಕ ಮಾತ್ರ ತಿಳಿದುಕೊಳ್ಳಲು ಸಾಧ್ಯ. ಮಾನವನ ಬದುಕಿನ ಸಾರ್ಥಕತೆ ಇರುವುದೇ ಅಲ್ಲಿ. ಪ್ರಜ್ಞೆಯ ಪರಿವರ್ತನೆಯೇ ಮಾನವನ ಬದುಕಿನ ಅಂತಿಮ ಧ್ಯೇಯವಾಗಿದೆ.

ಮಾನವನ ಬುದ್ಧಿಗೆ ನಿಲುಕಬಲ್ಲ ಜ್ಞಾನದ ಆಗರದ ಆಚೆಗಿನದನ್ನು ಅಜ್ಞೇಯ ಎಂದು ಕರೆಯುತ್ತೇವೆ. ಆ ಮೂಲ ಸದ್ವಸ್ತುವಿಗೆ ತಾನು ಸಚ್ಚಿದಾನಂದ ಪ್ರಜ್ಞೆ ಎಂಬ ಅರಿವು ಇರುತ್ತದೆ. ಈ ಸಿದ್ಧಾಂತವೇ ವೇದಾಂತದ ಸರ್ವಶ್ರೇಷ್ಠ ತತ್ವವಾಗಿದೆ. ಉಳಿದೆಲ್ಲ ಏನೆಲ್ಲ ತತ್ವಗಳಿವೆಯೋ, ಸಿದ್ಧಾಂತಗಳಿವೆಯೋ ಅವೆಲ್ಲವೋ ಇದರ ಹೊಟ್ಟೆಯಲ್ಲಿಯೇ ಇರುತ್ತವೆ. ಬುದ್ಧಿಗೆ ಅಜ್ಞಾತ, ಅಜ್ಞೇಯವಾಗಿರುವ ಸದ್ವಸ್ತುವನ್ನು, ಸಚ್ಚಿದಾನಂದ ತತ್ತ್ವವನ್ನು ಆರ್ಥವು ಅನುಭವಿಸಬಲ್ಲದು. ಆತ್ಮವನ್ನು ಆಚ್ಛಾದಿಸಿ ಮರೆಮಾಡಿರುವ ಆವರಣ, ದೃಶ್ಯ, ನಾಮ, ರೂಪ ಎಲ್ಲವನ್ನೂ ಅಸಾರ ಪರಿತ್ಯಾಗ ರೂಪದಿಂದ ದೂರ ಮಾಡಿದರೆ ಏನು ಉಳಿಯುತ್ತದೆ? ಅದೇ ಆ ಏಕೈಕವಾದ ಸದ್ವಸ್ತು! ಅಪಾರ ಪರಿತ್ಯಾಗ, ಸಾರ ಪರಿಗ್ರಹ ರೂಪದಿಂದ ಆತ್ಮದ ಆಚ್ಛಾದನೆಗಳನ್ನು ಪರಿಶೀಲಿಸಿದರೆ ಉಳಿಯುವುದು ಆ ಪರಬ್ರಹ್ಮ ವಸ್ತುವೊಂದೇ! ಉಳಿಯುವುದು ಅದರ ಅನುಭವ ಮಾತ್ರ! ನಮ್ಮ ಜೀವನದ ಪೂರ್ಣತೆ ಇರುವುದೇ ಆ ಅನುಭವದಲ್ಲಿ. ನಮ್ಮ ಜೀವನದ ಧ್ಯೇಯವೇ ಆತ್ಮದ ಶುದ್ಧತೆ (ಅಂದರೆ ಆವರಣಗಳ ನಾಶ), ಶಾಂತಿ ಮತ್ತು ಮುಕ್ತಿಯಾಗಿದೆ. ನಮ್ಮ ಜ್ಞಾನ, ಭಾವ, ಸಂವೇದನೆ, ಕೃತಿ ಎಲ್ಲದರಲ್ಲೂ ಸಚ್ಚಿದಾನಂದದ ಅನುಭವದ ತುಡಿತವೇ ಇದೆ.

ವಿಶ್ವಾತೀತವಾದ, ಅಜ್ಞೇಯವಾಗಿರುವ ಸಚ್ಚಿದಾನಂದ ವಸ್ತುವು ವಿಶ್ವ ಮತ್ತು ವ್ಯಕ್ತಿ ಈ ಎರಡು ಆಯಾಮಗಳಲ್ಲಿ ಪ್ರಕಟವಾಗುತ್ತದೆ. ಎರಡೇ ದ್ವಾರಗಳ ಮೂಲಕ ಸಾಗಬೇಕು. ಸಚ್ಚಿದಾನಂದ ವಸ್ತುವು ಕೆಳಗಿಳಿದು ಬಂದು ಪ್ರಕಟವಾಗುವುದೆಂದರೆ, ಅಚೇತನದಲ್ಲಿ ಮುಳುಗಿ, ತನ್ನನ್ನು ತಾನು ಮರೆತುಬಿಡುವುದು.

ಅವರೋಹಣದಲ್ಲಿಯೂ ವಿವಿಧ ಹಂತಗಳಿವೆ. ಅವುಗಳ ಮೂಲಕವೇ ಅದು ಕೆಳಗಿಳಿದು ಬಂದು ಅಚೇತನದಲ್ಲಿ ಅಂತರ್ಗತವಾಗಿಬಿಡುವುದು. ಆರೋಹಣದ ಪ್ರಕ್ರಿಯೆಯಲ್ಲಿ ಕೂಡ ಅದೇ ಹಂತಗಳ ಮೂಲಕ ಏರುತ್ತ ಹೋಗಿ, ಆವರಣಗಳನ್ನು ಒಂದೊಂದಾಗಿ ಕಳಚುತ್ತ, ಕೊನೆಗೆ ಮೂಲ ಪರಬ್ರಹ್ಮ ವಸ್ತುವಿನಲ್ಲಿ ಸೇರಿ ಒಂದಾಗುವುದು. ಭೌತಿಕದ ಲಯಬದ್ಧ ನಿಷ್ಕ್ರಿಯತೆ, ಆತ್ಮದ ಸ್ವಯಂ ವಿಸ್ಮೃತಿಗಳಿಂದ ಜಗವು ಬಹು ಪ್ರಯಾಸದ ಮೂಲಕ ಹೊರ ಬರುತ್ತದೆ. ಪ್ರಾಣದಲ್ಲಿರುವ ಅವ್ಯವಸ್ಥೆಯನ್ನು ತೊಡೆದು ಹಾಕಿ, ಮನದ ಸಂದೇಹವನ್ನು ನಿವಾರಿಸಿಕೊಂಡು, ಸ್ವಾತ್ಮದರಿವು, ವಿಶ್ವ ಜ್ಞಾನ ಬೆಳೆಯುತ್ತ ಜೀವಿಯು (ಅಥವಾ ಸತ್ತೆಯು) ತನ್ನ ವೈಯಕ್ತಿಕತೆಯನ್ನು ಕಂಡುಕೊಳ್ಳುತ್ತ, ಬೆಳೆಯುತ್ತ ಹೋಗುತ್ತದೆ. ಆದರೆ ಮನಸ್ಸಿಗೆ ಈ ಕೆಲಸವನ್ನು ಪೂರ್ತಿಗೊಳಿಸುವ ವಿಧಾನ ಗೊತ್ತಿಲ್ಲ. ಪ್ರಾಣದ ಗೊಂದಲ, ಮನಸ್ಸಿನ ಅನಿಶ್ಚಿತತೆ ನೀಗಿ, ಮುಂದಿನ ಕೆಲಸವನ್ನು ಕುಶಲ ಕರ್ಮಿಗೆ ಒಪ್ಪಿಸಬೇಕಾಗುವುದು. ಆ ಕುಶಲಕರ್ಮಿ ಇರುವುದು ಅತಿಮಾನಸದಲ್ಲಿ ಹೀಗೆ ನಮ್ಮ ಜಗತ್ತು ಅತಿಮಾನಸಿಕ ಸ್ತರದವರೆಗೆ ಹೋಗಿ ತಲುಪಬೇಕಾಗಿದೆ.

ಮನಃಪ್ರಾಣಗಳು ಈ ಸಂವೇದನೆಗೆ ತೆರೆದುಕೊಳ್ಳುವುವು, ಜಾಗೃತವಾಗುವುವು; ಹೋರಾಟ, ಹುಡುಕಾಟ, ತಡಕಾಟಗಳ ಮೂಲಕ ಆರಂಭವಾದ ಅವುಗಳ ಪ್ರಯತ್ನವು ಅವು ತಮ್ಮನ್ನು ತಾವು ಮೀರಿ ಬೆಳೆದಾಗ ಸಾರ್ಥಕತೆ ಕಾಣುವುದು. ಮನಃಪ್ರಾಣ ಶರೀರಗಳ ಆಚೆ ದೈವೀ ಸತ್ಯವಿದೆ. ಅದು ಜಡವಲ್ಲ, ನಿಷ್ಕ್ರಿಯವಲ್ಲ, ನಿದ್ರೆಯಲ್ಲ, ಮಬ್ಬಲ್ಲ, ಅದು ಅಪಾರ ಶಕ್ತಿಯ ಕೇಂದ್ರಿಕೃತವಾದ ಬಿಂದು, ಆ ಬಿಂದುವಿಗೆ ತನ್ನತನದ ಅರಿವಿಗೆ, ಅಲ್ಲಿ ಅಜ್ಞಾನ ಇಲ್ಲ, ಅಪರಿಮಿತ ಶಕ್ತಿ, ಅನಿರ್ವಚನೀಯ ಆನಂದ ಮಾತ್ರ ತುಂಬಿಕೊಂಡಿದೆ.

ವಿಶ್ವ ಮತ್ತು ವ್ಯಕ್ತಿ ಎರಡೂ ಮೇಲಕ್ಕೇರಲು ಪರಸ್ಪರ ಸಹಾಯಕವಾಗಿವೆ, ಅವಶ್ಯವಾಗಿವೆ. ವಿಶ್ವ ಅಂದರೆ ದೇಶ ಕಾಲಗಳಲ್ಲಿ ವ್ಯಾಪಿಸಿರುವ ಅನಂತ ಸತ್ತೆ: ವ್ಯಕ್ತಿ ಅಂದರೆ ದೇಶ ಕಾಲಗಳ ಮಿತಿಯಲ್ಲಿಯೇ ವಿಸ್ತಾರವಾಗಲು ಬಯಸಿದರೂ, ಹಾಗೆ ಆಗಲಾರದು. ಏಕೆಂದರೆ ಹಾಗೆ ವಿಸ್ತಾರವಾಗುವಾಗ ಅದು ತನ್ನ ಅನೇಕತೆಯನ್ನು ಪ್ರಕಟಿಸುವುದು. ಅನೇಕತೆಯು ಅದರ ಮೂಲಭೂತ ತತ್ವವೂ ಅಲ್ಲ, ಅಂತಿಮ ತತ್ವವೂ ಅಲ್ಲ. ಬದಲಾಗಿ ಮೇಲಿಂದ ಮೇಲೆ ಕಾಣಿಸಿಕೊಳ್ಳುವ, ಮರೆಯಾಗುವ ಘಟಕವಾಗಿದೆ. ಸ್ವಾತ್ಮದರಿವು ಇರುವ ಕೇಂದ್ರ(ವ್ಯಕ್ತಿ)ವಾಗಿ ಕಾಣಿಸಿಕೊಂಡು,

ತನ್ಮೂಲಕ ಪುನಃ ಏಕತೆಯ ಅಭೀಪ್ಸೆಯನ್ನು ಹೊರಹಾಕುತ್ತದೆ. ಪ್ರಜ್ಞೆಯುಳ್ಳ ವೈಯಕ್ತಿಕ ಪ್ರಕೃತಿಯು ಪುರುಷನನ್ನು (ವಿಶ್ವಂಭರ ಸತ್ತೆಯನ್ನು) ಕಾಣಲು ಪ್ರಯತ್ನಿಸುವುದು. ವಿಶ್ವವೂ ಕೂಡ ವಿಶ್ವಾತೀತ ಅತ್ಮವನ್ನು ಕಾಣಲು ಹಂಬಲಿಸುವುದು.

ಇನ್ನೊಂದು ವಿಧವಾಗಿ, ವಿಶ್ವವು ವೈಯಕ್ತಿಕ ವ್ಯಕ್ತಿಯ ಮೂಲಕವೇ ಪ್ರಯತ್ನ ಮಾಡುವುದು. ವ್ಯಕ್ತಿಯು ತನ್ನನ್ನು ತಾನು ಅರಿಯಲು ಪ್ರಯತ್ನ ಮಾಡುವುದೇ ವಿಶ್ವದ ಪ್ರತಿನಿಧಿಯಾಗಿ! ವ್ಯಕ್ತಿಗೆ ಬ್ರಹ್ಮವಸ್ತುವಿನ ಸಾಕ್ಷಾತ್ಕಾರವಾಗಬೇಕಾದರೆ ವ್ಯಕ್ತಿಯು ತನ್ನ ಎಲ್ಲ ಮಿತಿಗಳನ್ನು ಮೀರಿ ಬೆಳೆಯಬೇಕು. ತನ್ನನ್ನು ತಾನು ನಿರ್ಗುಣನನ್ನಾಗಿಸಿಕೊಳ್ಳಬೇಕು. ಆದರೆ ವಿಶ್ವಾತೀತವಾದ ಪರಬ್ರಹ್ಮವು ತನಗೆ ನೀಡಿದ ಪ್ರತ್ಯೇಕತೆಯನ್ನು ಕಳೆದುಕೊಂಡಿಲ್ಲ. ಯಾವ ಉದ್ದೇಶಕ್ಕಾಗಿ ತನಗೆ ಪ್ರತ್ಯೇಕಕತೆಯನ್ನು ನೀಡಲಾಗಿದೆಯೊ ಆ ಉದ್ದೇಶವನ್ನೇ ಅಲ್ಲಗಳೆದಂತಾಗುವುದು. ವೈಯಕ್ತಿಕ ಸತ್ತೆಗೆ ವಿಶ್ವವು ಜೀವನವನ್ನು ಕಲ್ಪಿಸಿಕೊಟ್ಟಿದೆ. ಈ ಕ್ರಿಯಾ ಅವಕಾಶವನ್ನು ಸಮಾಹಿಸಿಕೊಂಡು, ವಿರೋಧಿ ಪರಿಣಾಮಗಳನ್ನು ಗೆದ್ದು, ಅನೇಕ ಸಾಧ್ಯತೆಗಳ ವೃತ್ತದಿಂದ ಹೊರಬಂದು ಸಾಮರಸ್ಯ ಕಂಡುಕೊಳ್ಳಬೇಕು. ಇದು ಮಾನವನ (ವ್ಯಕ್ತಿಯ) ನಿಜವಾದ ಧ್ಯೇಯ ಅಥವಾ ಆದರ್ಶವಾಗಿದೆ. ಆದರೆ ಇದು ಬುದ್ಧಿಯ ವಿಕಾಸದ ಅಥವಾ ಬೆಳವಣಿಗೆಗೆ ಮಿತಿಗೊಂಡರೆ, ಮಾನವನಿಗಿಂತ ಹೆಚ್ಚು ಬುದ್ಧಿಶಾಲಿಯಾದ ಜೀವಿ ಭೂಮಿಯ ಮೇಲೆ ಬಂದರೆ ವಿಕಾಸದ ಗತಿ ನಿಲ್ಲುವುದು ಎಂದು ಹೇಳಬೇಕಾಗುವುದು. ಆದರೆ ಇದು ಸಾಧ್ಯವಿಲ್ಲ. ಮಾನವನಿಗೆ ತನ್ನ ಇತಿಮಿತಿಗಳ ವ್ಯಾಪ್ತಿಯ ಅರಿವಿದೆ; ಆ ಅರಿವು ಅವನನ್ನು ಕಾಡುವುದು. ಅಂತೆಯೇ ಅವನು ದೈವೀ ಪ್ರಕಟಣೆಯ ಧ್ಯೇಯ ಹೊತ್ತು ದುಡಿಯಬಲ್ಲವನಾಗಿದ್ದಾನೆ.

ಪ್ರಾಣಮಯ ಚೈತನ್ಯದ ದೃಷ್ಟಿಯಿಂದ ನೋಡಿದರೆ, ಪುರುಷನ ಎಲ್ಲ ಶಕ್ತಿಗಳೂ ಮಾನವನಲ್ಲಿ (ವ್ಯಕ್ತಿಯಲ್ಲಿ) ಕೇಂದ್ರಿತವಾಗಿವೆ. ಮಾನವನು ಪರಾತ್ಪರವಾದ ಪುರುಷನನ್ನು ಇಡಿಯಾಗಿ ತನ್ನಲ್ಲಿ ಸಮಾಹಿಸಿಕೊಂಡು ಪ್ರಕಟಿಸಲು ಸಾಧ್ಯವಿದೆ. ನಮ್ಮ ಪುರಾತನರು, ಇವನನ್ನೇ 'ಮನು' ಅಥವಾ ಮನೋಮಯ ಪುರುಷ, ಮನದ ಕ್ಷೇತ್ರದಲ್ಲಿರುವ ಆತ್ಮ ಎಂದು ಗುರುತಿಸಿದ್ದಾರೆ. ಮನುಷ್ಯನು ಕೇವಲ ಉತ್ತಮ ಪ್ರಾಣಿ ಅಲ್ಲ, ಅವನು ಸಾಕ್ಷಾತ್ ಆತ್ಮ ಚೈತನ್ಯ

ವಸ್ತುವೇ, ಸಾಕ್ಷಾತ್ ಚೈತನ್ಯವು ಮಾನವನ ರೂಪದಲ್ಲಿ ಕಾಣಿಸಿಕೊಂಡಿದೆ. ವೈಚಾರಿಕ ಜೀವನ, ಸಂವೇದನೆ, ಸಂಕಲ್ಪ, ಪ್ರಜ್ಞಾಯುಕ್ತ ತುಡಿತ ಇವೆಲ್ಲ ಸೇರಿ ಮನು ಮಾನವ ಎಂದು ಹೆಸರು. ಮಾನವನಲ್ಲಿರುವ ಮನವು ಯಾವುದೋ ಹಿರಿದಾದ ತತ್ವವನ್ನು ಜೀವನದಲ್ಲಿ ತಂದು ಸ್ಥಾಪಿಸಲು ಪ್ರಯತ್ನ ಮಾಡುತ್ತದೆ. ತನ್ನ ಇರುವಿಕೆಯನ್ನು ಮೀರಿ ಆಚೆಗಿರುವ ಸತ್ಯವನ್ನು ಇಳಿಸಿ ತರಲು ಮನವು ಮಾಡುವ ಪ್ರಯತ್ನವೇ ದಿವ್ಯ ಜೀವನದ ಕಲ್ಪನೆಯ ಆಧಾರವಾಗಿದೆ.

ತನ್ನ ಇರುವಿಕೆಗಿಂತ, ಮಾನಸಿಕ ಅರಿವಿಗಿಂತ ಹೆಚ್ಚಿನ ಜ್ಞಾನ ಮಾನವನಿಗೆ ಬಂದರೆ, ಅದನ್ನು–ಅದು ಎಷ್ಟೇ ಅಜ್ಞಾತವಿರಲಿ, ಎತ್ತರದಲ್ಲಿರಲಿ, ಅದನ್ನು ಇಳಿಸಿ ತರಲು ಮಾನವನು ಹಂಬಲಿಸುತ್ತಾನೆ. ಆದರೆ ಸದ್ಯಕ್ಕೆ ಅವನಿಗೆ ತನ್ನ ಇಬ್ಬಗೆಯ ಸ್ಥಿತಿಯ ಅರಿವಿದೆ; ಮೇಲಿನದು ಅಜ್ಞಾತ, ಕೆಳಗಿಳಿದು ಕೂಡ ಕತ್ತಲೆಯೇ ಎರಡೂ ಕಡೆಗೆ ಅವನಿಗೆ ಅರಿಯದ ಸ್ಥಿತಿಯೇ ಇದೆ. ಅವನಿಗೆ ತನ್ನ ಭೂತಕಾಲದ ಅರಿವಿಲ್ಲ. ಜಡದಿಂದ ಮಾನವನಾಗುವರೆಗೆ ಬೆಳೆದ ಬಂದ ದಾರಿಯ ನೆನಪಿಲ್ಲ; ಮುಂದಿನ ಭವಿಷ್ಯದ ದಾರಿ ಸ್ಪಷ್ಟವಿಲ್ಲ. ಹೀಗಾಗಿ ಅವನು ದೇವರು, ಭಗವಂತ, ಅತೀತವೆಂದರೆ ಅರ್ಧಮರ್ಧ ನಂಬುತ್ತಾನೆ. ಎಲ್ಲೆಲ್ಲಿ ದ್ವಂದ್ವ, ವಿರೋಧ ತೋರುವುದೋ ಅಲ್ಲಲ್ಲಿ ಅವನಿಗೆ ಸಂದೇಹ ಸಹಜವಾಗಿ ಬರುತ್ತದೆ. ತನ್ನನ್ನು ಸಾವು ಬೆನ್ನು ಹತ್ತಿದ, ಜೀವನವಿಡೀ ನಿರ್ದಿಷ್ಟ ಮಿತಿಯೊಳಗೆಯೇ ಬದುಕಿದ್ದಾಗಿದೆ, ಅನುಭವ, ದೌರ್ಬಲ್ಯ, ಜಡತೆ, ಸಂಕುಚಿತತೆ, ನೋವು, ದುಃಖ, ಕೆಡುಕು ಇವೆಲ್ಲವೂ ಅವನನ್ನು ಜೀವನದುದ್ದಕ್ಕೂ ಕಾಡುತ್ತವೆ. ಆಗ ಸಂಕಟ ಮೋಚಕ ದೇವರ ಬಗ್ಗೆ ಅಪನಂಬಿಕೆ ಸಹಜವಾಗಿ ಬೆಳೆಯುತ್ತದೆ. ಆದರೆ ಏಕೆ? ಏನೂ ತಿಳಿಯದಿದ್ದರೆ ಏನೂ ಗೊತ್ತಾಗದಿದ್ದರೆ ಮಾನವ ಏಕೆ ನಂಬಬೇಕು? ಏನನ್ನು ನಂಬಬೇಕು? ಇದೆಲ್ಲ ರಹಸ್ಯವೋ, ಅಥವಾ ಪೂರ್ಣ ಭ್ರಮೆಯೋ ಏಕೆ ಆಗಿರಲಾರದು. ಭ್ರಮೆಯ ಕಲ್ಪನೆ ಬಂದನಂತರ, ಬುದ್ಧನ ನಿರ್ವಾಣದ ಸಿದ್ಧಾಂತ ರೂಪಗೊಂಡಿತು. ಸತ್ ಇದೆ ಅನ್ನುವುದಾದರೆ, ಅಸತ್ ಏಕೆ ಇರಬಾರದು? ಅದು ಕೂಡ ಇದ್ದೇ ಇರುತ್ತದೆ. ಬದುಕಿನಲ್ಲಿ ಬರುವ ಶುಭಾಶುಭ, ಇಷ್ಟಾನಿಷ್ಟ, ನೋವು ನಲಿವುಗಳು ಅವಿಭಜನೀಯ: ಅವುಗಳನ್ನು ಬೇರ್ಪಡಿಸಲು ಬರುವುದಿಲ್ಲ. ಅವು ತಪ್ಪು ಕಲ್ಪನೆಯಿಂದ ಅಜ್ಞಾನದಿಂದ ಇವೆಲ್ಲ ನಾಮ ರೂಪಾದಿ ಉಪಾಧಿಗಳನ್ನು ಸ್ವ–ಇಚ್ಛೆಯಿಂದ, ಸ್ವ–ಸಂಕಲ್ಪದಿಂದ ಧಾರಣ ಮಾಡುತ್ತಾನೆಯೇ ಹೊರತು

ಅನಿವಾರ್ಯ, ಬಲವಂತ ಹಾಗೂ ಅಸಹಾಯಕತೆಗಳಿಂದಲ್ಲ. ಎಲ್ಲದರಲ್ಲೂ ಪರಮಾತ್ಮನ ಆವಾಸವಿದೆ; ಈಶಾವಾಸ್ಯಮಿದಂ ಸರ್ವಂ; ಪ್ರಕಟವಾದ ವಿಶ್ವದಲ್ಲಿ ಈಶಾವಾಸ್ಯಮಿದಂ ಸರ್ವಂ. ಎಲ್ಲದರಲ್ಲೂ ಅವನು ಇಳಿದು ಬಂದು ನೆಲೆ ನಿಲ್ಲಲು ಪ್ರಯತ್ನ ಮಾಡುತ್ತಾನೆ. ಹೀಗಾಗಿ ಯಾವ ಸ್ತರವನ್ನೂ ನಾವು ಪತನ, ಅಧಃಪತನ, ಶಿಕ್ಷೆ ಎಂಬಂತೆ ನೋಡಬಾರದು. ಅವು ವಿಕಾಸದ ಹಂತಗಳು.

ಆದರೆ ನಾವು ಮಾತ್ರ ಈ ಸುಳ್ಳು, ಸಾಪೇಕ್ಷ ಸಂಬಂಧಗಳ ಮೂಲಕವೇ ಸಾಗಬೇಕು. ಅವಿದ್ಯೆಯ ಮೂಲಕ ಮೃತ್ಯುವನ್ನು ಗೆಲ್ಲಬೇಕು – ಅವಿದ್ಯೆಯಾಂ ಮೃತ್ಯುಂತೀರ್ತ್ವ. ಅಂತೆಯೇ ವೇದಗಳು ಶಕ್ತಿಯನ್ನು ಗೂಢವಾದ ರೀತಿಯಲ್ಲಿ ಸ್ತ್ರೀಗೆ ಹೋಲಿಸಿ ದಾರಿ ತಪ್ಪಿಸುವಂಥವುಗಳು ಎಂದು ಹೇಳುವುದುಂಟು. ಆದರೆ ಆ ಮೂಲಕವೇ ಅವು 'ಬೃಹತ್ ಸತ್ಯವನ್ನು' ಕಟ್ಟುತ್ತವೆ ಎಂದೂ ಹೇಳುತ್ತವೆ. ಇದರರ್ಥವೇನೆಂದರೆ, ನೈತಿಕತೆಯನ್ನು ಪಾಲಿಸುವ ದೃಷ್ಟಿಯಿಂದ ಪ್ರಕೃತಿಯಲ್ಲಿರುವ ಎಲ್ಲ ವಿನಾಶ ತತ್ವಗಳಿಂದ ಬೇರ್ಪಟ್ಟು ಬಿಟ್ಟರೆ ಪರಿವರ್ತನೆ ಸಾಧ್ಯವಾಗುವುದಿಲ್ಲ. ಸಣ್ಣ ಸಣ್ಣ ಮಾನವ ಮಿತಿಗಳನ್ನು ವಿಶಾಲಗೊಳಿಸುತ್ತ, ಮೃತ್ಯುವನ್ನು ಗೆಲ್ಲುತ್ತ, ಸರ್ವವಿಜಯಿ ಜೀವನದ ಕಡೆಗೆ ಹೋಗಬೇಕು. ಜೀವನವನ್ನು ದಿವ್ಯ ಜೀವನವನ್ನಾಗಿ ಪರಿವರ್ತಿಸಬೇಕು. ಸ್ವರ್ಗ–ನರಕ–ಭೂಮಿಗಳೆಲ್ಲ ಆ ಪರಮಾತ್ಮ ತತ್ವದಲ್ಲಿ ಒಂದಾಗಬೇಕು. ಇದು ಮಾನವನ ಜೀವಿತದ ಧ್ಯೇಯ. ಆದರೆ ವೈರುಧ್ಯಗಳನ್ನು ಒಂದಾಗಿ ಸೇರಿಸುವುದು ಹೇಗೆ? ಮತ್ತು ಅದೆಂಥ ಪರುಷ ಶಿಲೆಯಿಂದ ಮರ್ತ್ಯ ಜೀವನವನ್ನು ಬಂಗಾರದ ದಿವ್ಯ ಜೀವನವನ್ನಾಗಿ ಮಾಡುವುದು?

ಅವೆಲ್ಲ ವೈವಿಧ್ಯಗಳು ಒಂದೇ ಸತ್ಯದ ಪ್ರಕಟಣೆಗಳೇ? ಅಂದಾಗ ಮಾತ್ರ ಪರಿವರ್ತನೆ ಸಾಧ್ಯವಾಗಬಲ್ಲದು?

ನಾವೀಗಾಗಲೇ ನೊಡಿದಂತೆ, ಅಸತ್ ಅನ್ನುವುದು ಅನೂಹ್ಯವಾದ ಅಸಿತ್ವ ಅಥವಾ ಅದೊಂದು ಅನಿವರ್ಚನೀಯ ಆನಂದದ ಸ್ಥಿತಿಯಾಗಿರಬಹುದು. ಬುದ್ಧನ ನಿರ್ವಾಣದ ಕಲ್ಪನೆಯು ಮಾನವನ ಪ್ರಯತ್ನದ ಅತ್ಯಂತಿಕ ಸ್ಥಿತಿಯೇ ಆಗಿದೆ. ಏಕೆಂದರೆ, ಸುಖದುಃಖಗಳ ಜಗತ್ತನ್ನು ದಾಟಿ, ಎಲ್ಲದರಿಂದ ಮುಕ್ತವಾಗಿ ಒಂದು ವಿಧವಾಗಿ ಮಾತು ಮನಂಗಳಿಂದತ್ತತ್ತವಾಗಿರುವ ಶಾಂತಿಯಲ್ಲಿ, ಆನಂದದಲ್ಲಿ ಇರುವ ಸ್ಥಿತಿ ಅದಾಗಿದೆ. ಅದರ ಲೌಕಿಕ ಪ್ರಯೋಜನ ಏನೆಂದರೆ

ದುಃಖ ನಿವೃತ್ತಿ, ಅಹಂಕಾರದ ವಿನಾಶ, ಏನೂ ಇಲ್ಲದ – ಕೇವಲ ಕೂಡ ಆನಂದ ಮಾತ್ರ ಇದೆ ಅನ್ನಬಹುದಾದ ಸ್ಥಿತಿಯ ಪ್ರಾಪ್ತಿ. ಅಲ್ಲಿ ಆತ್ಮದ ಅಸಿತ್ವ ಕೂಡ ಪ್ರಶ್ನಾರ್ಹವಾಗಿರುತ್ತದೆ. ಸಚ್ಚಿದಾನಂದ, ಪರಬ್ರಹ್ಮವಸ್ತು, ಆತ್ಮ, ಜಗತ್ತು ಏನೂ ಇಲ್ಲದ ಸ್ಥಿತಿ ಅದು. ಅದಕ್ಕೆ ವಿರುದ್ಧವಾಗಿ, ಸಮಸ್ತ ಸೃಷ್ಟಿಯು ಸತ್ಯವೇ ಆಗಿರುವುದರಿಂದ ಈ ಅಸತ್ ಅನ್ನುವುದು ಕೂಡ ಆ ಸಚ್ಚಿದಾನಂದದ ಸ್ಥಿತಿಯೇ ಎಂದು ಭಾವಿಸುವುದು ಸಕಾರಾತ್ಮಕವಾಗಿದೆ. ಮೂಲಭೂತವಾಗಿ ಅವಿದ್ಯೆಯೋ, ಅಜ್ಞಾನವೋ, ಮಾಯೆಯೋ ನಿರ್ಮಾಣ ಮಾಡಿದ ಮಿಥ್ಯಾ ಜಗತ್ತಿನ ಅನುಭವದಿಂದ ಪಾರಾಗುವುದು ಕೂಡ ಒಂದು ರೀತಿಯಲ್ಲಿ ಸಕಾರಾತ್ಮಕ ಭಾವವೇ. ಅವುಗಳ ಅನುಭವ ಇದೆ ಅಂತಲೇ ಅವುಗಳಿಂದ ಬಿಡಿಸಿಕೊಳ್ಳುವ, ಮುಕ್ತಿ ಹೊಂದುವ ಸ್ಥಿತಿಯ ಪ್ರಾಪ್ತಿಗಾಗಿ ಮಾನವ ಹಂಬಲಿಸುತ್ತಾನೆ ತಾನೇ? ತರ್ಕಕ್ಕೆ, ಹೇತುಬುದ್ಧಿಗೆ ಒಪ್ಪಿಗೆ ಆಗಲಿ ಆಗದಿರಲಿ, ಪರಿಹಾರವಂತೂ ಸಿಕ್ಕಂತೆಯೇ. ಏಕೆಂದರೆ ನಾವು ನಿಂತಿರುವುದು ಅಜ್ಞೇಯದ ಅಂಚಿನಲ್ಲಿ. ದಿವ್ಯ ಜೀವನದ ಸಾಧ್ಯತೆಯ ಪರಿಕಲ್ಪನೆ ಇಷ್ಟು ಆಧಾರ ಸಾಕೆನಿಸುತ್ತದೆ.

# ಶ್ರೀ ಅರವಿಂದರ
# "ಭವಾನೀ ಭಾರತೀ"
## (ಪದ್ಯಾನುವಾದ–4)

**– ಅನುವಾದ: ಪುಟ್ಟು ಕುಲಕರ್ಣಿ**

ಅಸಮಾನ ಶೂರ ವೀರಾಧಿವೀರ ನಾಯಕರು ಹೃದಯ ತುಂಬಿ
ಕುಲದ ಉದ್ಧಾರದಲಿ ಪ್ರಮುಖ–ಸಂತ–ಮಹಾಂತ ಶೌರ್ಯದುಂಬಿ
ಆತ್ಮದಾಹುತಿಯ ನೀಡಲೆನೆ ಸಿದ್ಧರಿರಲಿಲ್ಲಿ ಸೌಮ್ಯರಾಗಿ,
ಶತ್ರುಗಳನೀಗ ತರಿಯಲೆನೆ ರಕ್ತದಲಿ–ಪುಷ್ಟ ಕರಾಳಿಯಾಗಿ ॥28॥

ಯಾರಿಗಂಜುತಿಹೆ ಓ ಆರ್ಯ ನೀನು, ಧುಮುಕು ನೀ ರುಧಿರ–ಸಿಂಧು
ಅಭಿವ್ಯಕ್ತಗೊಳಲಿ ನಿನ್ನಾರ್ಯ ಸತ್ತ್ವ ನಿನ್ನಾತ್ಮ ತತ್ತ್ವವೆಂದು
ಇದೋ ನೋಡಿದೋ, ದುರ್ಗಮ್ಯ–ಜ್ಯೋತಿಕಾಂತಿಯಲಿ ಮಿಂದು ತೇಜ
ಆ ತ್ರಿಶೂಲವದು ಉದಿತಗೊಳ್ಳುತಿದೆ ಅನುಸ್ಪಂದ–ಬಂಧ ಓಜ ॥29॥

ಓ ಕವಿಯೆ ಮತ್ತೆ ಓ ರಸಿಕ ಕೇಳಿರೋ ಮಾತೆ ವಾಣಿಯನ್ನು
ಪೂಜಿಸೋ ಮಗುವೆ  ನೀನೀಗ ಕಾಳಿ–ಕರಾಳಿಯಾ ಚಂಡಿಯನ್ನು
ಕಣ್ತೆರೆದು ಕಾಣು, ಇವಳೀಗ ಮಾತೆ ಭಾರತಾಂಬೆಯೇ ಖಚಿತ
ಅರಿಗಣವ ತರಿದು ಅಪ್ಪಳಿಸೆ ಯುದ್ಧದುನ್ಮಾದ– ಧ್ವಂಸ– ಭರತ ॥30॥

ಕರೆಯಿದೋ ವೀರ ಭಾರತದ ಧೀರ ಕುಲಜಾತಪುತ್ರರೇಳಿ
ಲಭ್ಯವಿದೆ ವಿಜಯ ಯುದ್ಧದಲಿ, ಬೇಡ ಭಯದ ಬಿರುಗಾಳಿ
ನಾನೆದ್ದು ಬಂದೆ! ಎಲ್ಲಿಹುದು ಖಡ್ಗ?ಎಲ್ಲಿಹುದು ಶಸ್ತ್ರಪೂರಾ?
ಏಳಿ ಎದ್ದೇಳಿ ಜಾಗ್ರತಿಗೆ ಸಂದು, ಓ ಸುಪ್ತಸಿಂಹಗಳಿರಾ! ॥31॥

ಘನನಿಬಿಡ ತಿಮಿರ ಮಧ್ಯದಲು ಸಹಿತ ನಿಶ್ಚಯದ ವಾಣಿ–ಪೂರ
ಕವಿದಿರುವ ಭೀಮ–ಕತ್ತಲಲು ಈಗ ಆ –ಭೂಮ–ತೇಜ–ಸಾರ
ನರ್ತನಕೆ ಸಂದ ಈ ನನ್ನ ಚಿತ್ತ–ಹೃದಯಗಳು ನಾದಗೊಳಲು
ಹುಡಿಗಟ್ಟಿ ಈಗ ಸುಖಭೋಗವೆಲ್ಲ, ಬಂದೆನಿದೋ ಬಯಲಿಗೀಗ ॥32॥

– – –

**ಟಿಪ್ಪಣಿ: ಮಾತೆ ಭಾರತಾಂಬೆಯೇ ಖಚಿತ:**

ಇಲ್ಲಿ ಶ್ರೀಮಾತೆಯನ್ನು "ಮಾತಾ ಭವಾನೀ! ಎಂದು ಪ್ರಾರ್ಥಿಸಿ ನನ್ನ ಮೇಲೆ ಕರುಣಾದೃಷ್ಟಿಯನ್ನು ಬೀರು ಎಂದು ಪ್ರಾರ್ಥಿಸುವ ಭಕ್ತನು "ಭವಾನೀ ತ್ವಂ" ಎಂದು ಎರಡು ಶಬ್ದಗಳನ್ನು ಉಚ್ಚರಿಸುತ್ತಲೇ, ಅಷ್ಟಕ್ಕೇ ತೃಪ್ತಳಾದ ಅವಳು, ಆ ಕರೆಯಲ್ಲಿ 'ಅಮ್ಮಾ, ನಾನು ನೀನೇ ಆಗಬೇಕೆನ್ನುವ ಅರ್ಥವನ್ನು ಅರಿತುಕೊಂಡು ಬಿಡುತ್ತಾಳೆ.' ಇಲ್ಲಿ 'ಭವಾನಿ' ಶಬ್ದದ ಪ್ರತಿಮಾತ್ಮಕ ವಿನ್ಯಾಸ ಅಪೂರ್ವವಿದೆ. ನಾಮಪದವಾಗಿ ಭವಾನಿ ಎನ್ನುವದನ್ನು ಶಿವನ ಪತ್ನಿ ಎಂದು ಅರ್ಥವಿದೆ; ಆದರೆ "ತ್ವಮ್" ಶಬ್ದದೊಡನೆ ಅದು ಕ್ರಿಯಾಪದವಾದಾಗ, 'ನಾನು ನೀನೇ ಆಗಬೇಕು' ಎನ್ನುವ ಧ್ವನಿ ಉದಿಸುತ್ತದೆ. [ಆಧಾರ: ಸ್ವಾಮಿ ಶ್ರೀ ಸ್ವಾಮಿ ಶಾಂತಾನಂದಪುರಿಯವರ "ಲಲಿತಾ ಸಹಸ್ರನಾಮದ ಒಳನೋಟ"]. ಇಲ್ಲಿ ಶ್ರೀ ಅರವಿಂದರು ಈ ಭವಾನಿಯನ್ನು ಭಾರತಮಾತೆಯನ್ನಾಗಿಸಿದ್ದಾರೆ.

(ಸಶೇಷ)

# ಶ್ರೀ ಅರವಿಂದರ
# ಭವಿಷ್ಯ ಕಾವ್ಯ
## 2

**– ಅನು: ಪುಟ್ಟು ಕುಲಕರ್ಣಿ**

## 4 ಬೌದ್ಧಿಕ–ಪ್ರಥಕ್–ಸ್ವರೂಪ[1]

ಇಲ್ಲಿ ಸಹಕಾರಿಯಾಗಿ ಹಾಗೂ ಸಹಾಯಪೂರ್ವಕವಾಗಿಯೇ ರೂಪಿಸಲ್ಪಟ್ಟಿರುವ, ಈ ಸಲಹಾತ್ಮಕ ಕಾರ್ಯದ ಮಹತ್ವದ ಈ ಕೃತಿಯು ನನಗೆ ಅತ್ಯಂತ ಆತ್ಮೀಯವಾಗಿಯೇ ಅನುಸ್ಪಂದಗೊಂಡಿದೆ. ಏಕೆಂದರೆ, ನಾನು ಇದನ್ನು, ಬಹುತೇಕವಾಗಿ ಸಾಮಾನ್ಯ **ಭಾರತೀಯನೋರ್ವನು ಹೊಂದಿರಬಹುದಾದ ಮುಕ್ತ ಮನೋಭಾವದ (ಮಿಯರ್ ಬ್ಲಾಂಕ್) ಮಾನಸಿಕ ಸ್ತರ**ದಿಂದಲೇ – ಅದರಲ್ಲೂ ಇಲ್ಲಿರುವ ವಿಷಯದೊಡನೆ – ಸಂವಾದಗೊಂಡಿದ್ದೇನೆ. ಈ ರೀತಿಯಲ್ಲಿಯೇ ಇರುವ ಸಂವಾದ–ಸ್ಪರ್ಶವನ್ನು (ಟಚ್) – ಅದರಲ್ಲೂ ಭಾರತೀಯ ವ್ಯವಸ್ಥೆಯಲ್ಲಿ ಇರುವ **ಬೌದ್ಧಿಕ–ಪೃಥಕ್–ಸ್ವರೂಪ**[intellectual remoteness]ದಲ್ಲಿಯೇ, ನಾನು ಈ ಕಾಲಗಳಲ್ಲಿ(ಸಮಯದಲ್ಲಿ) ಸಂಪರ್ಕದಲ್ಲಿ ಇಟ್ಟುಕೊಳ್ಳಲು ನಾನು ಸಮರ್ಥನಾಗಿದ್ದೇನೆ, ಅದರಲ್ಲೂ ಸಮಸಾಮಯಿಕ ಖಂಡಾಂತರದ ಸ್ತರದಲ್ಲಿ – ಅದರಲ್ಲೂ ಸಮಸಾಮಯಿಕ ಆಂಗ್ಲ ಸಾಹಿತ್ಯಕ್ಕಿಂತ.

ಅದರಲ್ಲೂ ಕೊನೆಯ – ಸಮಸಾಮಯಿಕ ಆಂಗ್ಲ ಸಾಹಿತ್ಯದಿಂದಾಗಿ ಎಲ್ಲ **ಪ್ರಾಣಿಕ–ಸಂಬಂಧಗಳೂ ಸಹಿತ ನನ್ನ ಇಂಗ್ಲಂಡ ಸಂಪರ್ಕವು ಕಳೆದ ಕಾಲು–ಶತಮಾನದ (ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ) ಅಂತಿಮ ಬಿಂದುವಿಗೆ ತಲುಪಿವೆ. ಸ್ಥಗಿವಾಗುವ ಹಂತವನ್ನು ತಲುಪಿವೆ. ಇಲ್ಲಿ ಕೊನೆಯ ಘಟನೆ – ದಿ ಡಿಸ್ಕವರಿ ಆಫ್ ಮೆರಿಡಿಥ್" ಓರ್ವ ಕವಿಯಾಗಿ, ಅವನು ತನ್ನ 'ಮಾಡರ್ನ ಲೌವ್"ದಲ್ಲಿ ರೂಪಿಸಿರುವ ಆ ಘಟನೆಗಳೊಂದಿಗೇ, ಮತ್ತು ಹೇಡ್ಸದಲ್ಲಿ ಕ್ರಿಸ್ತನ** [the perusal of Christ in Hades] **ಅವಲೋಕನ – ಅದೂ ಈ ಕೃತಿ ಪ್ರಕಾಶನ ಗೊಳ್ಳುವ ಪೂರ್ವದಲ್ಲಿ – ನಂತರದ್ದು ಎಂದಿಗೂ ಮರೆಯಲಾಗದ ಹಾಗಿರುವ ದಿನದ್ದಾಗಿದೆ.**

---

**ಟಿಪ್ಪಣಿ1:**

ಆಧ್ಯಾತ್ಮಿಕ ಅಭಿವ್ಯಕ್ತಿಯು ಭಾರತೀಯ ವ್ಯವಸ್ಥೆಯಲ್ಲಿ ನಿಸರ್ಗದತ್ತವಾಗಿಯೇ ರೂಪುಗೊಂಡಿರುವ ಅಸ್ಮಿತೆಯಾಗಿದೆ. ಆದರೆ ಆಡಳಿತಾತ್ಮಕವಾದ ಪಲ್ಲಟಗಳು, ತಮ್ಮ ಸತ್ತೆಯನ್ನೇ ಚಿರಂತನವಾಗಿರಿಸಿಕೊಳ್ಳಲು, ನಿಸರ್ಗದತ್ತವಾದ ಜ್ಞಾನವನ್ನು ಅದುಮಲು ಯತ್ನಿಸುತ್ತವೆ. ಇಂತಹ ವೈಚಾರಿಕ ವಾತಾವರಣದಲ್ಲಿ ಒಂದೆರಡು ಪೀಳಿಗೆಗಳನ್ನು ರೂಪಿಸಕೊಂಡು ಬಿಟ್ಟರೆ, ಇದು ಸುಲಭವೆಂದುಕೊಂಡು ಶಿಕ್ಷಣದ ಮೂಲಕವೇ ಅದನ್ನು ಅನುಷ್ಠಾನಗೊಳಿಸಿದ್ದು ಎಲ್ಲರಿಗೂ ವಿದಿತವಿದೆ. ಇದೇ ಚಿಂತನದಲ್ಲಿಯೇ ಉನ್ನತ ಅಧ್ಯಯನದ ಕ್ರಮಾಂಕಗಳೂ ಸಾಗಿದ್ದರಿಂದ, ಭಾರತೀಯ ಅಸ್ಮಿತೆಯ ಅಭಿವ್ಯಕ್ತಿಗಳು ಕ್ರಮೇಣ ಜನಮಾನಸದಿಂದ ದೂರವಾಗುತ್ತ ಬಂದವು. ಕ್ರಮೇಣ ಅದರ ಬಗೆಗೆ ಮಾತನಾಡುವದೇ ಒಂದು ಭ್ರಮೆ ಎನ್ನುವ ಹಂತದವರೆಗೂ ವೈಚಾರಿಕ ಲಹರಿಗಳನ್ನು ಬಡಿದೆಬ್ಬಿಸಲಾಯಿತು. ಆದರೆ ಶ್ರೀ ಅರವಿಂದರು ಇದರಿಂದಾಗುವ ವಿಚಲನೆಯನ್ನು ಗುರುತಿಸಿ, ಭವಿಷ್ಯದಲ್ಲಿ ಒಂದು ಸೂಕ್ತ ಮಾರ್ಗ ನಿರ್ಮಾಣಕ್ಕಾಗಿಯೇ ತಮ್ಮ ಅಭಿವ್ಯಕ್ತಿಗಳನ್ನು 'ಭವಿಷ್ಯ ಕಾವ್ಯ'ದಲ್ಲಿ ರೂಪಿಸಿದ್ದಾರೆ. ಈ ಗ್ರಂಥದ ಮೊದಲ ಅನುವಾದ (ಡಾ॥ ಗೌರೀಶ ಕಾಯ್ಕಿಣಿ, ಗೋಕರ್ಣ)ಕ್ಕೆ ಶ್ರೀ **ಮಂಗೇಶ ನಾಡಕರ್ಣಿಯವರು ಬರೆದ 'ಮುನ್ನುಡಿ'**ಯನ್ನು ಇಲ್ಲಿ **"ಭವಿಷ್ಯ ಕಾವ್ಯದ"** ಅಧ್ಯಯನದ ಪೂರ್ವದಲ್ಲಿ ಗಮನಿಸುವದು ಸಮಂಜಸವೆಂದು ಇಲ್ಲಿ ಆಯ್ದ ಭಾಗಗಳನ್ನು ಟಿಪ್ಪಣಿಯ ಸ್ವರೂಪದಲ್ಲಿ ಕೊಡಲಾಗಿದೆ. ಇದು ಶ್ರೀ ಅರವಿಂದರ ಅಭಿವ್ಯಕ್ತಿಗಳಲ್ಲಿ, ಅವರ ಅಪೂರ್ವ ಭಾಷಾಭಿವ್ಯಕ್ತಿಯ ಕುರಿತು, ಮಂತ್ರಸದೃಶವಾಗಿರುವ ಮಾತು ಹೇಗೆ ಉದಿತಗೊಳ್ಳುತ್ತದೆ ಎನ್ನುವದರ ವಿವರಗಳನ್ನು ಇಲ್ಲಿ ಕಾಣಬಹುದು. ಅದೇ ರೀತಿಯಲ್ಲಿ, ಶ್ರೀ ಅರವಿಂದರ ಕುರಿತು ಹಿರಿಯರು ಬರೆದಿರುವ ಹಲವಾರು ಪುಸ್ತಕಗಳ ಬಗೆಗೂ ಸಹಿತ ಇಲ್ಲಿ ವಿವರಗಳನ್ನು ಕಾಣಬಹುದು;

ಭಾರತೀಯ ಭಾಷೆಯೊಂದರಲ್ಲಿ ಶ್ರೀ ಅರವಿಂದರ ಯಾವ ಕೃತಿಯೇ ಭಾಷಾಂತರಿತವಾಗಲಿ, ಅದೊಂದು ಮಹತ್ವದ, ಅಪೂರ್ವ ಘಟನೆಯಾಗಿ ಬಿಡುತ್ತದೆ. ಯಾಕೆಂದರೆ, ಪ್ರಜ್ಞೆಯ ಜಗತ್ತಿನಲ್ಲಿ ಶ್ರೀ ಅರವಿಂದರೆಂದರೆ ನವಶಕ್ತಿಯೊಂದರ ಆವಿರ್ಭಾವ. ಶ್ರೀ ಅರವಿಂದರು ನಮ್ಮ ವೈದಿಕ ಪಿತೃಪಿತಾಮಹರು ಈ ಭೂಮಿಯ ಮೇಲೆ ಸಾಕ್ಷಾತ್ಕರಿಸಿಕೊಳ್ಳಲೆತ್ತಿಸಿದ

ಋಜುಸತ್ಯಪ್ರಜ್ಞೆಯ ಹರಿಕಾರ, ಉದ್ಘೋಷಕರು; ಅಷ್ಟೇ ಅಲ್ಲ ಆ ಪ್ರಜ್ಞೆಯ ಸ್ಪಷ್ಟ ಸ್ವಯಂವ್ಯಕ್ತ ಮೂರ್ತಿಯೂ ಆಗಿದ್ದಾರೆ. ಅವರ ಪ್ರತಿಯೊಂದು ಕೃತಿಯೂ ನವಪ್ರಜ್ಞಾಶಕ್ತಿಯ, ಸೃಜನಾತ್ಮಕ, ನವೀನ ವಿಚಾರಗಳ ಆಗರವೂ ಆಗಿದೆ.

ದಿ ಫ್ಯೂಚರ್ ಪೋಯಿಟ್ರಿಯು ಡಾ॥ ಜೇಮ್ಸ್ ಎಚ್. ಕರುನ್ನರ "ನ್ಯೂ ವೇಜ್ ಇನ್ ಇಂಗ್ಲಿಶ್ ಲಿಟರೇಚರ್" ಎಂಬ ಪುಸ್ತಕದ ವಿಮರ್ಶಾತ್ಮಕ ಸಮೀಕ್ಷೆಯೆಂದು ಮೊದಲು ಶುರುವಾಗಿ, ಮುಂದೆ ಮೂವತ್ತೆರಡು ಅಧ್ಯಾಯಗಳ ಬೃಹತ್ ಸರಣಿಯಾಗಿ ಬೆಳೆಯಿತು. ಈ ವಿಚಾರ ಪ್ರಚೋದಕ ಲೇಖನಗಳು ಆರ್ಯ ಪ್ರತಿಕೆಯಲ್ಲಿ ಸುಮಾರು 100 ವರ್ಷಗಳ ಹಿಂದೆ – ಅಂದರೆ, ಡಿಸೆಂಬರ್ 1918ರಿಂದ ಆಗಸ್ಟ್ 1920ರ ವರೆಗೆ – ಪ್ರಕಟವಾದವು. ಶ್ರೀ ಅರವಿಂದರು ದೇಹತ್ಯಾಗ ಮಾಡಿ ಮೂರು ವರ್ಷಗಳಾದ ಮೇಲೆ, 1920ರಲ್ಲಿ ಇವು ಪುಸ್ತಕ ರೂಪದಲ್ಲಿ ಪ್ರಕಟವಾದವು. ಇಂಗ್ಲಿಶ್‌ನ ಮೆಟಫಿಜಿಕಲ್ ಕವಿಗಳನ್ನೊಳಗೊಂಡಂತೆ ಇನ್ನೂ ಕೆಲವು ಅಧ್ಯಾಯಗಳನ್ನು ಸೇರಿಸಿ, ಲೇಖನಗಳ ಪುನಃ ಪರಿಶೀಲನೆಗೈದು, ಅವಕ್ಕೊಂದು ಗ್ರಂಥರೂಪ ಕೊಡಬೇಕೆಂದು ಅವರ ಅಪೇಕ್ಷೆಯಿತ್ತು, ಆದರೆ ಅದು ನೆರವೇರಲಿಲ್ಲ.

ತನಗರಿವಲ್ಲದಂತೆಯೇ ಉತ್ಕ್ರಾಂತಿಯ ಉತ್ಕಟತೆಯಲ್ಲಿ ಸಿಕ್ಕುಬಿದ್ದು ಪರಿತಪಿಸುತ್ತಿರುವ ಮನುಕುಲವನ್ನು ಉದ್ಧರಿಸಲು, ಮಾರ್ಗದರ್ಶಿಸಲು ಬಂದವರೆಂದು ಶ್ರೀ ಅರವಿಂದರನ್ನು ಇಂದಿನ ಜಗತ್ತಿನ ವಿಚಕ್ಷಕ ಬುದ್ಧಿಜೀವಿಗಳು ಗುರುತಿಸಿದ್ದಾರೆ. ಈಗ ಚಾಲ್ತಿಯಲ್ಲಿರುವ ವಿಚಾರಧಾರೆಗಳಲ್ಲಿ ದೇವರು ಅಥವಾ ಆತ್ಮಕ್ಕೆ ಸ್ಥಾನವಿಲ್ಲ; ಮನುಷ್ಯ ಜೀವನಕ್ಕೆ ವಿಶೇಷ ಅರ್ಥ ಅಥವಾ ಗುರಿಯೆಂಬುದಿಲ್ಲ, ಇದು ಆಧುನಿಕ ವಿಚಾರ ಮಾದರಿಗಳು ನಮಗಿತ್ತ ಕಾಣಿಕೆ. ಇಂಥ ಅರ್ಥಶೂನ್ಯತೆಯ ಬಂಜರಿನಿಂದ ಬಿಡುಗಡೆ ಮಾಡಬಲ್ಲವರೆಂದರೆ ಶ್ರೀ ಅರವಿಂದರೇ. ದೇವರು, ಆತ್ಮಗಳ ಸ್ವೀಕಾರವನ್ನು ಸಾಧ್ಯವಾಗಿಸಿಯೂ, ನಿಜದ ಬದುಕನ್ನು ಅಲ್ಲಗೆಳೆಯಲು ಪ್ರೇರೇಪಿಸುವ ಅನೇಕ ತತ್ವಧಾರೆಗಳು ನಮ್ಮಲ್ಲಿ ಅನೇಕ ಇವೆ. ಇಂಥಲ್ಲಿ "ದೇವರು" ಅಥವಾ "ಆತ್ಮ"ದಂಥ ಪರಿಕಲ್ಪನೆಗಳು ವೈಚಾರಿಕ ಮಾದಕದ್ರವ್ಯಗಳಾಗಬಲ್ಲವು. "ಈ ಬದುಕು ಅರ್ಥಶೂನ್ಯ" ಎಂದು ಸಾರುತ್ತವೆಯೆಂದು ಭಾರತದ ಕೆಲವು ಪ್ರಮುಖ ವೈಚಾರಿಕ ಒಲವುಗಳ ಬಗ್ಗೆ ಕೇಳಿಬರುವ ದೂರು ಸರ್ವವಿದಿತ. ಈ ಜಗತ್ತು ಬರಿ ಮಾಯೆಯೇ ಆಗಿದ್ದರೆ,

ನಮ್ಮ ಇಲ್ಲಿಯ ಎಲ್ಲ ಕ್ರಿಯೆಗಳು ಕೊಟ್ಟಕೊನೆಗೆ "ಆ ಕೇವಲ"ದೊಂದಿಗೆ ಐಕ್ಯವಾಗಲು ನಡೆಸಿದ ತಯಾರಿ ಅಷ್ಟೇ ಏನು? ಈ ತತ್ತ್ವಧಾರೆಗಳ ಪ್ರಕಾರ, ಜೀವನದ ಪರಮ, ನಿಷ್ಠ, ಉದ್ದೇಶವೆಂದರೆ ಇಲ್ಲಿಂದ ಫರಾರಿಯಾಗುವುದು. ಬದುಕನ್ನು ಅಲ್ಲಗಳೆಯುವ ಇಂಥ ತತ್ತ್ವಧಾರೆಗಳನ್ನು ಶ್ರೀ ಅರವಿಂದರು ಸಹಸಾ ನಿರಾಕರಿಸುತ್ತಾರೆ. "A divine perfection is our aim – ದೈವೀ ಪೂರ್ಣತ್ವವೇ ಮಾನವ ಜೀವನದ ಗುರಿ" ಎಂದು ಅವರು ಘಂಟಾಘೋಷವಾಗಿ ಸಾರುತ್ತಾರೆ. ತಮ್ಮ ಈ ಜಗತ್ ಸುಸತ್ವವಾದದಿಂದಾಗಿ ಅವರು ಅನೇಕ ಸಾಂಪ್ರದಾಯಿಕರ ವಿರೋಧವನ್ನೂ ಕಟ್ಟಿಕೊಂಡರು. ಒಂದೆಡೆ ಅವರು ಹೇಳಿದಂತೆ "Heaven we have always possessed but not the earth. And it is the aim of our yoga to make, in the language of Veda, heaven and earth equal and one," ಸ್ವರ್ಗವನ್ನು ನಾವು ಯಾವಾಗಲೋ ಪಡೆದಿದ್ದೇವೆ, ಆದರೆ ಈ ಭೂಮಿಯನ್ನಲ್ಲ. ನಮ್ಮ ಯೋಗದ ಉದ್ದೇಶ – ವೇದಗಳ ಪರಿಭಾಷೆಯಲ್ಲಿಯೇ ಹೇಳುವದಾದರೆ – ಸ್ವರ್ಗ ಮತ್ತು ಭೂಮಿಗಳ ಸಮಾನೈಕ್ಯ. ಶ್ರೀ ಅರವಿಂದರ ಲಕ್ಷ್ಯವು ನೆಲದ ಮೇಲಿನ ನಮ್ಮ ಬದುಕನ್ನು ಫಲಸಮೃದ್ಧವಾಗಿಸುವುದರ ಕಡೆಗಿದೆ, ಪಲಾಯನದತ್ತ ಅಲ್ಲ. ಇಂಥ ಸಿದ್ಧಿಯು ವ್ಯಷ್ಟಿಗಷ್ಟೇ ಅಲ್ಲ ಸಮಷ್ಟಿಗೂ ಸಾಧ್ಯ ಎಂದು ಅವರು ಸಂಕಲ್ಪಿಸಿದ್ದಾರೆ. ಛೇ! ಇದು ಅಸಾಧ್ಯ; ಇದೊಂದು ಕೇವಲ ಕಾಲ್ಪನಿಕ, ಆದರ್ಶ ಸಾಮ್ರಾಜ್ಯ! ಎನ್ನುವಿರಾ? ಆದರೆ, ಒಂದು ಮಾತು: ಶ್ರೀ ಅರವಿಂದರು ಹೇಳಿದಂತೆ, "ಕ್ರಿಯಾಂತೇಶ್ರದ್ಧಾ"! ನಮನಿಮಗೆ ಮೇಲುನೋಟಕ್ಕೆ ಎದ್ದು ಕಾಣಿಸದಿದ್ದರೂ, ಅವರು ಸಂಕಲ್ಪಿಸಿದ ಕ್ರಿಯೆ ಒಳಗೊಳಗೆ ನಡೆದೇ ಇದೆ. ಹಳೆಯ ಜಗತ್ತು ಕುಸಿಯುತ್ತಲಿದೆ, ಹೊಸದು ಹುಟ್ಟುತ್ತಲಿದೆ.

ಹೀಗೆಂದ ಮಾತ್ರಕ್ಕೆ ಶ್ರೀ ಅರವಿಂದರು ಹೊಸದೊಂದು ತತ್ತ್ವಧಾರೆಯನ್ನು ಕೊಟ್ಟವರೆಂದೂ ಈ ಶ್ರೇಷ್ಠ, ಸುಂದರ ಸಾಹಿತ್ಯವನ್ನು ರಚಿಸಿದವರೆಂದೋ, ಮಹಾನ್ ಯೋಗಿಗಳಾಗಿದ್ದವರೆಂದೋ ಇಷ್ಟೇ ತಿಳಿಯಬಾರದು. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಶ್ರೀ ಅರವಿಂದರೆಂದರೆ ವಿಕಲ್ಪವನ್ನು ಸಾಧ್ಯವಾಗಿಸುವ ಒಂದು ಶಕ್ತಿ: ಮನುಕುಲದ ಉತ್ಕ್ರಾಂತಿ ಯಾತ್ರೆಯ ಧುರೀಣ; ಮಹತೋಮಹೀಯಾನ್ ಪ್ರಜ್ಞೆಯಾದ ಅತಿಮಾನಸಿಕ ಪ್ರಜ್ಞೆಯನ್ನು ಶೋಧಿಸಿದ, ಪಿಪಾಸುಗಳೆಲ್ಲರಿಗೂ ಅದು

ಸಾಧ್ಯವೆಂದು ತೋರಿಸಿದ, ಅತೀಂದ್ರಿಯದ ವಿಜ್ಞಾನಿ, ನವಮಾನವತೆಯ ಪ್ರವಾದಿ. ಇದೆಲ್ಲವನ್ನೂ ಮೀರಿಸುವಂತೆ, ಪರಿಪೂರ್ಣ ಪ್ರಜ್ಞೆಯ ವಿಶ್ವವನ್ನು ಈ ನೆಲದ ಮೇಲೆ ಸಾಧ್ಯವಾಗಿಸುವಲ್ಲಿ ಮೊದಲ ಆರಂಭ ಮಾಡಿದ ಕ್ರಾಂತಿಕಾರಿಯೂ ಹೌದು. ಪೃಥ್ವಿಯ ಮೇಲೆ ಪ್ರತ್ಯಕ್ಷೀಭೂತವಾಗಲು ಕಾತರಿಸುತ್ತಿರುವ ನವಭವಿಷ್ಯದ ಅವತಾರವೇ ಅವರು ಎಂದು ನಿಸ್ಸಂಶಯವಾಗಿ ಹೇಳಬಹುದು.

ಅಸ್ತಿತ್ವದ ಈ ಮಹಾನ್ ದರ್ಶನವನ್ನು ತಮ್ಮ ಸಂಗಾತಿಗಳಿಗೆ ತಿಳಿಸಿ ಹೇಳಲು ಅವರು ಅವಿರತ ಶ್ರಮಿಸಿದರು. ಮಾನವ ಇತಿಹಾಸದಲ್ಲಿ ಬಹುಶಃ ಯಾವ ಲೇಖಕನೂ ಇಷ್ಟು ವಿಚಾರ ಶ್ರೀಮಂತನಾಗಿರಲಿಲ್ಲ: ಯಾವನೂ ಇಂಥ ನಿಗೂಢ, ಅಪೂರ್ವ ವಿಚಾರಗಳನ್ನು ಇದುವರೆಗೆ ಇಷ್ಟು ಸ್ಪಷ್ಟವಾಗಿ ನಿರೂಪಿಸಿರಲಿಲ್ಲ. ಶ್ರೀ ವಿನಾಯಕ ಕೃಷ್ಣ ಗೋಕಾಕರು ಬಣ್ಣಿಸಿದಂತೆ, ಶ್ರೀ ಅರವಿಂದರು "ಆಧುನಿಕ ವ್ಯಾಸ"ರು. ಅವರ 35 ಉದ್ಗ್ರಂಥಗಳ ಎದುರು ನಿಂತು ಅವುಗಳಲ್ಲಿ ಕಂಡುಬರುವ ವಿಷಯ ವಿಸ್ತಾರ, ವಿಷಯಗಳ ಬಗೆಗಿನ ಅವರ ಅಧಿಕಾರವಾಣಿ, ಗದ್ಯ, ಕಾವ್ಯ ಮಾಧ್ಯಮಗಳಲ್ಲಿ ಅವರಿಗಿದ್ದ ಪ್ರಭುತ್ವ ಇವನ್ನೆಲ್ಲ ನೆನೆದು, ನತಮಸ್ತಕರಾಗಿ ನಿಲ್ಲುವುದೇ ಶ್ರೀ ಅರವಿಂದರಿಗೆ ನಾವು ಸಲ್ಲಿಸಬಹುದಾದ ಪೂಜೆ. ವಸ್ತುಸ್ಥಿತಿ ಹೀಗಿದ್ದಾಗ, ಶ್ರೀ ಅರವಿಂದರ ಸಾಹಿತ್ಯವನ್ನು ಓದಿ, ಅರಗಿಸಿಕೊಳ್ಳುವುದು ಅಸಾಧ್ಯದ ಕೆಲಸ ಎಂದು ಕೆಲವರು ತಿಳಿದುಕೊಂಡಿದ್ದರೆ ಆಶ್ಚರ್ಯವೇನಿಲ್ಲ.

ಶ್ರೀ ಅರವಿಂದರ "ದ ಲೈಫ್ ಡಿವೈನ್ (ದಿವ್ಯ ಜೀವನ)", "ದ ಹ್ಯೂಮನ್ ಸಾಯ್ಕಲ್ (ಮಾನುಷ–ಚಕ್ರ)", "ದಿ ಆಯ್ ಡಿಯಲ್ ಅಫ್ ಹ್ಯೂಮನ್ ಯೂನಿಟಿ (ಮಾನವೀಯ ಐಕ್ಯತೆಯ ಚಿಂತನ)", "ದ ಸಿಂಥೆಸಿಸ್ ಅಫ್ ಯೋಗ (ಯೋಗ ಸಮನ್ವಯ)", ಸಾವಿತ್ರಿ, "ದಿ ಎಸ್ಸೇಸ್ ಆನ್ ದ ಗೀತ (ಭಗವದ್ಗೀತಾ ಪ್ರಬಂಧಗಳು)", "ದ ಫೌಂಡೇಶನ್ ಅಫ್ ಇಂಡಿಯನ್ ಕಲ್ಚರ್ (ಭಾರತೀಯ ಸಂಸ್ಕೃತಿಯ ಮೂಲಾಧಾರ)", "ಆನ್ ದ ವೇದ (ವೇದ ವಿಚಾರ)" ಅಥವಾ "ದ ಫ್ಯೂಚರ್ ಪೋಯಿಟ್ರ (ಭವಿಷ್ಯ ಕಾವ್ಯ)" ಮತ್ತು ಸಾವಿತ್ರಿಗಳಂತಹ ಮೇರು ಕೃತಿಸೌಧಗಳ ದ್ವಾರ ಪ್ರವೇಶಕ್ಕೆ ಅರ್ಹರಾಗಬೇಕಾದರೆ ತರ್ಕದಲ್ಲಿ ಪ್ರೌಢಿಮೆ, ತಾತ್ವಿಕ ಜಿಜ್ಞಾಸೆ ಇಷ್ಟೇ ಸಾಲದು; ಸೂಕ್ಷ್ಮಗ್ರಾಹೀ ಆಧ್ಯಾತ್ಮ ಸಂವೇದನೆಯೂ ಅವಶ್ಯ. ನಾ ನೀ ಎಂಬ ಎಷ್ಟೋ ಜನ ಬುದ್ಧಿವಂತರು, ಪಂಡಿತರು ಈ ಕೃತಿಗಳಲ್ಲಿ ಇವರಿಗೆ ಕಾಣಿಸಿದ್ದೇನು? "ತಲೆ ತಿರುಗಿಸುವಂತಹ ಶಬ್ದಾಡಂಬರ, ಮತ್ತು ಅರ್ಥದ

ಅಸ್ಪಷ್ಟತೆ." ಇಂಥ ಜನರಿಗೆ ಶ್ರೀ ಅರವಿಂದರೆಂದರೆ ಕಣ್ಣಿನಳವಿಗೆ ಸಿಗದ ವಿಸ್ತಾರ, ಕೈಗೆಟುಕುದ ಶ್ರದ್ಧೆ. ಶ್ರೀ ಅರವಿಂದರು ತಮ್ಮ ಓದುಗರಿಂದ ಬಹಳಷ್ಟು ಅಪೇಕ್ಷಿಸುತ್ತಾರೆ ಎಂಬುದೇನೋ ನಿಜ; ಅನೇಕರಲ್ಲಿ ಅವರ ಬೇಡಿಕೆಗೆ ತಕ್ಕ ಅರ್ಹತೆಯಾಗಲಿ, ಉತ್ಸುಕತೆಯಾಗಲಿ ಸಾಮಾನ್ಯವಾಗಿ ಇರುವುದಿಲ್ಲ ಎಂದೇ ಹೇಳಬೇಕು. ಹಾಗಾದರೆ ಶ್ರೀ ಅರವಿಂದರು ಓದುಗರಿಂದ ಏನನ್ನು ಅಪೇಕ್ಷಿಸುತ್ತಾರೆ? ಆಧ್ಯಾತ್ಮಿಕವಾಗಿ ತೆರೆದ ಮನಸ್ಸು ಮತ್ತು ಬುದ್ಧಿ, ಇಷ್ಟೆ ಈ ಅಪೇಕ್ಷೆಗನುಗುಣವಾಗಿ ಸ್ಪಂದಿಸಿದವರಿಗೆ ಶ್ರೀ ಅರವಿಂದರು ಕೊಡಮಾಡುವುದು ಅಗಾಧ! ಅಮೂಲ್ಯ! ಅವರನ್ನು ಓದಬಯಸುವನು ಆ ಓದಿಗೆ ತಕ್ಕ ಆಧ್ಯಾತ್ಮಿಕ ಸಂವೇದನಾಶೀಲತೆಯನ್ನು ತನ್ನ ಜೊತೆಗೆ ಒಂದು ವೇಳೆ ತರದೇ ಇದ್ದರೆ ಅವರು ಅದನ್ನೂ ಅನುಗ್ರಹಿಸಬಲ್ಲರು. ಇಷ್ಟೇ; ಓದುಗನು ಓದಿಗೆ ತಕ್ಕಂತೆ ಸ್ಪಂದಿಸುವುದನ್ನು ಕೂಡ ಕಲಿಯಲು ತಯಾರಾಗಬೇಕು. ಅಸಾಧಾರಣವಾದ ವಿಮರ್ಶಾ ಬುದ್ಧಿಯಿಂದ, ಅಥವಾ ಆತ್ಯಾಧುನಿಕ ತತ್ತ್ವಶಾಸ್ತ್ರಗಳಿಂದ ಆಮದು ಮಾಡಿಕೊಂಡ ಪರಿಮಾಣಗಳಿಂದ ಶ್ರೀ ಅರವಿಂದರ ಬದುಕು, ಬರೆಹಗಳನ್ನು ತೂಗಲೆತ್ತಿಸುವುದು ಮೂರ್ಖತನದ ಪರಮಾವಧಿಯೇ ಸರಿ: ಇನ್ನು ಸಾಮಾನ್ಯ ಪರಿಮಾಣಗಳಿಂದ ಅವರ ಬೆಲೆಗಟ್ಟಲು ಸಾಧ್ಯವೇ? ಇಂಥ ಹುಚ್ಚು ಸಾಹಸ ಮಾಡಿದವರು ಇಲ್ಲವೆಂದಲ್ಲ ಬೇಕಾದಷ್ಟಿದ್ದಾರೆ, ಇಂಥವರ ಪ್ರಕಾರ ಶ್ರೀ ಅರವಿಂದರೆಂದರೆ "ಮುಚ್ಚಿದ ಬಾಗಿಲು; ಅಥವಾ ತೆರೆದರೂ ಪ್ರಯೋಜನವಿಲ್ಲ".

"The greatest intellect of our age and a major force of the life of the spirit" – "ನಮ್ಮ ಕಾಲದ ಅತ್ಯಂತ ಶ್ರೇಷ್ಠ ಬುದ್ಧಿಮತ್ತೆ, ಆಧ್ಯಾತ್ಮ ಜೀವನದ ವರಿಷ್ಠ ಚೇತನ" ಮುಂತಾಗಿ ಶ್ರೀ ಅರವಿಂದರನ್ನು ಡಾ॥ ಎಸ್. ರಾಧಾಕೃಷ್ಣನ್‌ರಂತಹ ವಿಚಕ್ಷಕರೂ ಬಣ್ಣಿಸಿದ್ದಾರೆ. ಅಂದರೂ ಬಹಳಷ್ಟು ಭಾರತೀಯ ಭಾಷೆಗಳಲ್ಲಿ ಶ್ರೀ ಅರವಿಂದರು ಇನ್ನೂ ಏಕೆ ಲಭ್ಯರಾಗಿಲ್ಲ? ಉತ್ತರ ರೂಪವಾಗಿ, ಈ ಪಶ್ನೆಗೆ ಮೇಲೆ ಹೇಳಿದ ಕಾರಣದತ್ತ ಕೈಮಾಡಿ ತೋರಿಸಬೇಕಾಗುತ್ತದೆ. ಭಾರತದ ಬಹಳಷ್ಟು ಪಂಡಿತಮಾನ್ಯರು ಶ್ರೀ ಅರವಿಂದರನ್ನು ಸ್ವಸಂರಕ್ಷಣೆಗೋಸುಗ ದೂರ ಇಟ್ಟಿರುವುದಕ್ಕೆ ಇದೇ ಕಾರಣವಿರಬೇಕು. ಭಾರತೀಯ ಬುದ್ಧಿಜೀವಿಗಳಿಗೆ ಶ್ರೀ ಅರವಿಂದರ ಕೃತಿಗಳ ಬಗ್ಗೆ

ತೋರಿಸುವ ನಿರುತ್ಸಾಹಕ್ಕೆ ಎರಡನೆಯ ಕಾರಣವೆಂದರೆ ಇದು: ಸ್ವದೇಶೀ ಮೂಲದ ವಿಚಾರಧಾರೆಗಳಿಂದ, ಸಂಪ್ರದಾಯಗಳಿಂದ ಸ್ಫೂರ್ತಿಪಡೆದು ರಚಿಸಲ್ಪಟ್ಟ ಕೃತಿಗಳ ಬಗ್ಗೆ ಈ ಬುದ್ಧಿಜೀವಿಗಳಿಗಿರುವ ಸಂಶಯ ಮತ್ತು ಅಪನಂಬಿಕೆ. ಶ್ರೀ ಅರವಿಂದರು ತಮ್ಮ 19ನೇ ವಯಸ್ಸಿಗೇನೇ ಪಾಶ್ಚಾತ್ಯ ವಿಚಾರಧಾರೆಗಳ ಮೇಲೆ ಪ್ರಭುತ್ವ ಪಡೆದಿದ್ದರು; ಅಷ್ಟೇ ಅಲ್ಲ, ಆ ವಿಚಾರಧಾರೆಯ ಕುಂದುಕೊರತೆಗಳನ್ನು ಸಂಪೂರ್ಣವಾಗಿ ಕಂಡುಕೊಂಡಿದ್ದರು ಕೂಡ. ಭಾರತಕ್ಕೆ ಮರಳಿದ ಮೇಲೆ ಮಾನವ ಜೀವನವನ್ನು ಮತ್ತು ಜೀವಿಯ ಸ್ವಯಂಪ್ರಜ್ಞೆಯ ವಿವಿಧ ಪಾತಳಿಗಳನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಪಾಶ್ಚಾತ್ಯ ಸಂಪ್ರದಾಯಗಳನ್ನು ಹದಿಹಲವು ರೀತಿಯಿಂದ ಮೀರಿಸಿದ ಇನ್ನೊಂದು ಶ್ರೀಮಂತ ಸಂಪ್ರದಾಯವು ಇಲ್ಲಿಯೇ ಇರುವುದನ್ನು ಅವರು ಮನಗಂಡರು. ಕೇವಲ ಜಿಜ್ಞಾಸಾ–ತಂತ್ರ ಮಾತ್ರದಿಂದ ಜಗತ್ತನ್ನು ಅರ್ಥ ಮಾಡಿಕೊಳ್ಳುವ ರೀತಿಯು ಅಂಶತಃ ಪರಿಣಾಮಕಾರಿಯಾಗಬಹುದು; ಇದಲ್ಲದೆ, ಜಿಜ್ಞಾಸಾ ಪ್ರಕ್ರಿಯೆಯು ಆತ್ಮರತಿಯಲ್ಲಿ ಅವಸಾನಗೊಳ್ಳಲೂ ಬಹುದೆಂದು ಅವರಿಗೆ ಅನಿಸಿತು. ಯೋಗದತ್ತ ತಿರುಗಿದರು; ಯಾವುದು ಸಾಧ್ಯವೆಂದು ವೇದಗಳು ಸನ್ನೆ ಮಾಡಿ, ತೋರಿಸಿದ್ದವೋ, ಅಂತಹ ಪ್ರಜ್ಞೆಯ ಅಂಥ ಉಚ್ಚತಮ ಪಾತಳಿಯನ್ನು ಅವರು ಆತ್ಮಸಾತ್ ಮಾಡಿಕೊಂಡರು, ಸ್ವ–ನಿವೇಶಗೊಳಿಸಿಕೊಂಡರು. ಕೇವಲ ಬಲವತ್, ಮಹಜ್ಜಿಜ್ಞಾಸೆಯಿಂದ ಸಾಧ್ಯವಾಗುವುದಕ್ಕಿಂತಲೂ ವಿಸ್ತಾರವಾದ, ಸ್ವಯಂಸಂಪೂರ್ಣವಾದ, ಸಂತುಲಿತ ಪ್ರಜ್ಞೆಯನ್ನು ಅವರು ಯೋಗದ ಬಲದಿಂದ ತಮ್ಮೊಳಗೇ ಕಂಡುಕೊಂಡರು. ಕೇವಲ ಬೌದ್ಧಿಕವಾಗಿ ಗ್ರಹಿಸಿಕೊಳ್ಳಬಲ್ಲ ಜಿಜ್ಞಾಸೆಯನ್ನೂ ಮೀರಿದ, ಅಷ್ಟೇ ಅಲ್ಲ, ಅದನ್ನೂ ಒಳಗೊಂಡ, ಹೊಸ ತರಹದ ದೈವಿಕತೆಯನ್ನು ಶ್ರೀ ಅರವಿಂದರು ಪ್ರತಿ 'ನೀಧಿ' ಕರಿಸಿದರು. ಇದೆಲ್ಲ ಯಾಕೆ ಹೇಳಬೇಕಾಯಿತೆಂದರೆ, ಇಂದಿನ ಭಾರತೀಯ ಮನಸ್ಸು ಬಹಳಷ್ಟು ಮಟ್ಟಿಗೆ ಯೂರೋಪೀಕೃತವಾಗಿದೆ; ಅದು ಈ ಯೂರೋಪೀ ವೈಚಾರಿಕ ಶೃಂಖಲೆಯಿಂದ ಹೊರಬರದ ತನಕ ಶ್ರೀ ಅರವಿಂದರ ಆಧ್ಯಾತ್ಮಿಕತೆಯ ಬಗ್ಗೆ ಆಸಹನೆ ಅಥವಾ ಅನವಶ್ಯಕ ದ್ವೇಷ ಸಾಧಿಸುತ್ತಿರುವುದು ಸಹಜವೇ. ಮೋಜೆಂದರೆ, ಸ್ವತಃ ಪಾಶ್ಚಿಮಾತ್ಯರಲ್ಲೇ ಅನೇಕರು ಶ್ರೀ ಅರವಿಂದ–ವಿಚಾರಧಾರೆಯನ್ನು – ನಿಧಾನವಾಗಿಯಾದರೂ ಅಡ್ಡಿಯಿಲ್ಲ, ನಿಸ್ಸಂಶಯವಾಗಿ–

ಒಪ್ಪಿಕೊಳ್ಳತೊಡಗಿದ್ದಾರೆ. ಶ್ರೀ ಅರವಿಂದರೆಂದರೆ ದೇಶ–ಕಾಲಾತೀತ ಸತ್ಯವೊಂದರ ಆವಿರ್ಭಾವ, ಒಂದು ಕೌಲು ಅಥವಾ ಪಂಥವಲ್ಲ, ಆದ್ದರಿಂದಲೇ, ಕೌಲುದೇವರುಗಳು ಅಥವಾ ಪಂಥೀಯವಾದಿಗಳು ಸುಲಭವಾಗಿ ಗಳಿಸುವಂಥ ಜನಪ್ರಿಯತೆಯು ಶ್ರೀ ಅರವಿಂದ – ವಿಚಾರಧಾರೆಗೆ ಸಾಧ್ಯವಾಗಿಲ್ಲ.

ಇದೇ ಕಾರಣದಿಂದಾಗಿ ಇರಬೇಕು ಕನ್ನಡ ಸಾಹಿತ್ಯದ ಮುಖ್ಯ ಸ್ರೋತಾಧಿಷ್ಠಿತರು ಕನ್ನಡದಲ್ಲಿ ಶ್ರೀ ಅರವಿಂದ–ಮಾರ್ಗದ ಮುಂಚೂಣಿಯಲ್ಲಿದ್ದ ಕೆಲವರನ್ನು – ಸ್ಪಷ್ಟ ವೈರ ಭಾವದಿಂದ ಅಲ್ಲದಿದ್ದರೂ– ಉಪೇಕ್ಷೆಯಿಂದ, ಮುಜುಗರದಿಂದ ಕಾಣುತ್ತಿದ್ದುದು. ಬೇಂದ್ರೆ, ಮಧುರಚೆನ್ನ, ಗೋಕಾಕ, ಕೆ.ವಿ. ಪುಟ್ಟಪ್ಪ ಮುಗಳಿ, ನಾರಾಯಣ ಸಂಗಮ್ಮ ಸ.ಸ. ಮಾಳವಾಡ ಮತ್ತಿತರರು ಶ್ರೀ ಅರವಿಂದ–ವಿಚಾರಧಾರೆಯಿಂದ ಪ್ರಭಾವಿತರಾಗಿ, ಪ್ರೇರಣೆ ಪಡೆದು, ಸ್ಫೂರ್ತಿಗೊಂಡು ಸಾಕಷ್ಟು ಕೃಷಿ ಮಾಡಿ, ಗಣನೀಯ ಗಾತ್ರ ಮತ್ತು ಮೌಲ್ಯದ ಸಾಹಿತ್ಯ ರಚಿಸಿದ್ದಾರೆ. ಕನ್ನಡ ಸಾಹಿತ್ಯದ ಮುಖ್ಯಸ್ರೋತದ ಅಧಿಷ್ಠಾತೃಗಳು ಈ ಮಾತನ್ನು ಇನ್ನೂ ಒಪ್ಪಿಕೊಂಡಂತಿಲ್ಲ; ಇಷ್ಟೇ ಅಲ್ಲ, ಧೃತಿಗೆಟ್ಟ ಇಂಥ ಕೆಲವರು ಶ್ರೀ ಅರವಿಂದ–ಪ್ರೇರಿತ ಸಾಹಿತ್ಯವನ್ನು "ಹುಚ್ಚಾಟ" ಎಂದೋ, "ಜಾತ್ಯಾ ಸಾಹಿತಿಗಳ ಆಧ್ಯಾತ್ಮಿಕ ಅತಿರೇಕ" ಎಂದೋ ಕಡೆಗಣಿಸಿಬಿಡುವ ಪ್ರವೃತ್ತಿಯನ್ನೂ ಕೈಕೊಂಡಿದ್ದಾರೆ. ಬೇಂದ್ರೆಯವರ ವರಕವಿತ್ವದ ಬಗ್ಗೆ ಮುಗಿಲುದ್ದ ಮಾತಾಡುವವರೂ "ಹೃದಯಸಮುದ್ರ"ದಂಥ ಅವರ ಕೃತಿಗಳ ಬಗ್ಗೆ ಏನು ಹೇಳಬೇಕೆಂದು ತಿಳಿಯದೆ ತಲೆ ತುರಿಸಿಕೊಳ್ಳುತ್ತಿದ್ದಾರೆ.

ಕನ್ನಡವು ಶ್ರೀ ಅರವಿಂದ–ವಿಚಾರಧಾರೆಗೆ ಮುಕ್ತವಾಗಿ ಮಾರ್ದನಿಗೊಟ್ಟಿದೆ. ಆದರೆ ಇಷ್ಟೇ ಸಾಲದು ಅನಿಸುತ್ತದೆ. ಕನ್ನಡ ಸಾಹಿತ್ಯದ ಘಟಾನುಘಟಿಗಳಾದ ಬೇಂದ್ರೆ, ಪುಟ್ಟಪ್ಪ, ಗೋಕಾಕ ಮುತ್ತು ಮುಗಳಿಯಂಥವರು ಶ್ರೀ ಅರವಿಂದರಿಂದ ಗಾಢವಾಗಿ ಪ್ರಭಾವಿತರಾಗಿದ್ದಾರಷ್ಟೇ ಅಲ್ಲ, ಆ ಪ್ರಭಾವದ ಬಗ್ಗೆ ಬಾಯಿಬಿಟ್ಟು ಮಾತಾಡಿದ್ದಾರೆ ಕೂಡ. ನನ್ನ ವಾದವನ್ನು ಪುಷ್ಟೀಕರಿಸಲು ಇದೊಂದೇ ಮಾತು ಸಾಕಲ್ಲವೇ? ಕನ್ನಡೇತರ ಕೆಲವು ಭಾರತೀಯ ಭಾಷೆಗಳಲ್ಲಿ ಶ್ರೀ ಅರವಿಂದರ ಮತ್ತು ಶ್ರೀಮಾತೆಯವರ ಬಹುತೇಕ ಕೃತಿಗಳು ಭಾಷಾಂತರಗೊಂಡಿವೆ. ಹೀಗೆಂದ ಮಾತ್ರಕ್ಕೆ ಕನ್ನಡದಲ್ಲಿ ಅವರ ಕೃತಿಗಳ ಭಾಷಾಂತರಗಳು ಇಲ್ಲವೆಂದಲ್ಲ. ಕನ್ನಡದಲ್ಲಿ ಸಿಗುವ "ಬಹಳಷ್ಟು ಭಾಷಾಂತರಗಳು ವರಸಾಹಿತಿಗಳಿಂದ ಬಂದವುಗಳು ಎಂದು

ಹೇಳಲು ಹೆಮ್ಮೆಯೆನಿಸುತ್ತದೆ." ಸ್ವತಃ ಬೇಂದ್ರೆಯವರೇ ಶ್ರೀ ಅರವಿಂದರ "ದ ರೋಝ್ ಆಫ್ ಗಾಡ್"ದಂಥ ಭಾವಗೀತೆ ಮತ್ತು ಸಾವಿತ್ರಿಯಿಂದ ಆಯ್ದ ಭಾಗಗಳ ಭಾಷಾಂತರದೊಂದಿಗೆ ಈ ಕೆಲಸ ಶುರುವು ಮಾಡಿದರು. ಆರ್.ಜಿ. ಕುಲಕರ್ಣಿಯ ಜೊತೆಗೂಡಿ ಅವರು ಶ್ರೀ ಅರವಿಂದರ ಗದ್ಯ ಕೃತಿ "ಯೋಗ ಅಂಡ್ ಇಟ್ಸ್ ಆಬ್ಜೆಕ್ಟ್ಸ್" ಅನ್ನು ಕನ್ನಡಿಸಿದರು. ಮಂತ್ರ ಸ್ಪಂದನಾವೇಶಯುತವಾದ ಶ್ರೀ ಅರವಿಂದರ ಗದ್ಯ ಕೃತಿ "ದ ಮದರ್" ಅನ್ನು ನಾರಾಯಣ ಸಂಗಮ ಮತ್ತು ಮುಗಳಿಯವರು ಭಾಷಾಂತರಿಸಿದ್ದಾರೆ, ಗೋಕಾಕ, ಸ.ಸ. ಮಾಳವಾಡ, ಪ್ರಹ್ಲಾದ ನರೇಗಲ್, ವಸಂತ ಕುಲಕರ್ಣಿ, ಎನ್ಕೆ ಮತ್ತು ಇತರರು ಶ್ರೀ ಅರವಿಂದರ ಕೆಲವು ಪತ್ರಗಳನ್ನೂ ಶ್ರೀಮಾತೆಯವರ "ಪ್ರೇಯರ್ಸ್ ಅಂಡ್ ಮೆಡಿಟೇಶನ್ಸ್"ದ ಕಲವು ಭಾಗಗಳನ್ನೂ ಅನುವಾದಿಸಿದ್ದಾರೆ. ಕನ್ನಡಿಸಲ್ಪಟ್ಟ ಶ್ರೀ ಅರವಿಂದರ ಮೇರುಕೃತಿಗಳ ಪೈಕಿ ದ ಲೈಫ್ ಡಿವೈನ್ (ದಿವ್ಯ ಜೀವನ) ಹಾಗೂ "ಸಾವಿತ್ರಿ ಮಹಾಕಾವ್ಯ"ವನ್ನು ಕೊ. ಚೆನ್ನಬಸಪ್ಪ ಭಾಷಾಂತರಿಸಿದ್ದಾರೆ ಮತ್ತು ಎಸ್.ಬಿ. ಜೋಶಿಯವರು "ದಿ ಎಸ್ಸೇಸ್ ಆನ್ ದ ಗೀತ" ಕುರಿತು ಈ ಮೂರು ಕೃತಿಗಳ ಬಗ್ಗೆ ನಾನು ಕೇಳಿದ್ದೇನೆ. ಮುಗಳಿಯವರು ಮಾಡಿದ ಸಾವಿತ್ರಿಯ ಕೆಲವು ಭಾಗಗಳ ಸುಂದರ ಭಾಷಾಂತರವನ್ನು ಇಲ್ಲಿ ನೆನೆಯಲೇಬೇಕು. ಶ್ರೀ ಗೌರೀಶ ಕಾಯ್ಕಿಣಿಯವರ "ಭವಿಷ್ಯ ಕಾವ್ಯ"ದ ಈ ಪುಸ್ತಕದ ಪ್ರಕಟಣೆಯಿಂದಾಗಿ ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಶ್ರೀ ಅರವಿಂದರ ಮೇರುಕೃತಿಯಾದ "ದ ಫ್ಯೂಚರ್ ಪೋಯಿಟ್ರಿ" ಕೂಡ ಈಗ ಕನ್ನಡದಲ್ಲಿ ಲಭ್ಯವಾದಂತಾಯಿತು.

ಈ ಪುಸ್ತಕದ ಪರಿವಿಡಿಯ ಮೇಲೆ ಒಂದು ಸಲ ಕಣ್ಣಾಡಿಸಿದರೆ ಗೊತ್ತಾಗುತ್ತದೆ ಇದರ ಹರವು ಎಷ್ಟಿದೆಯೆಂಬುದು. ಸಾಹಿತ್ಯೇತಿಹಾಸವನ್ನು ಕುರಿತು, ಸೌಂದರ್ಯಶಾಸ್ತ್ರ ವಿಮರ್ಶೆಯ ಮೇಲೆ ಮೌಲಿಕ ವಿಚಾರಗಳು ಇಲ್ಲಿವೆ; ಪುರಾತನ ಮತ್ತು ಅರ್ವಾಚೀನ ಇಂಗ್ಲಿಶ್ ಕವಿಗಳ ರಸಗ್ರಹಣವಿದೆ; ಭವಿಷ್ಯ ಕಾವ್ಯದ ಬಗ್ಗೆ– ವಿಶೇಷತಃ ಇಂಗ್ಲಿಶ್ ಕಾವ್ಯದ ಬಗ್ಗೆ– ದೂರಪ್ರೇಕ್ಷ್ಯವಿಲ್ಲಿದೆ. ಇಷ್ಟೇ ಅಲ್ಲ "ಕಾವ್ಯದ ಸತ್ಯ" "ಲಯ ಮತ್ತು ಗತಿ" "ಶೈಲಿ ಮತ್ತು ವಸ್ತು", "ಕವಿಕ್ರತು ಮತ್ತು ಮಂತ್ರ", "ಕಾವ್ಯದ ಆದರ್ಶ ಅಂತಸ್ಸತ್ತ್ವ", "ಕಾವ್ಯಸತ್ವದ ಸೂರ್ಯರು", "ಕಾವ್ಯಾನಂದದ ಆತ್ಮ ಮತ್ತು ಸೌಂದರ್ಯ", "ವಿಶ್ವ ಮತ್ತು ಚೇತನ"ಗಳಂತಹ

ವಿಷಯಗಳ ಬಗ್ಗೆ ಮೌಲಿಕ ಪರಾಮರ್ಶೆಯಿದೆ. ಶ್ರೀ ಅರವಿಂದರು ಮೂರು ವಿಭಿನ್ನ ಸಾಹಿತ್ಯ ವಿಷಯಗಳ ಬಗ್ಗೆ, ಈ ಅಧ್ಯಾಯಗಳಲ್ಲಿ ತಮ್ಮ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಅವು ಯಾವುವೆಂದರೆ:

1. ಇಂಗ್ಲಿಶ್ ಕಾವ್ಯ ಮತ್ತು ಅದರ ಇತಿಹಾಸದಲ್ಲಿ ಮೂಡಿಬಂದ ವಿವಿಧ ಒಲವುಗಳು ಮತ್ತು ಅವುಗಳ ಪ್ರಮುಖ ವಕ್ತಾರರು
2. ಶ್ರೀ ಅರವಿಂದರು ನಿರೂಪಿಸಿದ ತಮ್ಮದೇ ಆದ ಕಾವ್ಯ ಸಿದ್ಧಾಂತ, ಮತ್ತು
3. ಸ್ಫೂರ್ತಿಯ ಊರ್ಧ್ವ ಪಾತಳಿಗಳು.

ಈ ಪುಸ್ತಕದಲ್ಲಿ ಇಂಗ್ಲಿಶ್ ಸಾಹಿತ್ಯದ ಮೇಲೆ ಶುದ್ಧ ಭಾರತೀಯ ಪರಿಪ್ರೇಕ್ಷ್ಯವನ್ನು ಶ್ರೀ ಅರವಿಂದರು ಮೊಟ್ಟಮೊದಲಿಗೆ ನಮಗೊದಗಿಸಿದ್ದಾರೆ. ಇತ್ತೀಚಿನವರೆಗೆ ನಮ್ಮ ದೇಶದ ಕೆಲವು ಪಂಡಿತರು ತಮ್ಮ ಬುದ್ಧಿಮತ್ತೆಯನ್ನು ಇಂಗ್ಲಿಶ್ ಸಾಹಿತ್ಯಾಭ್ಯಾಸಕ್ಕೇ ಮೀಸಲಾಗಿಟ್ಟಿದ್ದರೂ ಆಂಗ್ಲ ಸಾಹಿತ್ಯದ ಬಗ್ಗೆ ಭಾರತೀಯವೆನ್ನಬಹುದಾದ, ನಮ್ಮದೇ ಆದ ಪರಿಪ್ರೇಕ್ಷ್ಯವೊಂದನ್ನು ಬೆಳಸಿಕೊಳ್ಳಲಾರದಾದರು. ಶ್ರೀ ಅರವಿಂದರು ಈ ಕ್ಷೇತ್ರದಲ್ಲಿ ಸುಮಸುಮಾರು 80 ವರ್ಷಗಳಷ್ಟು ಹಿಂದೆ ಮಾಡಿದ ಮಹತ್ಕಾರ್ಯದ ಅರಿವು ನಮಗಿನ್ನೂ ಆಗಬೇಕಾಗಿದೆ. ಅವರು ಹಾಕಿಕೊಟ್ಟ ದಾರಿಯಲ್ಲಿ ಮುಂದೆ ಹೆಜ್ಜೆ ಇಡುವ ಸಾಹಸವನ್ನು ಒಬ್ಬರೂ ಮಾಡಿದಂತಿಲ್ಲ. ಈ ದೇಶದಲ್ಲಿ ನಮ್ಮದೇ ಆದ, ಸಜೀವ, ಸಾಹಿತ್ಯ ವಿಮರ್ಶಾ ಪರಂಪರೆಯೊಂದು ಇಲ್ಲವೆಂದು ಕೆಲವು ವರ್ಷಗಳ ಹಿಂದೆ ಪ್ರೊಫೆಸರ್ ಸಿ.ಡಿ. ನರಸಿಂಹಯ್ಯನವರು ವಿಷಾದಿಸಿದರು. ಇಂಗ್ಲಿಶ್ ಕಾವ್ಯದ ಬೆಳವಣಿಗೆಯನ್ನು ಪರಾಮರ್ಶಿಸಲು, ಆಧುನಿಕ ಕಾವ್ಯ ಸಮಸ್ಯೆಗಳನ್ನು ಕುರಿತು ವಿಚಾರಿಸಲು ಪ್ರಾಚೀನ ಭಾರತೀಯ ಸೌಂದರ್ಯ ಮೀಮಾಂಸೆಯ ತತ್ವಗಳನ್ನು ಬಳಸಿ, ಇಂಥದೊಂದು ವಿಮರ್ಶಾ ಪರಂಪರೆಯೊಂದ್ನು ಕಟ್ಟುವ ಕೆಲಸಕ್ಕೆ ಶ್ರೀ ಅರವಿಂದರು ಅಡಿಪಾಯ ಹಾಕಿಕೊಟ್ಟಿದ್ದಾರೆ ಎಂಬುವದೇನೋ ನಿಜ; ಆದರೆ ಪ್ರೊಫೆಸರ್ ನರಸಿಂಹಯ್ಯನವರು ಹೇಳಿದಂತೆ, ಕೆಲಸ ಮುಂದುವರೆಸಲು ಈವರೆಗೆ ಒಬ್ಬ “ಗಿರಾಕಿ”ಯೂ ಮುಂದೆ ಬಂದಿಲ್ಲ.

ಪ್ರಾಚೀನ ಭಾರತೀಯ ಸೌಂದರ್ಯ ಮೀಮಾಂಸೆಯ ತತ್ತ್ವಗಳನ್ನೂ, ಭಾರತೀಯ ದರ್ಶನಗಳ ಸೂಕ್ಷ್ಮ ದೃಷ್ಟಿಯನ್ನೂ ಒಳಗೊಂಡ ತಮ್ಮದೇ ಆದ

ಕಾವ್ಯ ಸಿದ್ಧಾಂತವೊಂದನ್ನು ಶ್ರೀ ಅರವಿಂದರು ಬೆಳಸಿಕೊಂಡಿದ್ದರು. ಇದರಿಂದಾಗಿ ತಮ್ಮದೇ ಆದ ಇಂಗ್ಲಿಶ್ ಸಾಹಿತ್ಯ ಪರಾಮರ್ಶೆಯ ವಿಧಾನವನ್ನು ಬಳಸಲು ಅವರಿಗೆ ಸಾಧ್ಯವಾಯಿತು. ಸಾಹಿತ್ಯ ಜಿಜ್ಞಾಸೆಯ ಕ್ಷೇತ್ರದಲ್ಲಿ ಪಾಶ್ಚ್ಯಾತ್ಯ ವಿಚಾರಧಾರೆಗಳು ಮತ್ತು ಸಂಪ್ರದಾಯಗಳು ಅವರಿಗೆ ಪರಿಚಿತ ವಿಷಯಗಳೇ ಆಗಿದ್ದರಿಂದ ಆ ಸಂಪ್ರದಾಯಕ್ಕೆ ಸಂಬಂಧಿಸಿದ ಅನೇಕ ವಸ್ತು–ಸಮಸ್ಯೆಗಳನ್ನು ಕುರಿತು ಶ್ರೀ ಅರವಿಂದರು ಸಮರ್ಥವಾಗಿ ಸಮಾಲೋಚಿಸಿದ್ದಾರೆ. ಆಧುನಿಕ ವಿಮರ್ಶಕನಿಗಿರುವಂತೆ ಸ್ಫೂರ್ತಿಯ ಬಗ್ಗೆ ಶ್ರೀ ಅರವಿಂದರಿಗೆ ಸಂಶಯ ಅಥವಾ ಸಂಕೋಚಗಳಿಲ್ಲ. ಅವರ ಪ್ರಕಾರ, ಕಲೆಯೆಂದರೆ ಕಾರ್ಯಾಗಾರದಲ್ಲಿ ತಯಾರಿಸಿ ಹೊರತರುವ ವಸ್ತುವಲ್ಲ. ಕಲೆಯ ಪರಿಪೂರ್ಣತೆಗಷ್ಟೇ ಅಲ್ಲ, ಅದರ ಶುದ್ಧತೆಯನ್ನು ಸಾಬೀತುಗೊಳಿಸಲೂ ಸ್ಫೂರ್ತಿ ಅವಶ್ಯ ಎಂದು ಅವರು ಹೇಳುತ್ತಾರೆ. ಸ್ಫೂರ್ತಿ ಎಂದರೇನು ಅಷ್ಟೇ ಅಲ್ಲ ಅದನ್ನು ಸಾಧಿಸುವ ವಿವಿಧ ಪ್ರಕ್ರಿಯೆಗಳನ್ನೂ ಅವರು ಅರಿತಿದ್ದರು. ಕಲೆಯು ಕೇವಲ ಸ್ಫೂರ್ತಿ ಮಾತ್ರದಿಂದ ಪರಿಪೂರ್ಣತೆಯನ್ನು ಸಾಧಿಸಲಾರದು, ನಿಜ; ಆದರೆ ಕಲಾಕೃತಿಯು ನೈಜತ್ವವನ್ನು ಹೊಂದಲು ಅದಕ್ಕೆ ಸ್ಫೂರ್ತಿಯ ಸೆಲೆ ಬೇಕೇಬೇಕು ಎಂದುವರು ಒತ್ತಿ ಹೇಳುತ್ತಾರೆ. ಕಾವ್ಯದಲ್ಲಿ ಪಾಕ ಪ್ರಾಕಾರ(Form)ದ ಮಹತ್ವವನ್ನು ಅವರು ಅಲ್ಲಗಳೆಯುವದಿಲ್ಲ. ಕಾವ್ಯಾಭ್ಯಾಸದಲ್ಲಿ ಕಾವ್ಯವೊಂದರ ಛಂದಸ್ಸು ಅಲ್ಲಿ ಉಪಯೋಗಿಸಲ್ಪಟ್ಟ ಪದ್ಯ ಪ್ರಕಾರ, ಅಲ್ಲಿ ಸಿಗುವ ವಾಗರ್ಥಪ್ರತಿಪತ್ತಿ, ಇವಕ್ಕೆಲ್ಲ ಅವರು ಬಹಳ ಮಹತ್ವಕೊಡುತ್ತಾರೆ. ಆದರೂ ಅವರ ಪ್ರಕಾರ, ಇವನ್ನೆಲ್ಲವನ್ನೂ ಮೀರಿ ನಿಲ್ಲುವ ಏಕೈಕ ವಸ್ತುವೆಂದರೆ, ಸ್ಫೂರ್ತಿ. ಸಂಸ್ಕೃತ ಶಬ್ದ “ಕವಿ”ಗೆ ಸಂವಾದಿಯಾದ ಇಂಗ್ಲಿಷ್ ಶಬ್ದ – ‘ಪೋಯಿಟ್’ದ ನಿರಕ್ತ್ಯರ್ಥವು ‘ಮಾಡುವವನು’ ‘ಮಾಳ್ಯಗಾರ’ ಎಂದಾಗುತ್ತದೆ. ಶ್ರೀ ಅರವಿಂದರ ಪ್ರಕಾರ, ‘ಕವಿ’ ಎಂದರೆ, ವೈದಿಕ ಅರ್ಥದ ‘ದೃಷ್ಟಾರ’, ‘ಋಷಿ’, ‘ಶಬ್ದ ಬ್ರಹ್ಮನ ವಾಹಿನಿ’. ಅವರೆನ್ನುವಂತೆ ಕಾವ್ಯದ ಮೂಲಶಕ್ತಿಯಿರುವುದು ಅದು ಕೊಡುವ ದರ್ಶನದಲ್ಲಿ, ಕೇವಲ ಅರ್ಥ ಅಥವಾ ಭಾವ ಸಂಪತ್ತಿಯಲ್ಲಿ ಅಲ್ಲ,

ಕಾವ್ಯ ಸೃಷ್ಟಿಯಲ್ಲಿ ಕವಿಯ ಕಲ್ಪನಾಶಕ್ತಿ, ಬುದ್ಧಿಮತ್ತೆ ಸೌಂದರ್ಯ ಪ್ರಜ್ಞೆ ಎಲ್ಲವೂ ಮುಖ್ಯ ವಿಷಯಗಳೇ. ಆದರೆ, ಶ್ರೀ ಅರವಿಂದರ ಪ್ರಕಾರ, “ಆತ್ಮವೇ ಕಾವ್ಯದ ನಿಜವಾದ ಕರ್ತೃ ಮತ್ತು ಭೋಕ್ತೃ”. ಕವಿಗೆ ಕಾವ್ಯದ ತಂತ್ರದಲ್ಲಿ ಪರಿಣತಿ

ಬೇಕೇಬೇಕು; ಆದರೆ ತಂತ್ರವು ಒಮ್ಮೆ ಕರಗತವಾಯಿತೋ, ಅದನ್ನು ಅದರಷ್ಟಕ್ಕೆ ಬಿಟ್ಟು ಕವಿಯು ಹಾಡಿನೊಂದಿಗೆ ಹಾಡಾಗಿ ಹರಿಯಬೇಕು. ಗೀತ ಸ್ಪೃಷ್ಟಶಕ್ತಿ, ಗೇಯ ಗುಣ, ಲಯ ಮತ್ತು ಧ್ವನಿ ಮಾಧುರ್ಯ ಇವೇ ಕಾವ್ಯದ ಆತ್ಮದ ಸತ್ವಗಳು. ಅ–ನಿವಾರ್ಯ ಶಬ್ದವನ್ನು ಹೊಂದುವುದು, ಮಹತ್ ಸ್ಫೂರ್ತಿಯಿಂದ ಉಲಿಯುವುದು, ಇದೇ ಕವಿಯ ಕೆಲಸ. ಅತ್ಯಂತಿಕವಾದ ಕಾವ್ಯ ಧ್ವನಿಯು ಅನಾದಿ ಋಜುತ್ವದ ಸೃಜನಶೀಲ, ನೇರ ಧ್ವನಿ; ಇದೇ ಮಂತ್ರವಾಗಿ ಪರಿಣಮಿಸುತ್ತದೆ. ಮಂತ್ರವು ಎಲ್ಲವನ್ನೂ ಒಳಗೊಂಡಿರುತ್ತದೆ. ಅಲ್ಲಿ ಉಚ್ಚಾತಿ ಉಚ್ಚತಮ ಉತ್ಕಟ ಭಾವಗಳು ಶಬ್ದದೊಂದಿಗೆ ಒಂದಾಗುತ್ತವೆ; ಮಂತ್ರವು ಲಯದ ಉತ್ಕಟ ಸ್ರೋತ; ಶಬ್ದ ಮತ್ತು ಅರ್ಥ ಅಲ್ಲಿ ಏಕರೂಪವಾಗುತ್ತವೆ. ಅಷ್ಟೇ ಏಕೇ? ಚೇತನದ ಯಜುದರ್ಶನವೇ ಮಂತ್ರ. ಶ್ರೀ ಅರವಿಂದರ ಶಬ್ದಗಳಲ್ಲಿಯೇ ಹೇಳುವುದಾದರೆ, **"**The Mantra is a supreme rhythmic language which seizes hold upon all that is finite and brings into the light and voice of its own infinite,**"** ಅಂದರೆ **"**ಅಂಶವಾದದ್ದೆಲ್ಲವನ್ನೂ ಆವರಿಸಿಕೊಂಡು, ಅನಂತದ ಧ್ವನಿ, ಬೆಳಕನ್ನು ಈ ಅಂತಗಳಿಗೆ ಮುಟ್ಟಿಸುವ ಉತ್ಕಟ, ಲಯಪೂರ್ಣ ಭಾಷೆಯೇ ಮಂತ್ರ**"**.

ಕಾವ್ಯಸ್ಫೂರ್ತಿಯ ಊರ್ಧ್ವಪಾತಳಿಗಳ ಬಗ್ಗೆ ಶ್ರೀ ಅರವಿಂದರು ರೂಪಿಸಿದ ಸಿದ್ಧಾಂತವು ಅವರು ನೀಡಿದ ಇನ್ನೊಂದು ಅಮೋಘ ಕಾಣಿಕೆ. ಈ ಸಿದ್ಧಾಂತ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಶ್ರೀ ಅರವಿಂದರು ತಮ್ಮ ಶಿಷ್ಯರಿಗೆ ಬರೆದ ಕೆಲವು ಪತ್ರಗಳಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ಎಲ್ಲ ಪತ್ರಗಳು **"ಲೆಟರ್ಸ್ ಅಫ್ ಶ್ರೀ ಅರೊಬಿಂದೊ – ಥರ್ಡ್ ಸೀರಿಸ್"** ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ಈಗಾಗಲೇ ಪ್ರಕಟವಾಗಿವೆ. ಈ ಪುಸ್ತಕವೂ ಕನ್ನಡದಲ್ಲಿ ಶೀಘ್ರವಾಗಿ ಬರಲಿ ಎಂದು ನನ್ನ ಬಯಕೆ, ಪ್ರಾರ್ಥನೆ.

ಇಂದಿನ ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಅನೇಕ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಗತಿ ವಿರೋಧಗಳು ಎದ್ದು ಕಾಣಿಸುತ್ತಿವೆ. ಪ್ರಚಲಿತ ಪಾಶ್ಚಾತ್ಯ ವಿಮರ್ಶಾ ಮಾದರಿಗಳಿಗೆ ಅಷ್ಟೊಂದು ಕಾತರದಿಂದ ಜೋತು ಬೀಳದೆ, ನಮ್ಮ ವಿಮರ್ಶಕರು ಈ ಗತಿ ವಿರೋಧಗಳನ್ನು ಹೊಸಗಣ್ಣಿನಿಂದ ಪುನರ್ವಿವೇಚಿಸಿ, ನಮ್ಮದೇ ಆದ ಸ್ವಯಂಪೂರ್ಣ ವಿಮರ್ಶಾ ಪದ್ಧತಿಯೊಂದನ್ನು

ಆವಿಷ್ಕರಿಸಿಕೊಳ್ಳಬೇಕಾಗಿದೆ. ಈ ದಿಶೆಯಲ್ಲಿ ಈ ಪುಸ್ತಕದ ಪ್ರಕಟಣೆಯು ದಾರಿತೋರಬಲ್ಲುದೆಂದು ನನ್ನ ನಂಬುಕೆ. ಕನ್ನಡದಲ್ಲಿ ಈವರೆಗೆ ಒಣಗಿ, ಮುರುಟಿಕೊಂಡ ಸೃಜನಶೀಲ ಸಾರಸ್ವತ ಚೇತನಗಳು ಹೊರಬರಲು ಇಂಥ ಆವಿಷ್ಕಾರದಿಂದ ಮಾತ್ರ ಸಾಧ್ಯ. ಪ್ರೊಫೆಸರ್ ಎಸ್.ಕೆ. ಘೋಷರು ಒಂದೆಡೆ ಹೇಳಿದಂತೆ, "In the catus-land of contemporary critical theory and poetic practice Sri Aurobindo brings a new and accult measure, a hope and a forecast, not unfounded on facts, though the emphasis and interpretation will be open to challenge in the minds of western and westerned poets and critics"

ಸಮಕಾಲೀನ ಕಾವ್ಯ ಸಿದ್ಧಾಂತ ಮತ್ತು ಕಾವ್ಯ ಕ್ರಿಯೆಯ ಬಂಜರು ಭೂಮಿಗೆ ಶ್ರೀ ಅರವಿಂದರು ಪರಾಶಕ್ತಿಯ ನವಚೈತನ್ಯ ಸ್ತೋತ್ರವೊಂದನ್ನು ತಂದಿದ್ದಾರೆ; ಆಶಾಪೂರ್ತಿಯ ಕಾರಣಿಕರಾಗಿದ್ದಾರೆ. ಅವರ ಈ ಪ್ರವಾದಿತ್ವಕ್ಕೆ ಸಾಕ್ಷ್ಯಾಧಾರಗಳ ನೆಲೆಯಿಲ್ಲವೆಂದೇನಲ್ಲ. ಅವರ ಕಾಣ್ಕೆಯ ಅನ್ವಯಾರ್ಥ ಮತ್ತು ಅದರ ಸ್ವರಭಾರಗಳು ಪಶ್ಚಿಮದ ಮತ್ತು ಪಶ್ಚಿಮ ಬುದ್ಧಿಯ ಕವಿ ಮತ್ತು ವಿಮರ್ಶಕರಿಗೆ ಬಯಲು ಆಹ್ವಾನವೊಡ್ಡುತ್ತಿವೆ. "ಕೊನೆಯದಾಗಿ, ಇಂಥ ಸಮರ್ಥ ಭಾಷಾಂತರವನ್ನು ಕೊಟ್ಟದ್ದಕ್ಕಾಗಿ ಶ್ರೀ ಗೌರೀಶ ಕಾಯ್ಕಿಣಿಯವರಿಗೆ, ಇದರ ಪ್ರಕಟಣೆಯನ್ನು ಸಾಧ್ಯವಾಗಿಸಿದ ಎಲ್ಲರಿಗೂ, ಈ ಪುಸ್ತಕವನ್ನು ಕೈಗೆತ್ತಿಕೊಳ್ಳುವ ಓದುಗರ ಪರವಾಗಿ ಕೃತಜ್ಞತೆಯನ್ನು ಸೂಚಿಸಬಯಸುತ್ತೇನೆ."

[ಸಶೇಷ]

## ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

# "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

5

### ದೇಶ ಸೇವೆ

**ಶ್ರೀ ಅರವಿಂದರು** ತಮ್ಮ ಆಯುಷ್ಯದ ಎರಡು ಅವಸ್ಥೆಗಳನ್ನು ಮುಗಿಸಿ, ಮೂರನೇ ಅವಸ್ಥೆಯಲ್ಲಿ ಪ್ರವೇಶಿಸಿದರು. ಪೂರ್ವ ವಯಸ್ಸಿನಲ್ಲಿ ಇದ್ದ ವಿಕ್ಷಿಪ್ತತನವು ಈಗ ಒಂದು ವಿಶಿಷ್ಟ ಸ್ವರೂಪವನ್ನು ಧರಿಸಿತು. ಸಾಮಾನ್ಯರಂತೆ ಉಂಡುಟ್ಟು ಸ್ವಸ್ಥವಾಗಿರುವದನ್ನು ಬಿಟ್ಟು ಅವರು ಲೋಕಸೇವೆಗೆ ಟೊಂಕ ಕಟ್ಟಿದ್ದು ವಿಕ್ಷಿಪ್ತತನವೆ ಇರುತ್ತದೆ. ತನ್ನ ಪ್ರವೃತ್ತಿಯ ಅಥವಾ ಅಂತಃಕರಣದೊಳಗಿನ ಅಸ್ಫುಟ ಧ್ವನಿಯ ಸ್ಪಷ್ಟ ಬೋಧವಾಗದ್ದರಿಂದ ಮನುಷ್ಯನು ಹಲವು ಸಾರೆ ಸಾಮಾನ್ಯರಿಗೆ ವಿಚಿತ್ರವಾಗಿ ತೋರುವ ಕೃತಿಗಳನ್ನು ಮಾಡುತ್ತಿರುತ್ತಾನೆ. ಜ್ಞಾನದಿಂದ ಅಂತಃಸ್ಫೂರ್ತಿಯ ಬೋಧವು ಆಯಿತೆಂದರೆ ಮನುಷ್ಯನು ಸರಿಯಾದ ಮಾರ್ಗಕ್ಕೆ ಬರಲಿಕ್ಕೆ ಹತ್ತುವನು(ಪ್ರಾರಂಬಿಸುವನು). ಪ್ರತಿಯೊಬ್ಬನಿಗೆ ಒಂದು ತರದ ಅಂತಃಪ್ರೇರಣೆಯಾಗುತ್ತಿರುವದುಂಟು. ಆದರೆ ಆ ಪ್ರೇರಣೆಯ ಸರಿಯಾದ ಅರ್ಥವು ತಿಳಿಯದ್ದರಿಂದಲೂ ಅದನ್ನು ಕೃತಿಯಲ್ಲಿ ಹೇಗೆ ತರಬೇಕೆಂಬ ಜ್ಞಾನವಿಲ್ಲದ್ದರಿಂದಲೂ, ಒಂದು ವೇಳೆ ಜ್ಞಾನವಿದ್ದರೂ ಅನೇಕ ಸಾರೆ ಸತ್ಯವೆಂದು ತಿಳಿದ ಸಂಗತಿಗಳನ್ನು ಆಚರಿಸುವ ನೈತಿಕ ಧೈರ್ಯದ ಅಭಾವವಿರುವದರಿವಂದಲೂ ಮನುಷ್ಯನು ಬೆಳಕಿಗೆ ಬರುವದಿಲ್ಲ. ಈಶ್ವರನು ಕೊಟ್ಟ ತನ್ನ ಪಾಲಿನ ಸಂದೇಶವನ್ನು ಜಗತ್ತಿಗೆ ಮುಟ್ಟಿಸುತ್ತಿರುವದಿಲ್ಲ. ಅಪೂರ್ಣಾವಸ್ಥೆಯಲ್ಲಿಯೇ ಹೊರಟು ಹೋಗುವನು. ಶ್ರೀ ಅರವಿಂದರಿಗೆ ಅವರ ತಂದೆಯು ಆಯ್.ಸಿ.ಎಸ್. ಪರೀಕ್ಷೆಗಾಗಿ ಕಳಿಸಿದರೂ, ಪ್ರಸಂಗವು ಸಿಗುತ್ತಲೇ ಅವರು ತಮ್ಮ ಪ್ರವೃತ್ತಿಯಂತೆ ಇಷ್ಟ ಮಾರ್ಗವನ್ನೇ ಹಿಡಿದರು.

ಶ್ರೀ ಅರವಿಂದರ ಮನಸ್ಸು ತಿರುಗಲಿಕ್ಕೆ (ಪರಿವರ್ತನಗೊಳ್ಳುವದಕ್ಕೆ) ದೇಶದ ಪರಿಸ್ಥಿತಿಯೊಂದೇ ಕಾರಣವೆಂದರೆ ಸರಿಯಾಗಲಿಕ್ಕಿಲ್ಲ. ಐಹಿಕ ಭೋಗಗಳ ಮೇಲಿಂದ ಮನಸ್ಸು ಹಾರಲಿಕ್ಕೆ ದೇಶದ ಪರಿಸ್ಥಿತಿಯು ಕಾರಣವಿದ್ದಂತೆ ಅವರಲ್ಲಿ ಉಂಟಾದ ಜಿಜ್ಞಾಸೆಯೂ ಒಂದು ಮಹತ್ವದ ಕಾರಣವಾಗಿದೆ. ಶ್ರೀ ಅರವಿಂದರು

ರಾಜಕಾರಣದ ಸಲುವಾಗಿ ದೇಶಸೇವೆಗೆ ಆರಂಭಿಸಲಿಲ್ಲ. ಇದೊಂದು ಆತ್ಮೋನ್ನತಿಯ ಸಾಧನವೆಂದೂ ಜನತಾರೂಪಿಯಾದ ಜನಾರ್ಧನನ ಸೇವೆ ಮಾಡಬೇಕೆಂದು ಕೈಕೊಂಡರು. ಅವರ ಈ ಕೃತ್ಯದ ಬುಡಕ್ಕೆ (ಮೂಲದಲ್ಲಿ) ಪ್ರಬಲವಾದ ಧಾರ್ಮಿಕ ಭಾವನೆಯೇ ಇರುತ್ತದೆ. ಶಾಂತ ವಿಚಾರಾಂತ್ಯದಲ್ಲಿ ಅವರಿಗೆ ವೇದಾಂತದ ಮತಗಳು ನಿತ್ಯವೆಂದು ತಿಳಿದು ಬರಹತ್ತಿತು. ಆರ್ಯ ಸಂಸ್ಕೃತಿಯ ಅಭ್ಯಾಸವನ್ನು ಶಾಂತ ರೀತಿಯಿಂದ ನಡೆಸಿದರು. ಅವರ ಅಂತರಂಗದ ಬದಲಾವಣೆಯಾಗಿದೆ ಎನ್ನುವದನ್ನು ಸೂಚಿಸಲಿಕ್ಕೆ ಉಡುಪು–ತೊಡಪುಗಳು (ವಸ್ತ್ರ ವಿನ್ಯಾಸ) ವ್ಯತ್ಯಾಸ ಹೊಂದಿದವು. ಯುರೋಪೀಯ ಪದ್ಧತಿಯ ಆಚಾರ ವಿಚಾರಗಳ ಸ್ಥಳವನ್ನು ಹಿಂದೀ ಆಚಾರ ವಿಚಾರಗಳು ಆಕ್ರಮಿಸಿದವು. ಧರ್ಮಗ್ರಂಥಗಳ ಮನನ ಮಾಡಬೇಕೆಂದೂ, ನಮ್ಮ ವಾಙ್ಮಯದ ಆಸ್ವಾದವನ್ನು ತಕ್ಕೊಳ್ಳಬೇಕೆಂದು ಸಂಸ್ಕೃತದ ಅಧ್ಯಯನ ನಡೆಸಿದರು. ಯಾವುದೊಂದು ಭಾಷೆಯು ಉತ್ತಮ ರೀತಿಯಿಂದ ಬಾಯಿಯಲ್ಲಿ ಕುಳಿತುಕೊಳ್ಳಬೇಕಾದರೆ (ಮನನವಾಗಬೇಕಾದರೆ) ಆ ವಾಙ್ಮಯದೊಳಗಿನ ಕೆಲವು ಉದ್ಗ್ರಂಥಗಳನ್ನು ಮುಖೋದ್ಗತ (ಕಂಠಪಾಠ) ಮಾಡಬೇಕೆಂದು ಇವರ ಮತವಿದ್ದುದರಿಂದ ಸ್ವಲ್ಪ ಕಾಲದೊಳಗೆ ವಾಲ್ಮೀಕಿ ರಾಮಾಯಣದ ಕೆಲವೊಂದು ಭಾಗವನ್ನು ಅಸ್ಖಲಿತವಾಗಿ ಅನ್ನಲಿಕ್ಕೆ (ಹೇಳಲಿಕ್ಕೆ) ಕಲಿತರು!

ವೇದಾಂತ ತತ್ವಗಳ ಬೋಧವಾದ ಬಳಿಕ ಅವುಗಳಂತೆ ಆಚರಣೆಯು ಅವಶ್ಯವಲ್ಲವೇ? ಶ್ರೀ ಅರವಿಂದರು ಹೊಟ್ಟೆಗಾಗಿ ದುಡಿದು ದುಡಿದು ಬೇಸರಾದ ಹೊತ್ತಿನಲ್ಲಿ ಮನಸ್ಸಿಗೆ ಆರಾಮವೆಂದೇನೂ ವೇದಾಂತದ ಜ್ಞಾನ ಮಾಡಿಕೊಳ್ಳಲಿಲ್ಲ. ಆಯುಷ್ಯದ ಉದ್ದೇಶವೇನು? ಹೇಗೆ ನಡೆದರೆ ಸಾರ್ಥಕವಾದೀತು? ಎಂಬುದನ್ನು ತಿಳಿದು ಅದರಂತೆ ಮನಃಪೂರ್ವಕವಾಗಿ ಆಚರಿಸಿ ದೇಹಸಾರ್ಥಕ ಮಾಡಿಕೊಳ್ಳುವದೇ ಅವರ ಅಧ್ಯಯನದ ಉದ್ದೇಶವಿತ್ತು; ಮತ್ತು ವಿಚಾರಗಳು ಸ್ಥಿರವಾದ ಬಳಿಕ ಆ ವಿಚಾರಗಳಂತೆಯೇ ಆಚಾರವನ್ನು ಇಡಲಿಕ್ಕೆ ಹಿಂಜರಿಯಲಿಲ್ಲ. ಭೌತಿಕ ಸುಖವನ್ನು ಕೃಷ್ಣಾರ್ಪಣ ಮಾಡಿ ಸತ್ಯತತ್ವದಂತೆ ನಡೆಯಹತ್ತಿದರು. ಶ್ರೀ ಅರವಿಂದರೂ ವೇದಾಂತಿಗಳು; ನಮ್ಮಲ್ಲಿಯ ಅನೇಕರೂ ವೇದಾಂತಿಗಳು. ಶ್ರೀ ಅರವಿಂದರು ಶ್ರೀ ಗೀತಾದಿ ಗ್ರಂಥಗಳನ್ನು ಓದಿದರು. ನಮ್ಮಲ್ಲಿಯ ಹಲವರೂ ಅವುಗಳನ್ನು ಓದಿದರು. ಆದರೆ ಇವರ ನಡುವಿನ

ಅಂತರವೆಷ್ಟಿದು! ಸೈ! ವೇದಾಂತಿಗಳೆನ್ನಬೇಕು ಶ್ರೀ ಅರವಿಂದರಿಗೇ ಮಾತ್ರ. ದೀಡದಮಡಿಯ (ಅರ್ಧಮರ್ಧ ಓದಿದ) ಅನೇಕ ವೇದಾಂತಿಗಳು ಅರ್ಥದ ಅನರ್ಥ ಮಾಡಿ ಮನಸ್ಸಿನ ಸಮಾಧಾನ ಮಾಡಿಕೊಳ್ಳುತ್ತಾರೆ. ಶ್ರೀ ಅರವಿಂದರಂಥವರೂ ಈ ವರ್ಗಕ್ಕೂ ಕೆಲವು ಸಾಮ್ಯವಿದೆ, ಇಲ್ಲ ಎನ್ನುವಂತಿಲ್ಲ. ಲೋಕ ಸೇವೆಯಲ್ಲಿ ಅಥವಾ ಅತ್ಮೋನ್ನತಿಯ ಕಾರ್ಯದಲ್ಲಿ ಶ್ರೀ ಅರವಿಂದರಂಥ ವೇದಾಂತಿಗಳು ಮಾನಾಪಮಾನವನ್ನು ತ್ಯಜಿಸಿರುತ್ತಾರೆ, ಸುಖದುಃಖಗಳನ್ನು ಬಿಟ್ಟಿರುತ್ತಾರೆ, ಶಾಂತಿಯನ್ನು ತಳೆದಿರುತ್ತಾರೆ. ಮೇಲೆ ಹೇಳಿದಂಥ ವೇದಾಂತಿ ವರ್ಗವೂ ಈ ಗುಣಗಳುಳ್ಳದ್ದು ಇರುತ್ತದೆ. ಆದರೆ ಯಾವಾಗ? ಸದಾ ಕಾಲವೂ ಈ ವೃತ್ತಿಯಿರುವದಿಲ್ಲ; ಕೇವಲ ಹೊಟ್ಟೆಗಾಗಿ ಯಾವಾಗ ಧನಾರ್ಜನೆಯನ್ನು ಮಾಡಬೇಕಾಗಿರುವದೋ ಆಗ. ಆಗ ಅಧಿಕಾರಿಯು ಅಪಶಬ್ದಗಳನ್ನಾಡಲೀ ಅವರಿಗೆ ನಾಚಿಕೆ ಇಲ್ಲ, ಅಪಮಾನ ಮಾಡಲಿ ದುಃಖವಿಲ್ಲ. ಏನು ಮಾಡಿದರೂ ಇವರ ಶಾಂತಿ(?)ಗೆ ಭಂಗ ಬರುದಿಲ್ಲ. ಈ ವರ್ಗದ ವೇದಾಂತಿಗಳಿಗೆ ತತ್ತ್ವಜ್ಞಾನದ ಪರಿಭಾಷೆಯು ತುದಿನಾಲಿಗೆಯ ಮೇಲೆ ಕುಳಿತಿರುತ್ತದೆ. ಆದರೆ ಆ ಜ್ಞಾನವು ತುದಿಯಲ್ಲಿ ಕುಳಿತಿರುವದೇ ಹೊರ್ತು ಗಂಟಲ ಕೆಳಗೆ (ಅಂತಃಕರಣದಲ್ಲಿ) ಇಳಿದಿರುವದಿಲ್ಲ! ಶಾಬ್ದಿಕ ಕೋಟಿಕ್ರಮ ಮಾಡಿ ಸುಳ್ಳು ಸಂಗತಿಯನ್ನು ಸತ್ಯದಂತೆ ನಟಿಸಿ ತೊರಿಸುವರು; ಇಂಥ ವೇದಾಂತಿಗಳಿಂದಲೇ ನಮ್ಮ ಧರ್ಮಕ್ಕೆ ಅವನತ ಸ್ಥಿತಿಯು ಪ್ರಾಪ್ತವಾಗಿದೆ; ದೇಶವೂ ಹೀನ ಸ್ಥಿತಿಗೆ ಬಂದಿದೆ. ಆಚಾರವಿಲ್ಲದ ಉದಾತ್ತ ವಿಚಾರಗಳ ಪ್ರಯೋಜನವೇನು? “ಕಲೌ ವೇದಾಂತಿನೋ ಭಾಂತಿ ಫಾಲ್ಗುಣೇ ಬಾಲವಾ ಇವ” ಎಂಬುದೇ ಸತ್ಯ.

ಇಲ್ಲಿಯವರೆಗೂ “ಶ್ರೀ ಅರವಿಂದರು “ ಎಂದಕೂಡಲೇ ಒಂದು ವ್ಯಕ್ತಿಯಷ್ಟೇ ಕಣ್ಣೆದುರಿಗೆ ಬರುತ್ತಿತ್ತು; ಮತ್ತು ಇಲ್ಲಿಯವರೆಗಿನ ಶ್ರೀ ಅರವಿಂದರ ವರ್ಣನೆಯಲ್ಲಿ ವೈಯಕ್ತಿಕ ಭಾಗವೇ ಹೆಚ್ಚಾಗಿತ್ತು. ಆದರೆ ಇನ್ನು ಮುಂದಿನ ಶ್ರೀ ಅರವಿಂದರ ವ್ಯಾಪ್ತಿಯು ಬರೇ ಮೂರೂವರೆ ಮೊಳದ ದೇಹದಲ್ಲಿ (ಬಹಳವಾದರೆ ಅವರ ಮನೆತನದಲ್ಲಿಯಷ್ಟೇ) ಇರದೇ ಇಡೀ ರಾಷ್ಟ್ರದಲ್ಲಿರುತ್ತದೆ. ಶ್ರೀ ಅರವಿಂದರಿಗೆ ಕ್ಷುದ್ರ ವೈಯಕ್ತಿಕ ಸುಖ, ಮಾನ–ಮಾನ್ಯತೆಗಳಲ್ಲಿ ಗುಂಗಾಗಿ (ಅದಕ್ಕೇ ಜೋತುಕೊಂಡು) ಇರುವದು ಸೇರಲಿಲ್ಲ. ತಮ್ಮ ಸುಖವೆಂದರೆ ದೇಶದ ಸುಖ, ತಮ್ಮ

ಉನ್ನತಿಯೆಂದರೆ ದೇಶದ ಉನ್ನತಿ ಎಂದು ತಿಳಿದು, ಅವರು ಅಖಿಲ ಭಾರತೀಯರಲ್ಲಿ ವಿಲೀನವಾದರು; ಭಾರತೀಯರನ್ನು ತಮ್ಮ ಅಂತಃಕರಣದಲ್ಲಿ ಆದರಿಸಿದರು. ಪ್ರತಿಯಾಗಿ ಭಾರತೀಯರೂ ಅವರನ್ನು ತಮ್ಮ ಹೃದಯ ಮಂದಿರದಲ್ಲಿ ಪೂಜಿಸಹತ್ತಿದರು. ಇನ್ನು ಮುಂದೆ ಶ್ರೀ ಅರವಿಂದರು ಒಂದು ವ್ಯಕ್ತಿಯಾಗಿರದೇ ರಾಷ್ಟ್ರವಾದರು. ದೇಶ ಬಾಂಧವರಲ್ಲಿ ತಾದಾತ್ಮ್ಯವನ್ನು ಹೊಂದಿದರು. ಆದುದರಿಂದ ಶ್ರೀ ಅರವಿಂದರ ಮುಂದಿನ ಚರಿತ್ರದ ಅವಲೋಕನ ಮಾಡುವವರಿಗೆ ಇಡೀ ದೇಶದ ಪರಿಸ್ಥಿತಿಯ ಜ್ಞಾನ ಮಾಡಿಕೊಳ್ಳುವದು ಅವಶ್ಯವಿದೆ. **ದೇಶಸೇವಕ ಶ್ರೀ ಅರವಿಂದರ ಚರಿತ್ರವೆಂದರೆ** ತತ್ಕಾಲೀನ ದೇಶದ ಚರಿತ್ರೆಯಾಗಿದೆ.

ಪೀಠಿಕೆಯಲ್ಲಿ ಸೂಚಿಸಿದಂತೆ ಇಂಗ್ಲೀಶ ಭಾಷೆಯ ಪ್ರಸಾರದ ಆರಂಭದ ದಿನಗಳಲ್ಲಿ ಜನರಲ್ಲಿ ಮಾನಸಿಕ ದಾಸ್ಯವು ಹೆಚ್ಚಾಗಿತ್ತು. ಮನಸ್ಸಿನಿಂದ ಇಂಗ್ಲೀಶ ಕೃತಿಗಳ ಅನುಕರಣವು ನಡೆದಿತ್ತು. ಅವರ ಕಾಯಿದೆ ಕಾನೂನುಗಳ ವಿಷಯಕ್ಕೆ ಆದರವಿತ್ತು. **“**ಹಳೇದೆಲ್ಲವೂ ಹೊಲಸು**”** ಎಂಬ ಪ್ರವೃತ್ತಿಯು ಜನರಲ್ಲಿ ಹೆಚ್ಚಾಯಿತು. ದುರ್ಗುಣಗಳಂತೆ ಕೆಲವು ಸುಗುಣಗಳ ಪ್ರವೇಶವೂ ಆಯಿತು. ದೇಶದ ಮೇಲೆ ಪ್ರೇಮ ಮಾಡಬೇಕು, ಸಮಾಜ ಸೇವೆ ಮಡಬೇಕೆಂಬ ಅಸ್ಪಷ್ಟ ಕಲ್ಪನೆಯು ಜನರಲ್ಲಿ ಅಂಕುರಿಸಿತು. ಅಲ್ಲಲ್ಲಿ ಕೆಲವು ಸಂಘಗಳೂ ಸಂಸ್ಥೆಗಳೂ ಸ್ಥಾಪನೆಗೊಂಡವು. ಸ್ತ್ರೀಯರು ಸುಶಿಕ್ಷಿತರಾಗದ ವಿನಾ ಗತಿಯಿಲ್ಲವೆಂದು ಕೆಲವರು ಕನ್ಯಾಶಾಲೆಗಳನ್ನು ಸ್ಥಾಪಿಸಿದರು. ಸಮಾಜ ಸೇವಾ ಸಂಘಗಳು ಪ್ರಾರಂಭಗೊಂಡವು. ಅದು ತೀರ ಆರಂಭದ ಸ್ಥಿತಿಯಲ್ಲಿ ಇದ್ದುದರಿಂದ ಈ ಸಂಘಗಳಲ್ಲಿ ಕೆಲವು ಚಿರಸ್ಥಾಯಿ ಆಗಲಿಲ್ಲ. ಹಾಗೂ ಕಾರ್ಯಕಾರಿಗಳಾಗಲಿಲ್ಲ. ಉತ್ಪನ್ನವಾದಂತೆ (ಪ್ರಾರಂಭಗೊಂಡಂತೆಯೇ) ನಷ್ಟವಾದವು.

ದೇಶದಲ್ಲಿ ಪಾಶ್ಚಿಮಾತ್ಯ ಶಿಕ್ಷಣವು ಬೆಳೆದಂತೆ, ಜನರೂ ಜಾಗ್ರತರಾಗತೊಡಗಿದರು. ಅತಿ ಪರಿಚಯದಿಂದ ಪಾಶ್ಚಿಮಾತ್ಯರ ಅಂತರಂಗವು ಗೊತ್ತಾಗಹತ್ತಿತು. ಆರಂಭಕ್ಕೆ ಯುರೋಪಿಯನ್ ಜನರೆಂದರೆ ದೇವರು, ಅವರ ಆಚಾರ–ವಿಚಾರಗಳನ್ನು ಅನುಕರಿಸಿದರೇ ನಮ್ಮ ಗತಿ ಎಂದು ತಲೆಗೇರಿದ ಮಬ್ಬು (ಹುಚ್ಚು) ಕ್ರಮಕ್ರಮವಾಗಿ ಕಡಿಮೆಯಾಗಹತ್ತಿತು. ಬ್ರಿಟೀಶರ ಬಣ್ಣದ ಮಾತುಗಳ

ಬಣ್ಣದ ಕೃತಿಗಳ ರಹಸ್ಯವು ಜನರ ಲಕ್ಷ್ಯಕ್ಕೆ ಚೆನ್ನಾಗಿ ಬರತೊಡಗಿತು. ಬ್ರಿಟಿಶರು ಇಲ್ಲಿ ಬಂದದ್ದು ಮೋಕ್ಷ ಸಾಧನೆಯ ಉದ್ದೇಶದಿಂದಲ್ಲ. ಅವರು ರಾಜಕಾರಣ ಕುಶಲರಿರುವದರಿಂದ ತಮಗೆ ಬೇಕಾದ ಮಾತನ್ನು ನಮ್ಮ ಕೈಯಿಂದಲೇ ಸವಿ ಮಾತು ಹೇಳಿ ಹೇಗೆ ಮಾಡಿಸಿಕೊಳ್ಳುತ್ತಿದ್ದರೆ ಎಂಬುವದು ಜನರ ಧ್ಯಾನಕ್ಕೆ (ಲಕ್ಷ್ಯಕ್ಕೆ) ಬಂತು. ಆಗ ದೇಶದ ಸುಧಾರಣೆಯನ್ನು ಮಾಡಬೇಕೆಂದು ಪ್ರಯತ್ನ ಪಡುವ ಬೇರೆ ಬೇರೆ ಪ್ರಾಂತದ ಕೆಲವು ಸುಶಿಕ್ಷಿತರು ಒತ್ತಟ್ಟಿಗೆ ನೆರೆದು (ಸಭೇ ಸೇರಿ) ವಿಚಾರ ವಿನಿಮಯ ಮಾಡಬೇಕೆಂದು ಗೊತ್ತುಪಡಿಸಿದರು. 1885ನೆಯ ಇಸವಿಯಲ್ಲಿ ಮುಂಬಯಿಯಲ್ಲಿ ಹೀಗೆ ಎಲ್ಲ ಭಾಗಗಳಿಂದ ಜನರು ಕೂಡಿದರು. ವಿಚಾರ ಮಾಡಿ ದೇಶಕ್ಕೆ ಅವಶ್ಯವಿರುವ ಸಂಗತಿಗಳ ಠರಾವು ಮಾಡಿದರು. ಇದೇ ಕಾಂಗ್ರೆಸ್ಸು ಎಂದಾಯಿತು. ಇದು ಮುಂದೆ ಪ್ರತಿ ವರುಷ ದೇಶದಲ್ಲಿ ಬೇರೆ ಬೇರೆ ಕಡೆಗೆ ನೆರೆಯುವದು ಎಂದು ಗೊತ್ತಾಗಿ ಆ ಕ್ರಮವೂ ಈಗಲೂ ನಡೆದುಕೊಂಡು ಬಂದಿದೆ.

ಇಂಗ್ಲೀಷರಂಥ ರಾಜಕಾರಣಿಗಳು ಇಂಗ್‌ಲೀಷರೇ ತಮ್ಮ ವಿಷಯಕ್ಕೆ ಜನರಲ್ಲಿರುವ ವಿಶ್ವಾಸವು ಹಾರಿಹೋಗದಿರಲಿಕ್ಕೆ, ಅವರು ಮಾಡಿದ ಎಷ್ಟೋ ಕುಶಲ ಪ್ರಯತ್ನಗಳು ಎಂಥವನ ಬುದ್ಧಿಗೂ ದಂಗು ಬಡಿಸುತ್ತವೆ. ಲಿಟನ್ ಎನ್ನುವ ಉದ್ದಾಮ ಅಧಿಕಾರಿಯನ್ನು ಕಳಿಸಿ ಒಮ್ಮೆ ಕೆಣಕುವದು ಬಳಿಕ ರಿಪ್ಪನ್ ಎನ್ನುವ ಉದಾರ ಮನುಷ್ಯನನ್ನು ಕಳಿಸಿ ಸಮಾಧಾನ ಮಾಡುವದು ಅವರ ಪದ್ಧತಿಯಾಗಿದೆ. ಆನರಲ್ಲಿರುವ ಹುಳುಕುಗಳನ್ನು ಶೋಧಿಸಿ ತೆಗೆದು ಅದರ ಮೇಲೆ ರಾಜ್ಯಕರ್ತರು ತಮ್ಮ ಇಮಾರತು ನಿಲ್ಲಿಸುವರು. ಹಿಂದೂ ಮುಸಲ್ಮಾನರಲ್ಲಿ ಮನಸ್ಸು ನೆಟ್ಟಗಿರದ್ದನ್ನು ಕಂಡು ಅದರ ಲಾಭ ತಕ್ಕೊಳ್ಳುವದೂ, ಬ್ರಾಹ್ಮಣ–ಬ್ರಾಹ್ಮಣೇತರರಲ್ಲಿ ಅಸಂತೋಷವಿದ್ದರೆ ಅದರ ಉಪಯೋಗ ಮಾಡಿಕೊಳ್ಳುವದು ಕುಶಲರಾದ ಇಂಗ್ಲೀಶರಿಗೆ ಬಹು ಸುಲಭವಾಗಿದೆ. ದೇಶದ ಸ್ಥಿತಿಯ ವಿಚಾರ ಮಾಡಲಿಕ್ಕೆ ದೇಶದೊಳಗಿನ ಮುಖಂಡರು ಕಾಂಗ್ರೆಸ್ಸು ಸ್ಥಾಪಿಸಿ ಅಲ್ಲಿ ಪ್ರತಿ ವರುಷ ವಿಚಾರ ವಿನಿಮಯ ಮಾಡಹತ್ತಿದರು. ಕಾಂಗ್ರೆಸ್ಸಿನ ಠರಾವುಗಳನ್ನು ತೆಗದು ಕ್ರಮವಾಗಿ ಅವುಗಳ ಭಾಷೆಯು ಹೇಗೆ ಓಜಸ್ವಿಯಾಗುತ್ತ ಹೋಗಿರುವದೆನ್ನುವದನ್ನು ನಿರೀಕ್ಷಿಸಿದರೆ, ಆ ಸಭೆಯು ದಿನದಿನಕ್ಕೆ ಕಸುವುಳ್ಳದ್ದಾಗುತ್ತ (ಶಕ್ತಿಗೊಳ್ಳುತ್ತ) ನಡೆಯಿತು ಎನ್ನುವದು ಕಂಡು ಬರುವದು.

ಈ ದೇಶಾಭಿಮಾನದ ಗಾಳಿಯು ಆರಂಭಕ್ಕೆ ಇಂಗ್ಲೀಶ ಬಲ್ಲ ಜನರಲ್ಲಿಯೇ ಇತ್ತು. ಕೆಳಗಿನ ವರ್ಗಕ್ಕೆ ದೇಶಾಭಿಮಾನವೆಂದರೆ, ಎಂಥ ವಸ್ತುವಿರುತ್ತದೆ ಎನ್ನುವದರ ಕಲ್ಪನೆಯೂ ಸಹ ಇದ್ದಿಲ್ಲ. ಸರಕಾರದ ಅಂತರಂಗವು ತಿಳಿಯದ ಕಾರಣ ಸಾಮಾನ್ಯ ಜನರು ಮಬ್ಬಿನಲ್ಲಿಯೇ ಇದ್ದರು. ಸುಶಿಕ್ಷಿತ ಜನರು ವರ್ತಮಾನ ಪತ್ರಗಳನ್ನು (ದಿನಪತ್ರಿಕೆ), ಮಾಸಪತ್ರಿಕೆಗಳನ್ನು ಪ್ರಾರಂಭಿಸಿ, ಪುಸ್ತಕಗಳನ್ನು ಬರೆದು, ವ್ಯಾಖ್ಯಾನಗಳನ್ನು ಕೊಟ್ಟು ಜನರಲ್ಲಿ ನಿಜವಾದ ಜ್ಞಾನದ ಪ್ರಸಾರ ಮಾಡಬೇಕೆಂದು ಹಲವು ವಿಧದಿಂದ ಪ್ರಯತ್ನಿಸಿದರು. ರಾಷ್ಟ್ರೀಯ ಸಭೆಯೂ ದಿನದಿಂದ ದಿನಕ್ಕೆ ಶಕ್ತಿ ಗಳಿಸಿಕೊಳ್ಳತೊಡಗಿತು. ರಾಷ್ಟ್ರ ಸಭಾ ಸ್ಥಾಪಕರಾದ ಮೊದಲಿನ ತಲೆಮಾರಿನ ಜನರು, ಹೊಸದಾಗಿ ರಾಷ್ಟ್ರ ಕಾರ್ಯಕ್ಕೆ ಆರಂಭಿಸಿದ ನೂತನ ಉತ್ಸಾಹದ ತರುಣರ ಮುಂದೆ ನಿಸ್ತೇಜರಾಗಿ ಕಾಣಹತ್ತಿದರು. ವರುಷದಲ್ಲಿ ಒಂದು ಸಾರೆ ರಾಷ್ಟ್ರೀಯ ಸಭೆಯಲ್ಲಿ ಸರಕಾರದ ಹತ್ತಿರ ಬೇಡಿಕೊಳ್ಳುವ ವಿಷಯಗಳ ಠರಾವು ಪಾಸು ಮಾಡಿ ಸ್ವಸ್ಥವಾಗಿ ಇಡೀ ವರುಷ ಕುಳಿತುಕೊಳ್ಳುವ ಪದ್ಧತಿಯು ತರುಣರಿಗೆ ಸೇರದಾಯಿತು. ವೃದ್ಧರ ಮಾರ್ಗಕ್ಕೂ ತರುಣರ ಮಾರ್ಗಕ್ಕೂ ಅಂತರ ಹೆಚ್ಚತೊಡಗಿತು.ತರುಣ ಪಕ್ಷಕ್ಕೆ **"ವೀರ ಪಕ್ಷವೆಂದೂ"**[1], ವೃದ್ಧರ ಪಕ್ಷಕ್ಕೆ **"ಮಂದ ಪಕ್ಷವೆಂದೂ"** ಹೆಸರುಗಳು ಸಿಕ್ಕವು. ಆನರಲ್ಲಿ ಹೆಚ್ಚು ಜಾಗ್ರತಿಯಾಗತೊಡಗಿತು.

[ಸಶೇಷ]

---

**ಟಿಪ್ಪಣಿ:**

1. ಇಲ್ಲಿ **'ವೀರ ಪಕ್ಷ'**ವೆಂದು ಇದ್ದ ಮೂಲ ಹೆಸರನ್ನು, ಮುಂದೆ ಉದ್ದೇಶಪೂರ್ವಕವಾಗಿಯೇ ಅವರನ್ನು ದೇಶದ್ರೋಹಿಗಳೆಂದು ಪರಿಗಣಿಸುವಂತೆ ಇರುವ ಶಬ್ದ **"ತೀವ್ರಗಾಮಿ"**ಗಳು ಎಂದು ಕರೆಯಲಾಯಿತು. ಮಂದ ಪಕ್ಷದವನ್ನು **ಮಂದಗಾಮಿ**ಗಳು ಎಂದು ಇತಿಹಾಸ ದಾಖಲುಗೊಳಿಸತೊಡಗಿತು. [ಸಂ]



ಈ ಬುವಿಯನೀಗ ಪರಮ ಪಾವಿತ್ರ್ಯಗೊಳಿಸಲೆನೆ ಹರಸಿ ಇಂದು
ಆ ಮಹಾಶಕ್ತಿ ಆವರಣಗೊಳಲು ಆಗಮಿಸಿ ಬಂದು ಇಂದು
ನೆಲೆಗೊಂಡಿತಿಲ್ಲಿ ಮೃಣ್ಮಯದ ಬದುಕನಾಧರಿಸಿಕೊಂಡು ನಿತ್ಯ
ಅನುಭವಿಸಲೆಂದು ಕಡುಕಷ್ಟ ಮತ್ತೆ ಉಚ್ಚಾಭಿಲಾಷೆ ಸತ್ಯ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 4 ಪುಟ 133)**

Photo: Imaging Savitri

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಬಿರುಗಾಳಿಯಿಂದೆತ್ತಿ ಪಿಡಿವನ್ ಜಗಮಂ, ನಿಯತಿ ಮೇಣ್ ಸ್ವರ್ಗಮುಮಂ
ಬಾರನ್ ಜಗ–ನಿರ್ಮಾತೃವಿನ ನೆರೆಯುನ್ನತ ಪೀಠಕವನ್,
ಪ್ರತೀಕ್ಷಿಸನ್ 'ಜಗದೀಶ'ನ ಚಾಚಿಹ ಹಸ್ತಕೋಸುಗಮವನ್
ಮೇಲೆತ್ತನವನಂ ಮಿಗೆ ತಾನವನ ನಶ್ವರತೆಯಿಂದಂ.

**– ಮಂದರ್ಕೆ ಮಾಧವ ಪೈ**
**(ಸಾವಿತ್ರಿ; ಸರ್ಗ 2 ಪುಟ 453)**

Photo: Imaging Savitri

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.